ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 22 ಸೋಮವಾರ 2023

ಸಂಪುಟ: 44 | ಸಂಚಿಕೆ: 36 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಬೆಂಗಳೂರಲ್ಲಿ ಭಾರೀ ಮಳೆ; ಅಂಡರ್ ಪಾಸ್‌ನಲ್ಲಿ ಮುಳುಗಿದ ವಾಹನ

ಇನ್ಫೋಸಿಸ್ ಮಹಿಳಾ ಉದ್ಯೋಗಿ ದುರಂತ ಸಾವು

- 5 ಲಕ್ಷ ಪರಿಹಾರ ಘೋಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ
- ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ; ಆಸ್ಪತ್ರೆಗೂ ತೆರಳಿ ಸಾಂತ್ವನ



ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಸಂಜೆ ಸೇಂಟ್ ಮಾರ್ಥಾಸ್‌ಗೆ ಭೇಟಿ ನೀಡಿ, ಭಾನು ರೇಖಾ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದರು.



ಬೆಂಗಳೂರು, ಮೇ 21– ಬೆಂಗಳೂರಿನಲ್ಲಿ ಕುಂಭದ್ರೋಣ ಮಳೆಯಾಗಿದೆ. ಜಲಾವೃತಗೊಂಡ ಕೆಆರ್ ವೃತ್ತದ ಅಂಡರ್ ಪಾಸ್‌ನಲ್ಲಿ ಮುಳುಗಿದ ವಾಹನದಲ್ಲಿದ್ದ ಮಹಿಳೆ ತೀವ್ರವಾಗಿ ಅಸ್ವಸ್ಥಳಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.

ಅಂಡರ್ ಪಾಸ್‌ನಲ್ಲಿ ಮುಳುಗಡೆಯಾಗಿದ್ದ ಕಾರಿನಲ್ಲಿ ಏಳು ಮಂದಿ ಇದ್ದರು. ಎಲ್ಲರನ್ನು ರಕ್ಷಣೆ ಮಾಡಲಾಗಿತ್ತು. ಈ ನಡುವೆ ತೀವ್ರವಾಗಿ ಅಸ್ವಸ್ಥಗೊಂಡಿದ್ದ ಮಹಿಳೆ ಇನ್ಫೋಸಿಸ್ ಉದ್ಯೋಗಿ ಭಾನುರೇಖಾ ಅವರನ್ನು ರಕ್ಷಿಸಿ, ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಸಿಎಂ ಸಿದ್ದರಾಮಯ್ಯ ಸೇಂಟ್ ಮಾರ್ಥಾಸ್‌ಗೆ ಭೇಟಿ ನೀಡಿದ್ದು, ▶ 8ನೇ ಪುಟಕ್ಕೆ

ಮೈಸೂರಲ್ಲಿ ಮಳೆ ಅಬ್ಬರ ಮೂವರು ಬಲಿ

ಬಿಳಿಕೆರೆ ಬಳಿ ಸಿಡಿಲು ಬಡಿದು ಇಬ್ಬರು; ಬೆಟ್ಟದಪುರದಲ್ಲಿ ವಿದ್ಯುತ್ ತಂತಿ ತುಳಿದು ಓರ್ವ ಸಾವು

■ ಧರೆಗುರುಳಿದವು ಮರಗಳು, ವಿದ್ಯುತ್ ಕಂಬಗಳು ■ ವಿದ್ಯುತ್ ತಂತಿ ತಗುಲಿ ಜಾನುವಾರು ಸಾವು ■ ಭಾರೀ ಮಳೆಯಿಂದಾಗಿ ಜನ, ವಾಹನ ಸಂಚಾರ ಅಸ್ತವ್ಯಸ್ತ

ಮೈಸೂರು, ಮೇ 21–ಮೈಸೂರು ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಗುಡುಗು–ಮಿಂಚು ಸಹಿತ ಭಾರೀ ಮಳೆಯಾಗಿದ್ದು, ಸಿಡಿಲು ಬಡಿದು ಹಾಗೂ ತುಂಡಾದ ವಿದ್ಯುತ್ ತಂತಿ ತುಳಿದು ಮೂವರು ಸಾವನ್ನಪ್ಪಿದ್ದಾರೆ.

ಬಿರುಗಾಳಿಯಿಂದಾಗಿ ಹತ್ತಾರು ಮರ ಹಾಗೂ ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಹಲವು ಮನೆಗಳ ಛಾವಣಿ ಹಾರಿಹೋಗಿವೆ. ಪರಿಣಾಮ ರಸ್ತೆ ಸಂಚಾರಕ್ಕೆ ಅಡ್ಡಿಯಾಗಿದ್ದು, ಹಲವೆಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಒಟ್ಟಾರೆ ಶನಿವಾರ ಮತ್ತು ಭಾನುವಾರ ಸುರಿದ ಮಳೆ ಭಾರೀ ಅವಾಂತರವನ್ನೇ ಸೃಷ್ಟಿಸಿದೆ.

ಸಿಡಿಲಿಗೆ ಇಬ್ಬರು ಬಲಿ: ಹುಣಸೂರು ತಾಲೂಕು ಬಿಳಿಕೆರೆ ಹೋಬಳಿ ಮಂಟಿಕೊಪ್ಪಲು ಗ್ರಾಮದ ರೈತ ಹರೀಶ್(42) ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ. ಇವರು ಜಮೀನಿಗೆ ತೆರಳಿದ್ದಾಗ ಗುಡುಗು ಸಹಿತ ಭಾರೀ ಮಳೆ ಶುರುವಾಗಿದೆ. ಕೂಡಲೇ ಅವರು ಜಮೀನಿನಲ್ಲಿದ್ದ ಸಣ್ಣ ಗುಡಿಸಿಲಿನಲ್ಲಿ ಆಶ್ರಯ ಪಡೆದಿದ್ದಾಗ ಈ ಅನಾಹುತ ಸಂಭವಿಸಿದೆ.

ವಿಷಯ ತಿಳಿದು ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಮೃತ ರೈತನ ಅಂತಿಮ ದರ್ಶನ ಪಡೆದು, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿ, ವೈಯಕ್ತಿಕ ಧನ ಸಹಾಯ ಮಾಡಿದರಲ್ಲದೆ ಸರ್ಕಾರದಿಂದ ಹೆಚ್ಚಿನ ಪರಿಹಾರ ಕೊಡಿಸುವಂತೆ ತಹಸೀಲ್ದಾರ್‌ಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ಅಧ್ಯಕ್ಷ ಆಸ್ವಾಳ್ ಕೆಂಪೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಉದಯ್, ಕಂದಾಯ ಇಲಾಖೆ ನಿರೀಕ್ಷಕ ▶ 8ನೇ ಪುಟಕ್ಕೆ



ಹರೀಶ್



ಲೋಕೇಶ್



ಸ್ವಾಮಿ

ವಿದ್ಯುತ್ ತಂತಿ ತುಳಿದು ಎಮ್ಮೆ ಸಾವು...

ರಮ್ಮನಹಳ್ಳಿ ವ್ಯಾಪ್ತಿಯ ಹಂಚ್ಯಾ ರಸ್ತೆ ಮಾರ್ಗದಲ್ಲಿ ವಿದ್ಯುತ್ ತಂತಿ ತುಳಿದು ಎಮ್ಮೆಯೊಂದು ಮೃತಪಟ್ಟಿದೆ. ಸಂಜೆ 6 ಗಂಟೆ ವೇಳೆಗೆ ಗಾಳಿಯಿಂದ ತುಂಡಾಗಿ ನೆಲಕ್ಕೆ ಬಿದ್ದಿದ್ದ ವಿದ್ಯುತ್ ತಂತಿ ತಗುಲಿ ಈ ಅನಾಹುತ ಸಂಭವಿಸಿದೆ ಎಂದು ಚೆಸ್ಕಾಂ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯ ಮುಡಾ ಎದುರು ಬೃಹತ್ ಮರವೊಂದು ಬುಡ ಸಮೇತ ನೆಲಕ್ಕುರುಳಿದೆ.

ಝೀರೋ ಟ್ರಾಫಿಕ್ ಸೌಲಭ್ಯ ಬೇಡ; ಹಾರ ತುರಾಯಿ ಬೇಡವೇ ಬೇಡ

- ಸಿಎಂ ಸಿದ್ದರಾಮಯ್ಯ ಮನವಿ
- ಪ್ರೀತಿ–ಗೌರವ ಕಾಣಿಕೆ ರೂಪದಲ್ಲಿ ನೀಡುವುದಾದರೆ ಪುಸ್ತಕ ನೀಡಿ



ಬೆಂಗಳೂರು, ಮೇ 21– ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮರುದಿನ ಸಿಎಂ ಸಿದ್ದರಾಮಯ್ಯ ಹಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಇದರ ಭಾಗವಾಗಿ ಇಂದು ಸಿಎಂಗೆ ಇರುವ ಝೀರೋ ಟ್ರಾಫಿಕ್ ಸೌಲಭ್ಯ ಹಿಂತೆಗೆದುಕೊಳ್ಳುವಂತೆ ಮನವಿ ಮಾಡುವುದರ ಜೊತೆಗೆ, ▶ 8ನೇ ಪುಟಕ್ಕೆ

PUBLIC NOTICE

TO WHOM SO EVER IT MAY CONCERN

The owners of the lands bearing Sy. Nos. 15/1-2, 18/4, 19/1-2, 20/1-2-3, 27/1-2-3-4, 32, 38/1-2, 40/1-2- 3 and 41/2 of Dattagalli Village, Kasaba Hobli, Mysore Taluk and District, had formed a Layout and laid out sites, We (the members of the association) had purchased sites carved out in those lands and built houses. The Mysore Urban Development Authority demolished the structures and took possession of the lands. In this regard, We, the aggrieved persons and the Association formed by us viz., Sri Chamundeshwari Nagara Sarvodaya Sangha (R) filed WP No.51523/2015, wherein it was brought to the notice of the Hon'ble Court about Government Order No.NaAaE 113 BhooBaDi 97 Bangalore dated 11/07/1997, whereby MUDA was directed to regularize and allot sites to the members of the Sangha subject to certain conditions. However, the MUDA stated that the said acquisition proceedings initiated in respect of the said lands is the subject matter of WA No.437/2014 filed by one Sri Veerkumar Jain, the W.P.No.51523/2015, filed by us, came to be dismissed on 06/12/2016, observing that so long as the acquisition proceedings are not finalized, the MUDA cannot be faulted in refusing the regularization of lands in question. We challenged the said order dated 06/12/2016 in W.A No.5681/2017 which was also dismissed on 27/2/2023 on the same ground. It is pertinent hereto state that the W.A No.437/2014 also came to be dismissed 27/02/2023 and the acquisition proceeding were upheld.

We, submitted a representation to implement the Government Order No.NaAaE 113 BhooBaDi 97 Bangalore dated 11/07/1997 and also filed a Review Petition No.135/2023 for review of the order dated 27/02/2023 in W.A No.5681/2017.

In view of the above, the subject regarding compliance of the Government Order No.NaAaE 113 BhooBaDi 97 Bangalore dated 11/07/1997, was placed before the MUDA Board Meeting on 21/03/2023, vide Subject No.13(4) and after detailed discussions, the Board passed a resolution to implement that Government Order.

We, filed the resolution copy in Review Petition No.135/2023, which was pending before the Hon'ble High Court and taking the same into consideration, the Hon'ble High Court disposed the Review Petition on 19.04.2023 and held that it would be open to MUDA to take action for allotment of sites in favour of petitioners in WP No.51523/2015. We the members of the association have made a representation to the Commissioner, MUDA for the implementation of the orders of the Review Petition No.135/2023, dated 19.04.2023, and take necessary steps as required.

We, the members of the association have now reliably learnt that some members of the General Public (who are short of information and have no knowledge of the latest developments) are spreading false propaganda and are misleading the officials there by causing delay in the implementation of the orders of the Review Petition No.135/2023, dated 19.04.2023.

Hence, We the members of the Association do hereby call upon the General Public not to deal with the said Sri Veerkumar Jain and Others, who have not got any right, title or interest in the said lands, and who have been making some baseless allegations, misleading and spreading false propaganda on the basis of some wrong information's. We further warn the General Public at large, that if their information is not supported by any documentary proof, We will be forced to take necessary legal action against such erring persons, whoever come in the way of the implementation of Orders of the Review Petition No.135/2023, dated 19.04.2023, as contemplated under law before the appropriate forum.

Sri Chamundeshwari Nagara Sarvodaya Sangha (R)
R.No.75/85, Dattagalli, Badavane, Mysore.

President	Secretary
Sri H.V.Vrushabendrappa	Sri C.R.Bojaraju

Place: Mysore | Dated: 21.05.2023

2,000 ರೂ. ನೋಟು ವಿನಿಮಯಕ್ಕೆ ಮನವಿ, ಗುರುತಿನ ಚೀಟಿ ಕೊಡಬೇಕಿಲ್ಲ: ಎಸ್‌ಬಿಐ ಸ್ಪಷ್ಟನೆ



ನವದೆಹಲಿ, ಮೇ 21– 2,000 ರೂ ಮುಖ ಬೆಲೆಯ ನೋಟು ವಿನಿಮಯಕ್ಕೆ ಮನವಿ ಪತ್ರ ಅಥವಾ ಗುರುತಿನ ಚೀಟಿ ಕೊಡಬೇಕಿಲ್ಲ ಎಂದು ದೇಶದ ಅತೀ ದೊಡ್ಡ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಸ್ಪಷ್ಟನೆ ನೀಡಿದೆ.

ಭಾರತೀಯ ರಿಸರ್ವ್ ಬ್ಯಾಂಕ್ 2000 ರೂ. ಮುಖ ಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂದಕ್ಕೆ ಪಡೆಯುವ ಕುರಿತು ಘೋಷಣೆ ಹೊರಡಿಸಿದ ಬೆನ್ನಲ್ಲೇ ಈ ಹಿಂದಿನ ನೋಟ್ ಬ್ಯಾನ್ ರೀತಿಯಲ್ಲಿ 2000 ರೂ. ಮುಖ ಬೆಲೆಯ ನೋಟುಗಳ ಬದಲಾವಣೆಗೆ ಬ್ಯಾಂಕ್‌ಗಳ ಸುತ್ತ ಬೇಕಾಗುತ್ತದೆ. ಗುರುತಿನ ಚೀಟಿ ಹಿಡಿದು ಅಲೆಯಬೇಕಾಗುತ್ತದೆ ಎಂಬ ಪ್ರಶ್ನೆಗಳಿಗೆ ಎಸ್‌ಬಿಐ ಭಾನುವಾರ ಸ್ಪಷ್ಟನೆ ನೀಡಿದೆ.

ಯಾವುದೇ ಮನವಿ ಚೀಟಿ ಇಲ್ಲದೇ ಗ್ರಾಹಕರು ಏಕಕಾಲಕ್ಕೆ 20,000 ರೂಗಳ ವರೆಗೆ 2,000 ಮುಖಬೆಲೆಯ ನೋಟುಗಳನ್ನು ವಿನಿಮಯ ಮಾಡಿಕೊಳ್ಳಲು ಅವಕಾಶವಿದೆ. ವಿನಿಮಯದ ಸಮಯದಲ್ಲಿ ಗ್ರಾಹಕರು ಯಾವುದೇ ಗುರುತಿನ ಚೀಟಿಯನ್ನು ಒದಗಿಸುವ ಅಗತ್ಯ ಇಲ್ಲ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಪಷ್ಟಪಡಿಸಿದೆ. ಗ್ರಾಹಕರು 2,000 ರೂ ನೋಟುಗಳನ್ನು ವಿನಿಮಯ ಮಾಡಿಕೊಳ್ಳುವ ಅಥವಾ ಠೇವಣಿ ಇರಿಸುವ ವೇಳೆ ಅರ್ಜಿ, ಮನವಿ ಸಲ್ಲಿಸಬೇಕೇ ಎಂಬ ಅನುಮಾನಗಳು ಜನರಲ್ಲಿ ಮೂಡಿವೆ. ಈ ಅನುಮಾನಗಳನ್ನು ಪರಿಹರಿಸಲು ಎಸ್‌ಬಿಐ ಈ ಸ್ಪಷ್ಟನೆ ನೀಡಿದೆ. ಆರ್‌ಬಿಐ ಶುಕ್ರವಾರ 2,000 ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವುದಾಗಿ ಘೋಷಿಸಿತ್ತು. ಆದರೆ, 2,000 ಮುಖಬೆಲೆಯ ನೋಟುಗಳು ಕಾನೂನುಬದ್ಧ ಮಾನ್ಯತೆ ಹೊಂದಿರುವುದಾಗಿಯೂ ಹೇಳಿಕೆಯಲ್ಲಿ ತಿಳಿಸಿತ್ತು.



ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಿದ್ದರಾಮಯ್ಯ ಅವರನ್ನು ವಿಧಾನಪರಿಷತ್ ಶಾಸಕ ಡಾ.ಡಿ. ತಿಮ್ಮಯ್ಯ ಪುಷ್ಪಗುಚ್ಛ ನೀಡಿ, ಅಭಿನಂದಿಸಿದರು. ಈ ವೇಳೆ ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ, ಮುಖಂಡ ಹರೀಶ್ ಮೊಗಣ್ಣ ಉಪಸ್ಥಿತರಿದ್ದರು.

ಐದು ವರ್ಷ ಸರ್ಕಾರ ಗ್ಯಾರಂಟಿ: ಕೋಡಿಶ್ರೀಗಳ ಭವಿಷ್ಯ



ಡಿ.ಕೆ.ಶಿವಕುಮಾರ್‌ಗೂ ಮುಖ್ಯಮಂತ್ರಿ ಯೋಗ

ಮಂಡ್ಯ, ಮೇ 21– ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರವು ಜನತೆಯ ಭಾವನೆಗಳಿಗೆ ಸ್ಪಂದಿಸಿ ಕೆಲಸ ಮಾಡುವ ಮೂಲಕ ಜನಾದೇಶದ ತೀರ್ಪಿಗೆ ಅನುಗುಣವಾಗಿ ಐದು ವರ್ಷಗಳನ್ನು ಪೂರ್ಣಗೊಳಿಸಲಿದೆ ಎಂದು ಅರಸೀಕೆರೆಯ ಹಾರನಹಳ್ಳಿ ಕೋಡಿ ಮಠದ ಪೀಠಾಧಿಪತಿಗಳಾದ ಡಾ.ಶ್ರೀ ಸದಾಶಿವ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಡಿಕೆಶಿಗೂ ಮುಖ್ಯಮಂತ್ರಿ ಯೋಗ: ಕೆಆರ್.ಪೇಟೆ ಪಟ್ಟಣದಲ್ಲಿ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಉಪಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೂ ಮುಖ್ಯಮಂತ್ರಿಯಾಗುವ ಯೋಗವಿದೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಪಡೆಯಲು ಡಿಕೆಶಿ ಕೊಡುಗೆಯೂ ಇದೆ. ಮಂತ್ರಿ ಮಂಡಲ ವಿಸ್ತರಣೆಯಲ್ಲಿ ಗುಂಪುಗಾರಿಕೆಗೆ ಅವಕಾಶ ಮಾಡಿಕೊಡದೇ ಪ್ರಾದೇಶಿಕವಾರು, ಜಿಲ್ಲಾವಾರು ಸೂಕ್ತ ಪ್ರಾತಿನಿಧ್ಯ ನೀಡಿ ಸಂಪುಟ ವಿಸ್ತರಣೆ ಮಾಡಬೇಕು ಎಂದು ಸಲಹೆ ನೀಡಿದರು.

ಸಿಎಂ ಆಗ್ತೀರಿ ಎಂದು ಸಿದ್ದರಾಮಯ್ಯಗೆ ಹೇಳಿದ್ದೆ: ಅರಸೀಕರೆಗೆ ಪ್ರಚಾರಕ್ಕೆ ಆಗಮಿಸಿದ್ದ ಸಿದ್ದರಾಮಯ್ಯ ಅವರಿಗೆ ನಿಮಗೆ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ಯೋಗವಿದೆ ಎಂದು ಹೇಳಿದ್ದೆ. ಅದು ನಿಜವಾಗಿದೆಯಲ್ಲದೇ ಕಾಂಗ್ರೆಸ್ ದೊಡ್ಡ ಪಕ್ಷವಾಗಿ ಯಾರದೇ ಹಂಗಿಲ್ಲದೇ ಸ್ವತಂತ್ರವಾಗಿ ಅಧಿಕಾರ ಹಿಡಿಯಲಿದೆ ಎಂದೂ ನುಡಿದಿದ್ದೆ ಎಂದು ತಿಳಿಸಿದರು.

ಲೋಕಸಭೆ ಚುನಾವಣೆ ನಂತರ ಕಂಟಕ: ಸದ್ಯಕ್ಕೆ ರಾಜ್ಯ ಸರ್ಕಾರಕ್ಕೆ ಯಾವುದೇ ಕಂಟಕವಿಲ್ಲ. ಲೋಕಸಭಾ ಚುನಾವಣೆಯ ನಂತರ ಸಣ್ಣ ಕಂಟಕ ಉಂಟಾಗಲಿದೆ. ಅದನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ ಎಂದು ಕೋಡಿಶ್ರೀಗಳು ಮಾರ್ಮಿಕವಾಗಿ ನುಡಿದರು.

ಇಲವಾಲದಲ್ಲಿ ಕಾಂಗ್ರೆಸ್ ವಿಜಯೋತ್ಸವ



ಮೈಸೂರು, ಮೇ 21– ಚಾಮುಂಡೇಶ್ವರಿ ಕ್ಷೇತ್ರದ ಇಲವಾಲದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯರವರು, ಉಪಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್‌ರವರು ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಕೆಪಿಸಿಸಿ ಸದಸ್ಯ ಕೆ.ಮರೀಗೌಡ ನೇತೃತ್ವದಲ್ಲಿ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಸಿಹಿ ಹಂಚಿ, ಪಟಾಕಿ ಸಿಡಿಸಿ, ಮೆರವಣಿಗೆ ನಡೆಸಿ ವಿಜಯೋತ್ಸವ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕೆ.ಮರೀಗೌಡ ಮಾತನಾಡಿ, ರಾಜ್ಯದಲ್ಲಿ ನಿರೀಕ್ಷೆಗೂ ಮೀರಿ ಜನರು ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡಿದ್ದಾರೆ. ಬಿ.ಜೆ.ಪಿ. ಸರ್ಕಾರದ ಭ್ರಷ್ಟಾಚಾರ, ಹಗರಣ, ಬೆಲೆ ಏರಿಕೆಯಿಂದ ಬೇಸತ್ತಿದ್ದ ಜನರು ನುಡಿದಂತೆ ನಡೆಯುವ ಕಾಂಗ್ರೆಸ್ ಪಕ್ಷದ 5 ಗ್ಯಾರಂಟಿ ಕಾರ್ಯಕ್ರಮಗಳನ್ನು ನಂಬಿ ಬೆಂಬಲಿಸಿದ್ದಾರೆ. ಈ 5 ಗ್ಯಾರಂಟಿಗಳನ್ನು ಸಿದ್ದರಾಮಯ್ಯರವರ ನೇತೃತ್ವದ ಸರ್ಕಾರ ಖಂಡಿತ ಜಾರಿಗೊಳಿಸುತ್ತದೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ನಮಗೆ ಹಿನ್ನಡೆಯಾಗಿರಬಹುದು. ಆದರೆ 80 ಸಾವಿರ ಮತಗಳನ್ನು ನಮ್ಮ ಪಕ್ಷಕ್ಕೆ ಜನರು ನೀಡಿದ್ದಾರೆ. ಆ ಜನರ ಹಿತವನ್ನು ನಮ್ಮ ಪಕ್ಷ ಕಾಪಾಡುತ್ತದೆ ಎಂದ ಅವರು, ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ 5 ವರ್ಷ ಪೂರ್ಣಗೊಳಿಸಲಿದ್ದು, 2024ರ ಲೋಕಸಭೆ ಚುನಾವಣೆಯಲ್ಲಿಯೂ ಕಾಂಗ್ರೆಸ್ ಪಕ್ಷ ಜಯಭೇರಿ ಭಾರಿಸಲಿದೆ ಎಂದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಅಧ್ಯಕ್ಷ ಕೂರ್ಗಳ್ಳಿ ಮಹಾದೇವ, ಎಪಿಎಂಸಿ ಮಾಜಿ ಅಧ್ಯಕ್ಷ ಶಿವಣ್ಣ, ಜಿಪಂ ಮಾಜಿ ಸದಸ್ಯ ಅರುಣ್‌ಕುಮಾರ್, ಗ್ರಾಪಂ ಅಧ್ಯಕ್ಷ ನಾಗವಾಲ ನರೇಂದ್ರ, ಮುಖಂಡರಾದ ಡಾ|| ಪ್ರಕಾಶ್, ಹಳೆಕಾಮನಕೊಪ್ಪಲು ಕರೀಗೌಡ, ವೈ.ಸಿ.ಸ್ವಾಮಿ, ರಾಜೇಶ್, ಕರಕನಹಳ್ಳಿ ಮಂಜು, ಸೆಂಟ್ರಿಂಗ್ ರವಿಕುಮಾರ್, ಮೆಹಬೂಬ್ ಪಾಷ, ರಘು, ರಟ್ನಳ್ಳಿ ಮಹದೇವ, ಕುಮಾರ್, ಬಿ.ರವಿ, ರಮೇಶ್, ರಾಣಿ ಶಿವಣ್ಣ, ಮಂಜುಳ, ರಾಮು, ಓಲೆ ಸಿದ್ದು, ಗೀತಾ ಪುಟ್ಟೇಗೌಡ, ಮಹದೇವ ಇದ್ದರು.



ಜೆಎಸ್‌ಎಸ್ ಪಾಲಿಟೆಕ್ನಿಕ್‌ನಲ್ಲಿ ನಡೆದ ಜಿಲ್ಲಾ ಮಟ್ಟದ ಅಂತರ ಪಾಲಿಟೆಕ್ನಿಕ್ ವಾಲಿಬಾಲ್ ಮತ್ತು ಥ್ರೋಬಾಲ್ ಪಂದ್ಯಾವಳಿಯಲ್ಲಿ ಜೆಎಸ್‌ಎಸ್ ಪಾಲಿಟೆಕ್ನಿಕ್ ಮೈಸೂರು ತಂಡದವರು ರನ್ನರ್ ಅಪ್ ಆಗಿ ಆಯ್ಕೆಗೊಂಡಿದ್ದಾರೆ. ಚಿತ್ರದಲ್ಲಿ ಶ್ರೀಮತಿ ಆಶಾ ಕುಲಕರ್ಣಿ, ಎಚ್.ಜಿ.ಲೋಕೇಶ್, ಎ.ಎಸ್.ನಾಗರಾಜ, ಕೆ.ಬಿ.ಚಂದ್ರಶೇಖರಮೂರ್ತಿ ಹಾಗೂ ಇತರರನ್ನು ಕಾಣಬಹುದು.

ಸಾಹಿತಿ ಎಸ್.ರಾಮಪ್ರಸಾದ್–'೮೦' ಜನ್ಮದಿನದ ಅಭಿನಂದನೆ

ಜೀವನ ಪ್ರೀತಿ, ಜನ ಪ್ರೀತಿ ರಾಮಪ್ರಸಾದರ ವ್ಯಕ್ತಿತ್ವದ ಅರ್ಥಪೂರ್ಣ ಸಂಗತಿ

ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ



ಸರಸ್ವತಿಪುರಂನ ರೋಟರಿ ಮೈಸೂರು ಪಶ್ಚಿಮ ಸಭಾಂಗಣದಲ್ಲಿ ಸಾಹಿತಿ ಎಸ್.ರಾಮಪ್ರಸಾದ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು,ಮೇ 21(ಪಿಎಂ)– ಜೀವನ ಪ್ರೀತಿ ಮತ್ತು ಜನ ಪ್ರೀತಿ ಎಂಬುದು ಹಿರಿಯ ವಿಜ್ಞಾನ ಲೇಖಕ ಎಸ್.ರಾಮಪ್ರಸಾದ್ ಅವರ ವ್ಯಕ್ತಿತ್ವದ ಪ್ರಮುಖ ಅಂಶಗಳು. ಇವೇ ಅವರ ಶಕ್ತಿ ಎಂದು ಕೆಎಸ್‌ಐಐಡಿಸಿ (ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮ) ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಹೇಳಿದರು.

ಮೈಸೂರಿನ ಸರಸ್ವತಿಪುರಂನ ರೋಟರಿ ಮೈಸೂರು ಪಶ್ಚಿಮ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಹೊಯ್ಸಳ ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾಹಿತಿ ಎಸ್.ರಾಮಪ್ರಸಾದ್ ಅವರ ಅಭಿನಂದನಾ ಸಮಾರಂಭದಲ್ಲಿ (80ನೇ ಜನ್ಮದಿನದ ಸಂಭ್ರಮ ಕಾರ್ಯಕ್ರಮ) ಎಸ್.ರಾಮಪ್ರಸಾದ್ ಅವರನ್ನು ಅಭಿನಂದಿಸಿ, ಅವರ 4 ಕೃತಿಗಳನ್ನು ಬಿಡುಗಡೆಗೊಳಿಸಿ, ಅಭಿನಂದನಾ ಭಾಷಣ ಮಾಡಿದರು.

ರಾಮಪ್ರಸಾದ್ ಅಪಾರ ಜನರ ಪ್ರೀತಿ ಹೊಂದಿದ್ದಾರೆ. ಒಬ್ಬ ವ್ಯಕ್ತಿ ತನ್ನ ಜೀವಿತ ಅವಧಿಯಲ್ಲಿ ಇಷ್ಟೊಂದು ಕೆಲಸ ಮಾಡಲು ಸಾಧ್ಯವೇ ಎನ್ನುವ ಪ್ರಶ್ನೆ ಇವರ ವಿಚಾರದಲ್ಲಿ ಮೂಡುತ್ತದೆ. ಅವರ ಹೆಸರಿನಲ್ಲೇ 'ರಾಮ' ಮತ್ತು 'ಪ್ರಸಾದ' ಎರಡೂ ಇದೆ. ನನ್ನ ಪ್ರಕಾರ ಅವರು ಮೈಸೂರಿಗೆ ರಾಮನ ಪ್ರಸಾದವೇ ಆಗಿದ್ದಾರೆ. ಆ ಮಟ್ಟಿಗೆ ಅವರು ತಮ್ಮ ಜೀವನದಲ್ಲಿ ಕಾಯಕ ಮಾಡಿದ್ದಾರೆ. ಯಾವುದೇ ಕಳಂಕ, ವಿವಾದ ಅವರ ಹತ್ತಿರಕ್ಕೆ ಸುಳಿದಿಲ್ಲ. ಅಧಿಕಾರ, ಅಂತಸ್ತು, ಹೆಸರು ಲಭಿಸುತ್ತಿದ್ದಂತೆ 'ಅಹಂ' ಎಂಬ ಕೋಟೆ ಕಟ್ಟಿಕೊಳ್ಳುವವರೇ ಹೆಚ್ಚು. ಆದರೆ ಇವರು 'ಅಹಂ' ಎಂಬ ಕೋಟೆ ಕಟ್ಟಿಕೊಳ್ಳದೇ ಅರ್ಥಪೂರ್ಣ ಬದುಕು ಕಟ್ಟಿಕೊಂಡಿದ್ದಾರೆ. ತನ್ನ ಜೊತೆಗೆ ಇರುವವರ ಬದುಕಿಗೂ ಮೌಲ್ಯಗಳನ್ನು ಕಲ್ಪಿಸಿದ್ದಾರೆ ಎಂದರು.

'ಈ 4 ದಿನಗಳ ಬದುಕಿನಲ್ಲಿ ಹೊಂದಿಕೊಂಡು ಬದುಕುವುದು ಎಷ್ಟು ಕಷ್ಟ' ಎಂಬುದು ಅದ್ಭುತವಾದ ವೇದಾಂತ. ಈ ನಿಟ್ಟಿನಲ್ಲಿ 80 ವರ್ಷದ ರಾಮಪ್ರಸಾದ್ ಸಮಾಜದೊಂದಿಗೆ ಹೊಂದಿಕೊಂಡು ಸಾಗಿರುವುದು ಸಾಮಾನ್ಯ ಸಂಗತಿಯಲ್ಲ. ಅವರ 'ಮನೆಯೊಂದು ಬಾಗಿಲೈದು' ಪುಸ್ತಕ ಓದುವಾಗ ಕಣ್ಣಿನಲ್ಲಿ ನೀರು ಬಂದಿತು. ಬಹಳ ಅಂತಃಕರಣದಿಂದ ಬರೆದ ಪುಸ್ತಕ ಇದು. ಈ ಪುಸ್ತಕದಲ್ಲಿ ಅವರು ತಮ್ಮ ಮನೆಯನ್ನು ಅನಾಥಾಶ್ರಮ ಎಂದು ಹೇಳಿಕೊಂಡಿರುವುದನ್ನು ಓದುವಾಗ ಕಣ್ಣುಗಳು ತುಂಬಿ ಬಂದವು ಎಂದು ಭಾವುಕರಾದರು.

80 ವರ್ಷದ ರಾಮಪ್ರಸಾದ್ ಅವರ ಮನೆಯಲ್ಲಿ ಇವರಿಗಿಂತ ಹಿರಿಯರಾದ ಅವರ ಅಕ್ಕಂದಿರಿದ್ದಾರೆ. ವೃದ್ಧರ ಬದುಕಿನ ಕಷ್ಟದ ಕಲ್ಪನೆ ಬಹುಶಃ ಅನೇಕರಿಗೆ ಇಲ್ಲ. ಅದು ಅನುಭವಿಸಿದವರಿಗೇ ಗೊತ್ತು. ಮಕ್ಕಳು ಉದ್ಯೋಗಕ್ಕಾಗಿ ದೂರದ ನಗರಗಳಿಗೆ ಹೋಗುವ ಕಾರಣ ನಗರ ಪ್ರದೇಶದಲ್ಲಿನ ಮನೆಗಳು ವೃದ್ಧಾಶ್ರಮಗಳಂತಾಗುವುದು ಹೆಚ್ಚಾಗುತ್ತಿದೆ. ಇಂತಹ ಮನೆಗಳಲ್ಲಿ ವಯೋವೃದ್ಧರ ಕಷ್ಟ ನೋಡಲಾಗದು. ರಾಮಪ್ರಸಾದ್ ಇಂತಹ ಪರಿಸ್ಥಿತಿ ಬಗ್ಗೆ ನಕಾರಾತ್ಮಕವಾಗಿ ಚಿಂತನೆ ಮಾಡಿದವರಲ್ಲ ಎಂದರು.

ಯಾರ ಕೇಡನ್ನೂ ಬಯಸದ ರಾಮಪ್ರಸಾದ್, ಎಲ್ಲರ ಹಿತ ಬಯಸಿದವರು. ವಿಶ್ವಮಾನವರಾಗಿ ಹುಟ್ಟಿ, ವಿಶ್ವಮಾನವರಾಗಿಯೇ ಬದುಕಿ, ವಿಶ್ವ ಕುಟುಂಬಿಕರಾಗಿ ಇದ್ದಾರೆ. ಮುಂದಿನ ಪೀಳಿಗೆಗೆ ಇವರ ಬದುಕು ಆದರ್ಶಪ್ರಾಯ. 80 ವರ್ಷ ಪೂರೈಸಿರುವ ಅವರು ದೈಹಿಕವಾಗಿ ಸ್ವಲ್ಪ ಅಶಕ್ತರಾಗಿ ಕಂಡರೂ ಕ್ರಿಯಾಶೀಲರು. ಮತ್ತೆರಡು ಪುಸ್ತಕಗಳನ್ನು ಬರೆಯಲು ಪ್ರಾರಂಭಿಸಿದ್ದಾರೆ. ತಮ್ಮ ಜೀವನದ ಪ್ರತಿಯೊಂದು ಘಟನೆಗಳನ್ನು ಬರೆಯುವ ಜೊತೆಗೆ ತಮ್ಮ ಆತ್ಮೀಯರಿಂದಲೂ ಬರೆಸಿ ಡಾಕ್ಯುಮೆಂಟೇಷನ್ ಮಾಡುವ ಪ್ರವೃತ್ತಿ ಹೊಂದಿರುವ ರಾಮಪ್ರಸಾದ್, ಶತಾಯುಷಿಗಳಾಗಲಿ. ಆ ಕಾರ್ಯಕ್ರಮಕ್ಕೂ ನಾವೆಲ್ಲ ಬರುವಂತಾಗಬೇಕು ಎಂದು ಹಾರೈಸಿದರು.

> "ರಾಮಪ್ರಸಾದ್ ಅವರಲ್ಲಿ ಎರಡು ನೋವುಗಳು ಇವೆ. ಗಣಿತಶಾಸ್ತ್ರದಲ್ಲಿ ಎಂಎಸ್‌ಸಿ ಪದವಿ ಪೂರೈಸಿ, ವಿವಿಯಲ್ಲಿ ಕೆಲಸ ಮಾಡುವ ಜೊತೆಗೆ ಅನೇಕರಿಗೆ ಸಂಶೋಧನೆಗೆ ಅಗತ್ಯ ಮಾರ್ಗದರ್ಶನ ನೀಡಿದ್ದಾರೆ. ಆದರೆ ಸ್ವತಃ ಅವರೇ ಪಿಹೆಚ್.ಡಿ ಮಾಡಲಾಗಲಿಲ್ಲ. ಈ ಬಗ್ಗೆ ಕೇಳಿದರೆ ಮಾಡಲಾಗಲಿಲ್ಲ ಎಂದಷ್ಟೇ ಹೇಳುತ್ತಾರೆ. ಮತ್ತೊಂದು, ರಾಮಪ್ರಸಾದ್ ಬ್ರಹ್ಮಚಾರಿ. ಅವರೊಬ್ಬರು ಮಾತ್ರವಲ್ಲದೇ ಅವರ ಇಡೀ ಕುಟುಂಬದವೆಲ್ಲರೂ ಬ್ರಹ್ಮಚಾರಿಗಳೇ. ಇದು ಎಲ್ಲರನ್ನೂ ಕಾಡುವ ಪ್ರಶ್ನೆ. **–ಡಾ.ಎಂ.ಆರ್.ರವಿ, ಕೆಎಸ್‌ಐಐಡಿಸಿ ನಿರ್ದೇಶಕ**

> "ರಾಮಪ್ರಸಾದ್ ಅವರು ಎಲ್ಲರಿಗೂ ಚಿರಪರಿಚಿತರು. ಮೂಲತಃ ಭೌತಶಾಸ್ತ್ರದ ವಿಜ್ಞಾನಿಗಳು. ಮೈಸೂರು ವಿವಿಯ ವಿಶ್ವಕೋಶದ ವಿಜ್ಞಾನ ವಿಭಾಗದಲ್ಲಿ ಸಂಪಾದಕರಾಗಿ ಸೇವೆ ಸಲ್ಲಿಸಿದವರು. ವಿಜ್ಞಾನಿಗಳು, ವನ್ಯಜೀವಿ ಛಾಯಾಗ್ರಾಹಕರು ಮಾತ್ರವಲ್ಲದೆ, ಸಾಹಿತಿಗಳೂ ಆದ ಅವರ ಬದುಕು ವೈವಿಧ್ಯಮಯ. ಬಹುಮುಖ ವ್ಯಕ್ತಿತ್ವದ ರಾಮಪ್ರಸಾದ್ ಶತಾಯುಷಿಗಳಾಗಿ ಬಾಳಲಿ. **–ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ**

ಇದಕ್ಕೂ ಮುನ್ನ ಎಸ್.ರಾಮಪ್ರಸಾದ್ ಅವರನ್ನು ಹಿತೈಷಿಗಳು, ಅಭಿಮಾನಿಗಳೂ ಪ್ರತ್ಯೇಕವಾಗಿ ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಅಭಿನಂದನಾ ಗ್ರಂಥ 'ರಾಮಪ್ರಭೆ', 'ಮನೆಯೊಂದು ಬಾಗಿಲೈದು', 'ಕೇಳು ಜಾಣತಮ್ಮನ ಮುಕ್ತಕಗಳು', 'ಆಲ್ವಾರ್ಸ್ ಅಂಡ್ ಶ್ರೀರಾಮಾನುಜಾಚಾರ್ಯ' ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೃತಿಗಳ ಕುರಿತು ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತು ಮುಕ್ತ ವಿವಿ ಕನ್ನಡ ಪ್ರಾಧ್ಯಾಪಕಿ ಡಾ.ಜ್ಯೋತಿ ಶಂಕರ್ ಮಾತನಾಡಿದರು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.





ಮೈಸೂರಿನ ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಈ ವೇಳೆ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್ ಇನ್ನಿತರರಿದ್ದಾರೆ. ಮಧ್ಯದ ಚಿತ್ರದಲ್ಲಿ ಅರಕಲಗೂಡು ನೂತನ ಶಾಸಕ ಎ.ಮಂಜು ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀಗಳಿಂದ ಆಶೀರ್ವಾದ ಪಡೆದರು. ಈ ವೇಳೆ ನಿವೃತ್ತ ಪ್ರಾಧ್ಯಾಪಕ ಪ್ರೊ.ಪಿ.ಎಂ.ಮಹದೇವಸ್ವಾಮಿ ಉಪಸ್ಥಿತರಿದ್ದರು. ಕೊನೆ ಚಿತ್ರದಲ್ಲಿ ಸುತ್ತೂರು ಮಠಕ್ಕೆ ಭೇಟಿ ನೀಡಿದ್ದ ಸೆಂಟ್ರಲ್ ಟಿಬೆಟನ್ ಅಡ್ಮಿನಿಸ್ಟ್ರೇಷನ್‌ನ ವಾರ್ತಾ ಮತ್ತು ಅಂತಾರಾಷ್ಟ್ರೀಯ ಸಂಬಂಧಗಳ ಸಚಿವರಾದ ನಾರ್ಸಿನ್ ಡೊಲ್ಮಾ ಅವರನ್ನು ಶ್ರೀಗಳು ಅಭಿನಂದಿಸಿ, ಆಶೀರ್ವದಿಸಿದರು. ಈ ವೇಳೆ ದೆಹಲಿಯಲ್ಲಿರುವ ಇಂಡೊ–ಟಿಬೆಟನ್ ಕೋ–ಆರ್ಡಿನೇಷನ್ ಸೆಂಟರ್‌ನ ಸಂಚಾಲಕ ತಾಶಿ ಡೆಕ್ಯಿ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಮೇ 21–ಮೈಸೂರಿನ ವೀರಶೈವ ಅನಾಥಾಲಯ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ವಿದ್ಯಾರ್ಥಿನಿಲಯದ ಪ್ರವೇಶಾತಿಗಾಗಿ 2023–24ನೇ ಸಾಲಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮೀಣ ಭಾಗದ ವೀರಶೈವ ವಿದ್ಯಾರ್ಥಿಗಳಿಗೆ 25ರವರೆಗೆ ಅರ್ಜಿಗಳನ್ನು ವಿತರಿಸಲಾಗುವುದು. ಹೆಚ್ಚು ಅಂಕ ಪಡೆದ ಬಡ ವಿದ್ಯಾರ್ಥಿಗಳನ್ನು ಆದ್ಯತೆ ಮೇಲೆ ಪರಿಗಣಿಸಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಮೇ 25ರೊಳಗೆ ಕಚೇರಿಗೆ ಸಲ್ಲಿಸುವುದು. ಮಾಹಿತಿಗೆ ಮೊ. 9916650106.

ರಾಜಕೀಯ ಜೀವನ ಅಂತ್ಯ ಆತಂಕ! ಸ್ಪೀಕರ್ ಹುದ್ದೆಗೆ ಮುಂದೆ ಬಾರದ ನಾಯಕರು!

ಬೆಂಗಳೂರು: ಕರ್ನಾಟಕದ ಹಿರಿಯ ಕಾಂಗ್ರೆಸ್ ನಾಯಕರು ತಮಗೆ ನೀಡಲಾಗುತ್ತಿರುವ ಸ್ಪೀಕರ್ ಸ್ಥಾನದ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಿದ್ಧರಿಲ್ಲ. ಬಹುತೇಕ ಎಲ್ಲಾ ನಾಯಕರಿಗೆ ಸ್ಪೀಕರ್ ಹುದ್ದೆಯು ದುರದೃಷ್ಟವನ್ನು ತರುವ ಹುದ್ದೆಯಾಗಲಿದೆ ಎನ್ನುವ ಭಯ ಕಾಡುತ್ತಿದೆ ಎಂದು ಮೂಲಗಳು ತಿಳಿಸಿವೆ.

ಕಾಕತಾಳೀಯವೆಂಬಂತೆ ಸ್ಪೀಕರ್ ಆಗಿದ್ದ ಬಹುತೇಕ ಎಲ್ಲಾ ನಾಯಕರು ಚುನಾವಣೆಯಲ್ಲಿ ಸೋತಿದ್ದಾರೆ ಮತ್ತು ಅವರ ರಾಜಕೀಯ ಜೀವನ ಕೊನೆಗೊಂಡಿದೆ. ಆಡಳಿತಾರೂಢ ಬಿಜೆಪಿ ಸರ್ಕಾರದಲ್ಲಿ ಸ್ಪೀಕರ್ ಆಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸೋಲು ಕಂಡಿದ್ದಾರೆ. ಅವರ ಸೋಲು ಪಕ್ಷಕ್ಕೆ ಆಘಾತವನ್ನುಂಟು ಮಾಡಿತು ಮತ್ತು ಕಾಗೇರಿ ಅವರು ಕಂಗಾಲಾಗಿದ್ದಾರೆ.

2004ರಿಂದ ಈ ಪ್ರತಿಷ್ಠಿತ ಹುದ್ದೆಯಲ್ಲಿ ಯಾರೆಲ್ಲಾ ಕುಳಿತಿದ್ದರೋ ಅವರು ತಮ್ಮ ರಾಜಕೀಯ ಜೀವನದಲ್ಲಿ ತೀವ್ರ ಹಿನ್ನಡೆ ಅನುಭವಿಸಿದ್ದಾರೆ ಎಂದು ರಾಜಕೀಯ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ಹಿಂದೆ ಸ್ಪೀಕರ್ ಆಗಿದ್ದ ಕೆಆರ್ ಪೇಟೆ ಶಾಸಕರಾಗಿದ್ದ ಕೃಷ್ಣ ಅವರು 2008ರ ಚುನಾವಣೆಯಲ್ಲಿ ಸೋತಿದ್ದರು. 2013ರಲ್ಲಿ ಸ್ಪೀಕರ್ ಹುದ್ದೆ ಅಲಂಕರಿಸಿದ್ದ ಹಿರಿಯ ಕಾಂಗ್ರೆಸ್ಸಿಗ ಕಾಗೋಡು ತಿಮ್ಮಪ್ಪ ನಂತರದ 2018ರ ಚುನಾವಣೆಯಲ್ಲಿ ಸೋತರು. 2016ರಲ್ಲಿ ಸ್ಪೀಕರ್ ಆಗಿದ್ದ ಐದು ಅವಧಿಯ ವಿಧಾನಸಭಾ ಸದಸ್ಯರಾದ ಕೆಬಿ ಕೋಳಿವಾಡ ಅವರು 2018ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋತರು ಮತ್ತು 2019ರ ಉಪ ಚುನಾವಣೆಯಲ್ಲೂ ಸೋತರು. 2018ರಲ್ಲಿ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಸ್ಪೀಕರ್ ಆಗಿದ್ದ ರಮೇಶ್ ಕುಮಾರ್ ಇದೇ ಮೇ 10ರಂದು ನಡೆದ ಚುನಾವಣೆಯಲ್ಲಿ ಸೋತಿದ್ದರು. ಹೀಗಾಗಿ, ಈ ಹುದ್ದೆಗೆ ನಾಯಕರನ್ನು ಒಪ್ಪಿಸುವುದು ಕಾಂಗ್ರೆಸ್‌ಗೆ ಕಷ್ಟವಾಗಿ ಪರಿಣಮಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್‌ನ ಹಿರಿಯ ನಾಯಕ ಆರ್.ವಿ. ದೇಶಪಾಂಡೆ ಅವರನ್ನು ಸೋಮವಾರದಿಂದ ಆರಂಭವಾಗುವ ಮೂರು ದಿನಗಳ ಚೊಚ್ಚಲ ಅಧಿವೇಶನದಲ್ಲಿ ಹಂಗಾಮಿ ಸ್ಪೀಕರ್ ಆಗಿ ನೇಮಿಸಿದ್ದು, ಈ ವೇಳೆ ನೂತನ ಸ್ಪೀಕರ್ ಆಯ್ಕೆಯಾಗಲಿದ್ದಾರೆ.

ಡಾ.ಜಿ.ಪರಮೇಶ್ವರ್ ಅವರು ಈ ಪ್ರಸ್ತಾಪವನ್ನು ನೇರವಾಗಿ ತಿರಸ್ಕರಿಸಿ ಕ್ಯಾಬಿನೆಟ್ ಸಚಿವರಾದರು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಟಿ.ಬಿ.ಜಯಚಂದ್ರ, ಎಚ್.ಕೆ.ಪಾಟೀಲ್, ಬಿ.ಆರ್.ಪಾಟೀಲ್ ಮತ್ತು ವೈ.ಎನ್.ಗೋಪಾಲಕೃಷ್ಣ ಅವರಲ್ಲಿ ಯಾರಿಗಾದರೂ ಸ್ಪೀಕರ್ ಹುದ್ದೆ ನೀಡಲು ಪಕ್ಷ ಚಿಂತನೆ ನಡೆಸಿದೆ. ಆದರೆ, ಅವರಲ್ಲಿ ಯಾರೊಬ್ಬರೂ ಈ ಹುದ್ದೆಗೆ ಆಸಕ್ತಿ ಹೊಂದಿಲ್ಲ ಎಂದು ಮೂಲಗಳು ತಿಳಿಸಿವೆ. 2019ರ ಉಪ ಚುನಾವಣೆಯಲ್ಲಿ ಸೋತಿದ್ದ ಜಯಚಂದ್ರ ಈ ಬಾರಿ ಜಯಭೇರಿ ಬಾರಿಸಿದ್ದರು. ಎಚ್.ಕೆ. ಪಾಟೀಲ್ ಗದಗದ ಪ್ರಮುಖ ಲಿಂಗಾಯತ ನಾಯಕರಾಗಿದ್ದು, ಕ್ಯಾಬಿನೆಟ್ ಸ್ಥಾನಕ್ಕೆ ಪರಿಗಣಿಸಲಾಗಿದೆ. ಹಾಗೆಯೇ ಬಿ.ಆರ್.ಪಾಟೀಲ್ ಕೂಡ ಆಳಂದ ಕ್ಷೇತ್ರದ ಪ್ರಮುಖ ನಾಯಕರಾಗಿದ್ದಾರೆ.

ಮಾಜಿ ಸಿಎಂ ಜಗದೀಶ ಶೆಟ್ಟರ್ ಹಾಗೂ ಬಿಜೆಪಿ ಸರ್ಕಾರದಲ್ಲಿ ಸ್ಪೀಕರ್ ಆಗಿದ್ದ ಕೆ.ಜಿ. ಬೋಪಯ್ಯ ಅವರು ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲಿ ಸೋತರು. ಆ ಮೂಲಕ ತಮ್ಮ ರಾಜಕೀಯ ಜೀವನದಲ್ಲಿ ಹಿನ್ನಡೆಯನ್ನು ಎದುರಿಸಿದರು. ಈ ಹುದ್ದೆಯನ್ನು ನೀಡಲಾಗುತ್ತಿರುವ ಎಲ್ಲಾ ನಾಯಕರು ಸ್ಪೀಕರ್ ಆಗುವುದಕ್ಕಿಂತ ಹೆಚ್ಚಾಗಿ ಶಾಸಕರಾಗಿ ಉಳಿಯಲು ಬಯಸುತ್ತಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಸಚಿವ ಸ್ಥಾನದ ಮೇಲೆ ಕಣ್ಣಿಟ್ಟಿರುವುದು ಪ್ರಮುಖ ಕಾರಣವಾದರೆ, ಸ್ಪೀಕರ್ ಹುದ್ದೆಯು ದುರದೃಷ್ಟವನ್ನು ಹೊತ್ತು ತರಬಹುದು ಎಂಬ ಭಯವು ಅವರು ಈ ಜವಾಬ್ದಾರಿಯನ್ನು ನಿರಾಕರಿಸಲು ಮುಖ್ಯ ಕಾರಣವಾಗಿದೆ ಎಂದು ಮೂಲಗಳು ತಿಳಿಸಿವೆ.

ನನ್ನ, ಸಿದ್ದರಾಮಯ್ಯರ ಮನೆ ಸುತ್ತೋದು ಬಿಡಿ, ಒಗ್ಗಟ್ಟಿನಿಂದ ಪಕ್ಷ ಕಟ್ಟುವ ಕೆಲಸ ಮಾಡೋಣ



ಬೆಂಗಳೂರು: ವ್ಯಕ್ತಿಗಿಂತಲೂ ಪಕ್ಷ ಮುಖ್ಯ. ಪಕ್ಷ ಹೇಳಿದ್ದೇ ನಮಗೆ ವೇದ ವಾಕ್ಯ. ನನ್ನ ಮನೆ, ಸಿದ್ದರಾಮಯ್ಯನವರ ಮನೆ ಎಂದು ಸುತ್ತಾಡೋದನ್ನು ಬಿಡಿ ಎಂದು ನಾಯಕರಿಗೆ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಅವರ ಪುಣ್ಯತಿಥಿ ಸಂದರ್ಭದಲ್ಲಿ ಕೆಪಿಸಿಸಿ ಕಚೇರಿಯ ಇಂದಿರಾಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರು ಮಾಡಿದ ತ್ಯಾಗವನ್ನು ನಾವು ನೆನಪಿಟ್ಟುಕೊಳ್ಳಬೇಕು, ಗಾಂಧಿ ಕುಟುಂಬದ ತ್ಯಾಗವನ್ನು ನಾವು ಯಾವತ್ತೂ ಮರೆಯುವ ಹಾಗಿಲ್ಲ. ಅಂಥ ತ್ಯಾಗವನ್ನು ಯಾರಿಂದಲೂ ಮಾಡಲು ಸಾಧ್ಯವಿಲ್ಲ. ನನ್ನ ಮತ್ತು ಸಿದ್ದರಾಮಯ್ಯ ಅವರನ್ನು ಕೂರಿಸಿ ಏನು ಹೇಳಬೇಕೋ ಅದನ್ನು ಹೇಳಿದ್ದಾರೆ. ನಮಗೆ ಖರ್ಗೆ ಮತ್ತು ಗಾಂಧಿ ಕುಟುಂಬದವರು ಏನು ಹೇಳಿದ್ದಾರೋ ಅದೇ ವೇದ ವಾಕ್ಯ. ಇಲ್ಲಿ ವ್ಯಕ್ತಿಗಿಂತಲೂ ಪಕ್ಷ ಮುಖ್ಯ. ಪಕ್ಷದ ಹಿತದೃಷ್ಟಿಯಿಂದ ಕೆಲಸ ಮಾಡಬೇಕು ಎಂದರು.

ವಿಧಾನಸಭೆ ಚುನಾವಣೆಯಲ್ಲಿ ನಮಗೆ 135 ಸ್ಥಾನ ಬಂದಿರುವುದು ಸಂತಸ ತಂದಿಲ್ಲ. ನಾಯಕರು ನನ್ನ ಅಥವಾ ಸಿದ್ದರಾಮಯ್ಯ ಅವರ ಮನೆಗೆ ಬರಬೇಡಿ. ನಮ್ಮ ಮುಂದಿನ ಗುರಿ ಲೋಕಸಭಾ ಚುನಾವಣೆಯಾಗಿದೆ. ಈ ಚುನಾವಣೆಯಲ್ಲಿ ನಾವು ಉತ್ತಮವಾಗಿ ಹೋರಾಟ ನಡೆಸಬೇಕಿದೆ. ಇಲ್ಲಿ ಕೇಳಿದ್ದನ್ನು ಅಲ್ಲಿಗೆ, ಅಲ್ಲಿ ಕೇಳಿದ್ದನ್ನು ಇಲ್ಲಿ ಹೇಳುವುದನ್ನು ಬಿಡಿ. ಈ ಮೂಲಕ ಒಬ್ಬರ ವಿಷಯವನ್ನು ಇನ್ನೊಬ್ಬರ ಬಳಿ ಹೇಳಿ ಜಗಳಕ್ಕೆ ಕಾರಣವಾಗುವ ಚಾಳಿಯನ್ನು ಬಿಡಬೇಕು, ಪಕ್ಷ ಕಟ್ಟುವ ಕೆಲಸ ಮಾಡಬೇಕು. ತಾಳ್ಮೆಯಿಂದಿರಿ.. ಎಲ್ಲರಿಗೂ ಅಧಿಕಾರ ಸಿಗುತ್ತದೆ ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

22.5.2023 ಸೋಮವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023ರಿಂದ 24.05.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

- **ಸ್ಪರ್ಶ ಆರೋಗ್ಯ ಮತ್ತು ಕಣ್ಣಿನ ಆಸ್ಪತ್ರೆ:** ನೇತ್ರ, ಮಧುಮೇಹ, ರಕ್ತದೊತ್ತಡ ಉಚಿತ ತಪಾಸಣಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಬಂಬೂ ಬಜಾರ್. ಬೆಳಗ್ಗೆ 10ಕ್ಕೆ.
- **ಜೆಎಸ್‌ಎಸ್ ಮೈಸೂರ್ ಅರ್ಬನ್ ಹಾತ್, ಮೈಸೂರು:** ಗುಜರಾತ್ ಹ್ಯಾಂಡಿಕ್ರಾಫ್ಟ್ ಉತ್ಸವ. ಸ್ಥಳ ಅರ್ಬನ್ ಹಾತ್ ಆವರಣ, ಹೆಬ್ಬಾಳು ಕೈಗಾರಿಕ ಪ್ರದೇಶ, ರಿಂಗ್ ರೋಡ್. ಬೆಳಗ್ಗೆ 10ರಿಂದ ರಾತ್ರಿ 8 ಗಂಟೆವರೆಗೆ.
- **ಗೃಹ ಶೋಭ:** ಟ್ರೇಡ್ ಫೇರ್. ಸ್ಥಳ: ಮಹಾರಾಜ ಕಾಲೇಜು ಮೈದಾನ. ಬೆಳಗ್ಗೆ 11ರಿಂದ ರಾತ್ರಿ 9ರವರೆಗೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪ್ರಸಿದ್ಧ ವಿದ್ವಾಂಸರಾದ ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ 'ಪದ್ಮ ಪುರಾಣ' ಕುರಿತು ಪ್ರವಚನ ಕಾರ್ಯಕ್ರಮ. ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮೀಪುರಂ. ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಬಸವರಾಜ್ ಕಲ್ಲುಗುಡಿ, 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ– ಡಾ. ಗಜಾನನ ಶರ್ಮ– 6.40 ಪದಸಂಸ್ಕೃತಿ– ಕನ್ನಡಪದಗಳಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ–ಪರಮೇಶ್ವರ ವಿ.ಭಟ್, 7.15 ಭಾವಗೀತೆಗಳು ಅಪೂರ್ವ ಶ್ರೀಧರ್, 10.00 ಲಯ ಸಂಭ್ರಮ–ಪಾಶ್ಚಾತ್ಯ ಲಯ ವಾದ್ಯಗಳ ಪರಿಚಯ ಪ್ರಸ್ತುತಿ–ಹೆಚ್.ಎಲ್. ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ, 12.45 ನಮ್ಮ ಆರೋಗ್ಯ–ದಂತ ಚಿಕಿತ್ಸಾ ವಿಧಾನಗಳು ಕುರಿತು ಡಾ.ಸ್ಮಿತಾ ಜೆ.ಡಿ ಅವರೊಂದಿಗೆ ಮಾತುಕತೆ, 1.20 ಭಾವಗೀತೆ–ಬಿ.ಕೆ.ಸುಮಿತ್ರಾ, 3.00 ಆರ್.ಎನ್. ದೊರೆಸ್ವಾಮಿ–ವೀಣಾವಾದನ, 4.00 ಮಹಿಳಾರಂಗ– ಡಾಕ್ಟರ್ ಸಮಯ–1. ಆಯುರ್ವೇದದಲ್ಲಿ ಬಾಣಂತಿ ಆರೈಕೆ–ಈ ಕುರಿತು ಹೇಳುತ್ತಾರೆ ಡಾ.ನಾಗಶ್ರೀ ಶ್ರೀವತ್ಸ, 2. ಗರ್ಭಕೋಶದ ಗೆಡ್ಡೆಗಳು–ಕುರಿತು ಮಾಹಿತಿ ನೀಡುತ್ತಾರೆ ಡಾ.ಉಷಾಗೌಡ, 4.30 ಝೇಂಕಾರ–ಕವಿ–ಕೆ.ಬಿ.ಪ್ರಭುಪ್ರಸಾದ್, ಸಂಗೀತ–ಎಸ್.ಜಿ.ರಘುರಾಂ ಭಾಗವಹಿಸುವವರು ರಂಗರಾವ್ ಅಂಧಶಾಲೆಯ ಮಕ್ಕಳು, 4.45 ಹಿಂದಿ ಪಾಠ ಪ್ರಸ್ತುತಿ–ಎಸ್.ಎನ್. ಸೈಪಂಗಲ್ಲು, 6.50 ಕೃಷಿರಂಗ ಕಿಸಾನ್ ವಾಣಿ –ದ್ವಿದಳ ಧಾನ್ಯಗಳ ಬೀಜೋತ್ಪಾದನೆಯಲ್ಲಿ ರೈತರಿಗಿರುವ ಅವಕಾಶಗಳು ಕುರಿತು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಡಾ.ಹೆಚ್.ವಿ. ದಿವ್ಯಾ, ಪ್ರಸ್ತುತಿ– ಜಿ.ಶಾಂತಕುಮಾರ್, 9.30 ಹಳ್ಳಿಹಾಡು, 10.00 ನಾಟಕ, 10.30 ಸವಿನೆನಪು

- **ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಸನ್ನಿಧಾನ:** ಶ್ರೀ ರಾಘವೇಂದ್ರ ಸ್ವಾಮಿಗಳ 76ನೇ ಬೃಂದಾವನ ಪ್ರತಿಷ್ಠಾಪನಾ ವರ್ಧಂತ್ಯುತ್ಸವ. ಧಾರವಾಡದ ಪಂಡಿತ ಶ್ರೀ ಕಪಿಲಾಚಾರ್ಯ ಹಲಗಲಿ ಅವರಿಂದ 'ಶ್ರೀಮದ್ಭಾಗವತ' ಪ್ರವಚನ. ಸ್ಥಳ: ತತ್ವಜ್ಞಾನ ಮಂದಿರ, ಶ್ರೀರಾಯರ ಮಠದ ಆವರಣ, ಕೃಷ್ಣಮೂರ್ತಿಪುರಂ. ಸಂಜೆ 6ಕ್ಕೆ.
- **ಇಂಡಿಯನ್ ಥಿಯೇಟರ್ ಫೌಂಡೇಷನ್:** ರಂಗಾಯಣ ಕುರಿತು ವೆಂಕಟರಾಜು ಕೃಷ್ಣಮೂರ್ತಿ ಮತ್ತು ಕೆ.ಮರುಳ ಸಿದ್ದಪ್ಪ ಅವರಿಂದ ವಿಚಾರ ವಿನಿಮಯ. ಸ್ಥಳ: ರಂಗಾಯಣದ ಕಿರುರಂಗಮಂದಿರ. ಸಂಜೆ 6ಕ್ಕೆ.

ಮೈಸೂರು ಮಿತ್ರ ಸೋಮವಾರ 22 ಮೇ 2023

ಕಾಂಗ್ರೆಸ್‌ನ ಉಚಿತ ಗ್ಯಾರಂಟಿಗಳ ಬಗ್ಗೆ ವಿವಿಧ ಕ್ಷೇತ್ರದ ಜನತೆಯ ಮಿಶ್ರ ಪ್ರತಿಕ್ರಿಯೆ

ಮೈಸೂರು, ಮೇ 21(ಎಂಕೆ)– ರಾಜ್ಯ ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿಗಳತ್ತ ಈಗ ಎಲ್ಲರ ಚಿತ್ತವಿದೆ. ಯೋಜನೆಗಳ ಫಲಾನುಭವಿಗಳಾಗಲೂ ಯಾವ್ಯಾವ ಮಾನದಂಡಗಳನ್ನು ವಿಧಿಸುತ್ತಾರೋ ಎಂಬ ಗೊಂದಲದಲ್ಲಿದ್ದಾರೆ. ಬಡವರಿಗೆ, ಮಧ್ಯಮ ವರ್ಗದವರಿಗೆ, ಮಹಿಳೆಯರಿಗೆ, ಡಿಪ್ಲೊಮಾ ಹಾಗೂ ಪದವಿ ನಿರುದ್ಯೋಗಿಗಳಿಗೆ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳು ವರದಾನವಾಗಲಿದೆ. ಆದರೆ ರಾಜ್ಯದ ಆರ್ಥಿಕ ವ್ಯವಸ್ಥೆ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು. ಯಾವ ರೀತಿಯಲ್ಲಿ ನಿಭಾಯಿಸಲಿದ್ದಾರೆ. ನೀರಿನಂತೆ ವಿದ್ಯುತ್ ಕೂಡ ವ್ಯರ್ಥ ಬಳಕೆಯಾಗಲಿದೆ. ಸೋಮಾರಿಗಳು ಹೆಚ್ಚಾಗಲಿದ್ದಾರೆ. ಕೂಲಿ ಕಾರ್ಮಿಕರು ಸಿಗುವರೇ ಎಂಬಿತ್ಯಾದಿ ಪ್ರಶ್ನೆಗಳೂ ಕಾಡತೊಡಗಿದ್ದು, ಈ ಕುರಿತು ಮೈಸೂರಿನ ವಿವಿಧ ಕ್ಷೇತ್ರದ ಹಲವರು 'ಮೈಸೂರು ಮಿತ್ರ'ನೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.



ಕಾಂಗ್ರೆಸ್ ಸರ್ಕಾರದ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಮತ್ತು ಮಹಿಳೆಯರಿಗೆ ಉಚಿತ ಪ್ರಯಾಣ ಗ್ಯಾರಂಟಿ ಯೋಜನೆಗಳು ಜಾರಿಯಾದರೆ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ಗಂಭೀರವಾದ ಪರಿಣಾಮ ಬೀರಲಿದೆ. ಆದರೆ ಇದೆಲ್ಲವನ್ನು ಹೇಗೆ ನಿಭಾಯಿಸುತ್ತಾರೆ ಎಂಬುದು ದೊಡ್ಡಸವಾಲಾಗಿದೆ. 5 ಗ್ಯಾರಂಟಿ ಯೋಜನೆಗಳಿಗೆ ಕೆಲವೊಂದು ಮಾನದಂಡಗಳನ್ನು ವಿಧಿಸಿದರಷ್ಟೇ ಆರ್ಥಿಕವಾಗಿ ಬೀಳುವ ಹೊಡೆತದ ಪ್ರಮಾಣ ಕಡಿಮೆಯಾಗಲಿದೆ. ಆದ್ದರಿಂದ ಯೋಜನೆಗಳು ಜಾರಿಯಾಗುವವರೆಗೆ ಕಾಯಬೇಕಾಗಿದೆ.

- ಪ್ರೊ.ನವಿತ ತಿಮ್ಮಯ್ಯ, ಅರ್ಥಶಾಸ್ತ್ರಜ್ಞೆ

ಗ್ಯಾರಂಟಿ ಯೋಜನೆಗಳನ್ನು ನಂಬಿಯೇ ಜನರು ಕಾಂಗ್ರೆಸ್‌ಗೆ ಮತ ನೀಡಿ ಗೆಲ್ಲಿಸಿದ್ದಾರೆ. ಅದರಂತೆ 5 ಗ್ಯಾರಂಟಿ ಯೋಜನೆಗಳನ್ನು ಈಡೇರಿಸಿದರೆ ಬಡಜನರಿಗೆ, ಮಧ್ಯಮ ವರ್ಗದವರಿಗೆ ತುಂಬಾ ಅನುಕೂಲವಾಗಲಿದೆ. ಮುಂಬರುವ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರಕ್ಕೂ ಅನುಕೂಲವಾಗಲಿದೆ.

- ಮಹೇಶ್, ಒಲಂಪಿಯಾ ಬಟ್ಟೆ ವ್ಯಾಪಾರಿ



ಈಗಾಗಲೇ ಕೆಲಸಕ್ಕೆ ನೌಕರರೇ ಸರಿಯಾಗಿ ಸಿಗುತ್ತಿಲ್ಲ. ಬೇರೆ ಬೇರೆ ರಾಜ್ಯಗಳಿಂದ ಕರೆಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರದ ಉಚಿತ ಯೋಜನೆಗಳಿಂದ ನೌಕರರ ಕೊರತೆ ಇನ್ನಷ್ಟು ಹೆಚ್ಚಾಗಲಿದೆ. ಕರೆಂಟ್ ಫ್ರೀ, ಬಸ್ ಫ್ರೀ, 10 ಕೆಜಿ ಅಕ್ಕಿ ಫ್ರೀ, ತಿಂಗಳಿಗೆ ಖರ್ಚಿಗೆ ಒಂದಷ್ಟು ದುಡ್ಡು ಕೊಟ್ಟರೆ ಯಾರು ತಾನೇ ಕೆಲಸಕ್ಕೆ ಬರುತ್ತಾರೆ. ಕೆಲಸ ಮಾಡಿ ದುಡಿದು ತಿನ್ನುವ ಆಸಕ್ತಿಯನ್ನೇ ಕಳೆದುಕೊಳ್ಳುತ್ತಾರೆ. ಈಗಾಗಲೇ ಹೋಟೆಲ್ ಉದ್ಯಮದಲ್ಲಿ ಕೆಲಸ ಮಾಡುವ ನೌಕರರಿಗೆ ಶೇ.20 ರಷ್ಟು ಸಂಬಳ ಹೆಚ್ಚಿಸಲಾಗಿದೆ. ಏನೂ ಇಲ್ಲದವರಿಗೆ ಕೊಟ್ಟರೆ ಸಂತೋಷ. ಆದರೆ ಇದ್ದವರೇ ಫಲಾನುಭವಿಗಳಾಗಲು ಮುಂದಾದರೆ ತುಂಬಾ ತೊಂದರೆ ಉಂಟಾಗಲಿದೆ. ಕೊನೆಗೆ ತೆರಿಗೆ ವಸೂಲಿ ರೂಪದಲ್ಲಿ ಸರ್ಕಾರ ಉದ್ಯಮಿಗಳ ಹಿಂದೆ ಬೀಳಲಿದೆ.

- ಸಿ.ನಾರಾಯಣಗೌಡ, ಅಧ್ಯಕ್ಷ, ಮೈಸೂರು ಹೋಟೆಲ್ ಮಾಲೀಕರ ಸಂಘ



ರಾಜ್ಯದ ಆರ್ಥಿಕ ಸ್ಥಿತಿ–ಗತಿಯನ್ನು ಗಮನಿಸಿದರೆ ನೂತನ ಸರ್ಕಾರದ ಗ್ಯಾರಂಟಿ ಯೋಜನೆಗಳು ಜಾರಿಯಾಗುವುದೇ ಅನುಮಾನವಾಗಿದೆ. ಜಾರಿಯಾದರೂ ಹಲವು ಮಾನದಂಡಗಳಿರಲಿವೆ ಎನ್ನಿಸುತ್ತಿದೆ. ಏನೇ ಆದರೂ ಉಚಿತ ಯೋಜನೆಗಳನ್ನು ನೀಡುವುದಕ್ಕಿಂತ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಿದ್ದರೆ ಚೆನ್ನಾಗಿರುತ್ತಿತ್ತು.

- ಕೆ.ಕಾವ್ಯ, ಹೊರಗುತ್ತಿಗೆ ಸಿಬ್ಬಂದಿ, ನಂಜನಗೂಡು ತಾಪಂ

ವಿದ್ಯುತ್ ಪೂರೈಕೆಯಲ್ಲಿ ಕಡಿತ... ನಿರ್ವಹಣೆ ಕೆಲ ತಿಂಗಳುಗಳಷ್ಟೇ ನಡೆಯಲಿದೆ...!

ಪ್ರತೀ ಮನೆಗೂ 200 ಯೂನಿಟ್ ವಿದ್ಯುತ್ ಉಚಿತ ಯೋಜನೆ ಜಾರಿಯಿಂದ ವಿದ್ಯುತ್ ಪೂರೈಕೆಯಲ್ಲಿ ಕಡಿತವಾಗುವ ಸಾಧ್ಯತೆ ಹೆಚ್ಚಾಗಲಿದೆ. ಅಲ್ಲದೆ ಒಂದು ವರ್ಷಕ್ಕಿಂತ ಹೆಚ್ಚಿನ ಕಾಲ ಮುಂದುವರೆಸುವುದು ಕಷ್ಟವಾಗಲಿದೆ ಎಂದು ಚೆಸ್ಕಾಂನ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಸಾಮಾನ್ಯವಾಗಿ ಒಂದು ಮಧ್ಯಮ ಕುಟುಂಬದವರು 70–80 ಯೂನಿಟ್ ಬಳಕೆ ಮಾಡುತ್ತಾರೆ. 200 ಯೂನಿಟ್ ವಿದ್ಯುತ್ ಉಚಿತ ಎಂದಾಗ ಬಳಕೆ ಮಾಡುವ ಪ್ರಮಾಣ ತಾನಾಗಿಯೇ ಹೆಚ್ಚಾಗಲಿದೆ. ಫ್ಯಾನ್ ಇಟ್ಟುಕೊಂಡಿದ್ದವರು ಎ.ಸಿ ಬಳಸಲು ಮುಂದಾಗುವುದು ಸಾಮಾನ್ಯ. ಇದರಿಂದ ದಿನದ 24 ಗಂಟೆ ನೀಡುತ್ತಿದ್ದ ವಿದ್ಯುತ್ ಪೂರೈಕೆಯಲ್ಲಿ ಕಡಿತ ಉಂಟಾಗಲಿದೆ. ರಾಜ್ಯದ ಎಲ್ಲಾ ಕಡೆಗೂ ವಿದ್ಯುತ್ ಪೂರೈಕೆ ಮಾಡಬೇಕಾದರೆ, ಕಡಿತ ಅನಿವಾರ್ಯವಾಗಲಿದೆ ಎಂದರು.



ಈ ಮೊದಲು ಭಾಗ್ಯ ಜ್ಯೋತಿ ಹೆಸರಿನಲ್ಲಿ 18 ಯೂನಿಟ್ ವಿದ್ಯುತ್ ಉಚಿತವಾಗಿತ್ತು. ತದನಂತರ 40 ಯೂನಿಟ್‌ಗೆ ಹೆಚ್ಚಿಸಲಾಯಿತು. ಹಿಂದಿದ್ದ ಬಿಜೆಪಿ ಸರ್ಕಾರ 75 ಯೂನಿಟ್ ಉಚಿತ ನೀಡುವುದಾಗಿ ಘೋಷಣೆ ಮಾಡಿತ್ತು. ಆದರೆ ನೂತನ ಕಾಂಗ್ರೆಸ್ ಸರ್ಕಾರ 200 ಯೂನಿಟ್ ಫ್ರೀ ಕೊಡುತ್ತೇವೆ ಎನ್ನುತ್ತಿರುವುದರಿಂದ ವಿದ್ಯುತ್ ಇಲಾಖೆಗೆ ಕಠಿಣ ಸವಾಲು ಎದುರಾಗಲಿದೆ. ಸರ್ಕಾರದ ಹಲವಾರು ಸಬ್ಸಿಡಿ ಯೋಜನೆಗಳಿಂದ ಬರಬೇಕಾದ ಕೋಟ್ಯಾಂತರ ರೂ. ಬಾಕಿ ಇದೆ. ಇದರ ಜೊತೆಗೆ ಫ್ರೀ ವಿದ್ಯುತ್ ಎಂದರೆ ವಿದ್ಯುತ್ ಇಲಾಖೆ ಸ್ಥಿತಿ ಮತ್ತಷ್ಟು ಅದಗೆಡಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

2007ರಿಂದಲೇ ವಿದ್ಯುತ್ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿ–ಸಿಬ್ಬಂದಿಗೆ ಇದ್ದ ಉಚಿತ ವಿದ್ಯುತ್ ಅನ್ನು ಸ್ಥಗಿತಗೊಳಿಸಲಾಗಿತ್ತು. ಟ್ಯಾಪ್ ಇಲ್ಲದ ನಲ್ಲಿಗಳಲ್ಲಿ ನೀರು ಹೇಗೆ ವ್ಯರ್ಥವಾಗುತ್ತಿದೆಯೋ ಹಾಗೆಯೇ ವಿದ್ಯುತ್ ಕೂಡ ವ್ಯರ್ಥ ಬಳಕೆಯಾಗಲಿದೆ. ವಿದ್ಯುತ್ ಉತ್ಪಾದನೆಗಿಂತ ಬೇಡಿಕೆ ಹೆಚ್ಚಾಗುತ್ತದೆ. ಅಲ್ಲದೆ ಸರ್ಕಾರ ಇತರೆ ಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗುತ್ತವೆ ಎಂದು ಹೇಳಿದರು.

ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆ ಸ್ವಾಗತಾರ್ಹ. ಹತ್ತಿರದಲ್ಲಿನ ಕಾರ್ಖಾನೆಗಳಲ್ಲಿ, ಶಾಲಾ–ಕಾಲೇಜುಗಳಲ್ಲಿ ಸೇರಿದಂತೆ ಪ್ರತಿನಿತ್ಯ ಕೆಲಸ ನಿಮಿತ್ತ ಪ್ರಯಾಣ ಮಾಡುವವರಿಗೆ ಮಾತ್ರ ಮಾಡಿದರೆ ಒಳಿತು. ಆದರೆ ದೂರದ ಪ್ರಯಾಣ, ಪ್ರವಾಸ ಮಾಡುವವರಿಗೆ ಉಚಿತ ಎಂದರೆ ಖಾಸಗಿ ಬಸ್ ಮಾಲೀಕರು ಬದುಕು ಬೀದಿಗೆ ಬೀಳಲಿದೆ.



- ಎ.ಯುಪೃತ್ವಿ, ಅಧ್ಯಕ್ಷ, ಮೈಸೂರು ಪ್ರವಾಸಿ ಬಸ್ ಮಾಲೀಕರ ಸಂಘ

ಯುವನಿಧಿ ಯೋಜನೆಯಡಿ ಎರಡು ವರ್ಷಗಳ ಕಾಲ ತಿಂಗಳಿಗೆ 3000 ರೂ. ನೀಡುವುದರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಅನುಕೂಲವಾಗುವುದರ ಜೊತೆಗೆ ಬಡತನ ನೀಗಲು ಸಹಕಾರಿಯಾಗುತ್ತದೆ. ಈ ನಡುವೆ ಸರ್ಕಾರಿ ಅಥವಾ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಪಡೆಯಲು ಆರ್ಥಿಕ ತೊಂದರೆ ಇಲ್ಲದೆ ಪ್ರಯತ್ನ ಮಾಡಬಹುದು.

- ಕೆ.ಎಂ.ದರ್ಶನ್, ಬಿಕಾಂ ಪದವೀಧರ



200 ಯೂನಿಟ್ ವಿದ್ಯುತ್ ಉಚಿತವಾಗುವುದು ವಾಸವಿರುವ ಮನೆಗಳಿಗೇ ಹೊರತು ಕಾರ್ಖಾನೆಗಳಿಗೆ, ಅಪಾರ್ಟ್‌ಮೆಂಟ್‌ಗಳಿಗಲ್ಲ. ಅಲ್ಲದೆ 200 ಯೂನಿಟ್ ವಿದ್ಯುತ್ ಫ್ರೀಯಾದರೂ ಸ್ಥಿರ ಶುಲ್ಕ(fixed charge) ಕಟ್ಟಲೇ ಬೇಕು. ಡಿಪ್ಲೊಮಾ ಕೋರ್ಸ್‌ಗಳನ್ನು ಮುಗಿಸಿದವರಿಗೆ ಕಾರ್ಖಾನೆಗಳಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಿ ವೇಳೆ ಅಪ್ರೆಂಟಿಸ್ ಎಂದು ಪರಿಗಣಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ತಲಾ 1500 ರೂ. ಕೊಡಲಾಗುತ್ತದೆ ಇದೆಲ್ಲವನ್ನು ಗಮನಿಸಿ, ರಾಜ್ಯ ಸರ್ಕಾರ ವ್ಯವಸ್ಥಿತವಾಗಿ ರೂಪಿಸಿದರೆ 5 ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಬಹುದು. ಇದರಿಂದ ಆರ್ಥ ವ್ಯವಸ್ಥೆಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ.

- ಸುರೇಶ್‌ಕುಮಾರ್ ಜೈನ್, ಕಾರ್ಯದರ್ಶಿ, ಮೈಸೂರು ಕೈಗಾರಿಕೆಗಳ ಸಂಘ



ಗೃಹ ಲಕ್ಷ್ಮಿ ಯೋಜನೆಯಡಿ ಮನೆ ಯಜಮಾನಿಗೆ 2000 ರೂ. ನೀಡುತ್ತಿರುವುದು ತುಂಬಾ ಅನುಕೂಲವಾಗಲಿದೆ. ನಮ್ಮಂತಹ ಮಧ್ಯಮ ಕುಟುಂಬದ ಮಹಿಳೆಯರಿಗೆ ಅನುಕೂಲವಾಗಲಿದೆ. ಗ್ಯಾಸ್ ಸಿಲಿಂಡರ್, ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ಎದುರಾಗಿರುವ ಕಷ್ಟಗಳು ಒಂದಷ್ಟು ಕಡಿಮೆಯಾಗಲಿದೆ. ಉಚಿತ ವಿದ್ಯುತ್‌ನಿಂದಲೂ ಅನುಕೂಲವಗಲಿದೆ. **- ಮಂಜುಳ ಕೆ.** ಸ್ವಯಂ ಉದ್ಯೋಗಿ

ನಿರುದ್ಯೋಗಿ ಪದವೀಧರರಿಗೆ ತಿಂಗಳಿಗೆ 3000 ರೂ. ಹಾಗೂ ಡಿಪ್ಲೊಮಾ ಮುಗಿಸಿ ಕೆಲಸ ಇಲ್ಲದವರಿಗೆ 1500 ರೂ. ನೀಡುವುದು ಸರಿಯಾದರೂ ಗುತ್ತಿಗೆ ಆಧಾರದ ಮೇಲೆ ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಖಾಯಂಗೊಳಿಸಿದ್ದರೆ ದೊಡ್ಡಮಟ್ಟದಲ್ಲಿ ಅನುಕೂಲವಾಗಲಿದೆ. ಜೊತೆಗೆ ಸಂಬಳ ಜಾಸ್ತಿ ಮಾಡಿದರೆ ಒಳಿತು. ಹಾಗೆಯೇ ಆರೋಗ್ಯ ಕ್ಷೇತ್ರದ ಸುಧಾರಣೆಗೆ ಗಮನ ಹರಿಸುವುದು ಮುಖ್ಯವಾಗಿದೆ. **- ರಾಣಿ ಸಂತೋಷ್,** ಸ್ಟಾಫ್ ನರ್ಸ್

ಕೆಎಸ್‌ಆರ್‌ಟಿಸಿ ಈಗಾಗಲೇ ನಷ್ಟದಲ್ಲಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಮಹಿಳೆಯರಿಗೆ ಉಚಿತ ಪ್ರಯಾಣ ಸರಿಯೇ ಆದರೂ ಸರ್ಕಾರದ ಕಡೆಯಿಂದ ಯೋಜನೆಯ ಮೊತ್ತವನ್ನು ಸರಿಯಾದ ಸಮಯಕ್ಕೆ ಬಿಡುಗಡೆ ಮಾಡಿದರೆ ಸರಿ. ಇಲ್ಲವಾದರೆ ಸಿಬ್ಬಂದಿಗಳಿಗೆ ಸಂಬಳ ಸೇರಿದಂತೆ ಖರ್ಚು–ವೆಚ್ಚಗಳನ್ನು ನಿಭಾಯಿಸಲು ಕಷ್ಟವಾಗುತ್ತದೆ. ಮೊದಲು 10ನೇ ತಾರೀಖು ಸಂಬಳ ಕೊಡುತ್ತಿದ್ದರು. ಈಗ 1ನೇ ತಾರೀಖಿನಂದೇ ಕೊಡುತ್ತಿದ್ದಾರೆ. ಉಚಿತ ಪ್ರಯಾಣ ಯೋಜನೆ ಜಾರಿಯಾದ ಮೇಲೆ ಯಾವ ರೀತಿಯಲ್ಲಿ ಬದಲಾವಣೆಯಾಗಲಿದೆ ಎಂಬುದನ್ನು ಕಾದು ನೋಡಬೇಕು.

- ವಿಶ್ವನಾಥ್, ಕೆಎಸ್‌ಆರ್‌ಟಿಸಿ ಕಂಡಕ್ಟರ್

ಹೈದರಾಬಾದ್ ಮಣಿಸಿ ಪ್ಲೇಆಫ್ ತಲುಪಿದ ಮುಂಬೈ

ಮುಂಬೈ,ಮೇ 21(ಸಿಎನ್)– ಕ್ಯಾಮರೂನ್ ಗ್ರೀನ್ ಅವರ ಭರ್ಜರಿ ಶತಕ, ರೋಹಿತ್ ಶರ್ಮಾ ಅವರ ರೋಚಕ ಬ್ಯಾಟಿಂಗ್ ನೆರವಿನಿಂದ ಹೈದರಾಬಾದ್ ವಿರುದ್ಧ ಮುಂಬೈ 8 ವಿಕೆಟ್‌ಗಳ ಜಯ ಸಾಧಿಸುವ ಮೂಲಕ ಪ್ಲೇಆಫ್ ತಲುಪಿತು.



ಇಲ್ಲಿನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 201 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಮುಂಬೈ 18 ಓವರ್‌ಗಳಲ್ಲೇ ಗೆಲುವಿನ ನಗೆ ಬೀರಿತು. ತಂಡದ ಪರ ಇಶಾನ್‌ಕಿಶಾನ್ 14 ರನ್ ಗಳಿಸಿ ಬೇಗನೆ ವಿಕೆಟ್ ಒಪ್ಪಿಸಿದರು. ಇನ್ನೊಂಥೆಡೆ ಬ್ಯಾಟ್ ಬೀಸಿದ ನಾಯಕ ರೋಹಿತ್ ಶರ್ಮಾ 37 ಎಸೆತಗಳಲ್ಲಿ 1 ಸಿಕ್ಸ್ ಹಾಗೂ 8 ಬೌಂಡರಿ ಒಳಗೊಂಡ 56 ರನ್ ಗಳಿಸಿ ಮಯಾಂಕ್ ಡಾಗಾರ್ ಎಸೆತದಲ್ಲಿ ಕ್ಯಾಚ್ ನೀಡಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಸೂರ್ಯ ಕುಮಾರ್ ಯಾದವ್ 25 ರನ್ ಗಳಿಸಿದರೆ, ಆರಂಭದಿಂದಲೂ ಕ್ರೀಸ್‌ನಲ್ಲಿದ್ದ ಕ್ಯಾಮರೂನ್ ಗ್ರೀನ್ 47 ಎಸೆತಗಳಲ್ಲಿ ಆಕರ್ಷಕ 8 ಸಿಕ್ಸರ್ ಹಾಗೂ 8 ಬೌಂಡರಿ ಒಳಗೊಂಡ 100 ರನ್ ಸಿಡಿಸಿ ತಂಡವನ್ನು ಗೆಲ್ಲಿಸಿದರು. ಅಂತಿಮವಾಗಿ ಈ ಗೆಲುವಿನ ಮೂಲಕ ಮುಂಬೈ ಪ್ಲೇಆಫ್ ಪ್ರವೇಶ ಪಡೆಯಿತು. ಹೈದರಾಬಾದ್ ಪರ ಭುವನೇಶ್ವರ್, ಮಯಾಂಕ್ ಡಾಗಾರ್ ತಲಾ ಒಂದೊಂದು ವಿಕೆಟ್ ಪಡೆದಿದ್ದು ಬಿಟ್ಟರೆ ಉಳಿದ ಬೌಲರ್‌ಗಳು ರನ್ ಬಿಟ್ಟುಕೊಟ್ಟು ದುಬಾರಿಯಾದರು.

ಇಲ್ಲಿ ಇದಕ್ಕೂ ಮುನ್ನ ಬ್ಯಾಟ್ ಮಾಡಿದ ಹೈದರಾಬಾದ್ ತಂಡ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 200 ರನ್‌ಗಳ ಬೃಹತ್ ಮೊತ್ತದ ಗುರಿ ನೀಡಿತ್ತು. ತಂಡದ ಪರ ವಿ.ಶರ್ಮಾ 69 ರನ್ ಗಳಿಸಿದರೆ, ಕನ್ನಡಿಗ ಮಯಾಂಕ್ ಅಗರ್ವಾಲ್ 46 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 8 ಬೌಂಡರಿ ಒಳಗೊಂಡ 83 ರನ್ ಗಳಿಸಿ ಮಧ್ವಲ್ ಎಸೆತದಲ್ಲಿ ಕ್ಯಾಚ್ ನೀಡಿ ನಿರ್ಗಮಿಸಿದರು. ಬಳಿಕ ಬಂದ ಕ್ಲಾಸೇನ್(18), ಗ್ಲೇನ್ ಪಿಲಿಪ್ಸ್(1), ಮಾಕ್ರಂ(13), ಹ್ಯಾರಿ ಬ್ರೂಕ್(0), ಸನ್ವೀರ್ ಸಿಂಗ್ 4 ರನ್ ಗಳಿಸಿ 200 ಗಡಿ ಗಳಿಸಿದರು. ಮುಂಬೈ ಪರ ಆಕಾಶ್ ಮಧ್ವಲ್ 4 ವಿಕೆಟ್ ಉರುಳಿಸಿದರೆ, ಜೋರ್ಡನ್ 1 ವಿಕೆಟ್ ಪಡೆದರು. ಈ ಬಾರಿಯ ಕಪ್ ಗೆಲ್ಲುವ ಕನಸು ಹೊಂದಿದ್ದ ಆರ್‌ಸಿಬಿ, ಗುಜರಾತ್ ವಿರುದ್ಧ ಸೋಲು ಅನುಭವಿಸಿ ಪ್ಲೇಆಫ್ ತಲುಪಲು ವಿಫಲವಾಯಿತು. ಇದರಿಂದ ಮುಂಬೈ ಪ್ಲೇಆಫ್ ತಲುಪಲು ಅನುಕೂಲವಾಯಿತು. ಕ್ಯಾಮರೂನ್ ಗ್ರೀನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಕಪ್ ಗೆಲ್ಲುವ ಆರ್‌ಸಿಬಿ ಕನಸು ಭಗ್ನ

ಗುಜರಾತ್ ವಿರುದ್ಧ ಸೋತು ಟೂರ್ನಿಯಿಂದಲೇ ಹೊರಬಿದ್ದ ಆರ್‌ಸಿಬಿ

ಬೆಂಗಳೂರು,ಮೇ 21(ಸಿಎನ್)–ಶುಭಮನ್ ಗಿಲ್ ಶತಕ, ವಿಜಯ್‌ಶಂಕರ್ ಅರ್ಧ ಶತಕದ ನೆರವಿನಿಂದ ಆರ್‌ಸಿಬಿ ವಿರುದ್ಧ ಗುಜರಾತ್ ಗೆಲುವು ಸಾಧಿಸಿತು. ಆರ್‌ಸಿಬಿ ಈ ಸೋಲಿನಿಂದ ಟೂರ್ನಿಯಿಂದ ಹೊರಬಿದ್ದಿದ್ದಾರೆ.



ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ ನೀಡಿದ 198 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಗುಜರಾತ್ 19.1 ಓವರ್‌ಗಳಲ್ಲೇ ಗೆಲುವು ಸಾಧಿಸಿತು. ತಂಡದ ಪರ ಶುಭಮನ್ ಗಿಲ್ ಅಜೇಯ 104 ರನ್, ವೃದ್ಧಿಮಾನ್ ಸಾಹಾ(12), ವಿಜಯ್‌ಶಂಕರ್ 53 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಶನಕ ಶೂನ್ಯಕ್ಕೆ ನಿರ್ಗಮಿಸಿದರೆ, ಡೇವಿಡ್‌ಮಿಲ್ಲರ್ 6 ರನ್ ಗಳಿಸಿ ಕ್ಯಾಚ್ ನೀಡಿದರು. ರಾಹುಲ್ ತೇವಾಟಿಯಾ 4 ರನ್ ಗಳಿಸಿ ತಂಡದ ಗೆಲುವಿಗೆ ನೆರವಾದರು. ಆರ್‌ಸಿಬಿ ಪರ ಸಿರಾಜ್ 2 ವಿಕೆಟ್ ಕಿತ್ತರೆ, ವಿಜಯ್‌ಕುಮಾರ್, ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಪಡೆದರು. ಉಳಿದ ಬೌಲರ್‌ಗಳು ರನ್ ಬಿಟ್ಟುಕೊಟ್ಟು ದುಬಾರಿಯಾಗಿ ತಂಡದ ಸೋಲಿಗೆ ಕಾರಣರಾದರು. ಅಂತಿಮವಾಗಿ ಆರ್‌ಸಿಬಿ ಸೋತು ಟೂರ್ನಿಯಿಂದ ಹೊರಬಿತ್ತು.

ಇದಕ್ಕೂ ಮುನ್ನ ಬ್ಯಾಟ್ ಮಾಡಿದ ಆರ್‌ಸಿಬಿ ತಂಡ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 197 ರನ್‌ಗಳ ಬೃಹತ್ ಮೊತ್ತದ ಗುರಿ ನೀಡಿತ್ತು. ತಂಡದ ಪರ ವಿರಾಟ್‌ಕೊಹ್ಲಿ 61 ಎಸೆತಗಳಲ್ಲಿ ಅಜೇಯ 101 ರನ್ ಗಳಿಸಿದರೆ, ಫಾಫ್ ಡುಪ್ಲೆಸಿಸ್ (28), ಮಾಕ್ಸ್‌ವೆಲ್(11), ಲೋಮ್ರೋರ್(1), ಬ್ರೇಸ್‌ವೆಲ್(26), ಕಾರ್ತಿಕ್(0), ಅನುಜ್‌ರಾವತ್(23) ಗಳಿಸಿ ಬೃಹತ್ ಮೊತ್ತ ಪೇರಿಸುವಲ್ಲಿ ನೆರವಾದರು. ಗುಜರಾತ್ ಪರ ನೂರ್‌ಅಹ್ಮದ್ 2 ವಿಕೆಟ್ ಉರುಳಿಸಿದರೆ, ಶಮಿ, ಯಶ್ ದಯಾಳ್, ರಶೀದ್‌ಖಾನ್ ತಲಾ ಒಂದೊಂದು ವಿಕೆಟ್ ಪಡೆದು ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. ಶುಭಮನ್ ಗಿಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಲೆಜೆಂಡ್ಸ್ ಪ್ರೀಮಿಯರ್ ಲೀಗ್ ಟಿ-10

ದಿ ಮೈಸೂರು ಮಹಾರಾಜಾಸ್ ಚಾಂಪಿಯನ್

ಮೈಸೂರು, ಮೇ 21(ಎಂಕೆ)– ಮೈಸೂರು ಮಾನಸಗಂಗೋತ್ರಿಯ ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಎರಡು ದಿನಗಳ 'ಲೆಜೆಂಡ್ಸ್ ಪ್ರೀಮಿಯರ್ ಲೀಗ್ ಟಿ–10' ಪಂದ್ಯಾವಳಿಯಲ್ಲಿ 'ದಿ ಮೈಸೂರು ಮಹಾರಾಜಾಸ್' ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮಳೆಯಿಂದಾಗಿ 5 ಓವರ್‌ಗಳಿಗೆ ಸೀಮಿತವಾದ ಫೈನಲ್ ಪಂದ್ಯದಲ್ಲಿ ದಿ ಮೈಸೂರು ಲ್ಯಾನ್ಸರ್ಸ್ ವಿರುದ್ಧ ದಿ ಮೈಸೂರು ಮಹಾರಾಜಾಸ್ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು. ಟಾಸ್‌ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಿ ಮೈಸೂರು ಲ್ಯಾನ್ಸರ್ಸ್, ನಿಗದಿತ 5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 32 ಗಳಿಸಿತು.



33 ರನ್‌ಗಳ ಗುರಿ ಬೆನ್ನತ್ತಿದ ದಿ ಮೈಸೂರು ಮಹಾರಾಜಾಸ್ ತಂಡ ಕೇವಲ 2.1 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಗೆಲುವು ದಾಖಲಿಸಿತು. ತಂಡ ಪರ 9 ಎಸೆತಗಳಲ್ಲಿ 16 ರನ್ ಬಾರಿಸಿದ ಚಂದ್ರಶೇಖರ್ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರೆ, ಅತ್ಯುತ್ತಮ ಬ್ಯಾಟ್ಸ್‌ಮನ್ ಎ.ವಿ.ಸಂದೀಪ್ (ದಿ ಮೈಸೂರು ಲ್ಯಾನ್ಸರ್ಸ್), ಅತ್ಯುತ್ತಮ ಬೌಲರ್ ಸುನೀಲ್ ಚಿನ್ನಸ್ವಾಮಿ(ದಿ ಮೈಸೂರು ಮಹಾರಾಜಾಸ್) ಹಾಗೂ ಅತ್ಯುತ್ತಮ ಫೀಲ್ಡರ್ ಪ್ರಶಸ್ತಿಯನ್ನು ಎ.ಸಿ.ಚೇತನ್‌ಕುಮಾರ್(ದಿ ಮೈಸೂರು ಲ್ಯಾನ್ಸರ್ಸ್) ಪಡೆದುಕೊಂಡರು.

ಬಳಿಕ ನಡೆದ ಸಮಾರೋಪ ಸಮಾರಂಭದಲ್ಲಿ ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ, ಸುಪ್ರೆಸ್ಟ್ ಎಜುಕೇಷನ್ ಟ್ರಸ್ಟ್ ಮುಖ್ಯಸ್ಥ ದಲ್ಜೀತ್ ರಾವ್, ಹಿರಿಯ ಕ್ರಿಕೆಟ್ ತರಬೇತುದಾರ ಡಾ.ಮನ್ಸೂರ್ ಅಹಮದ್ ವಿಜೇತ ತಂಡ ಹಾಗೂ ರನ್ನರಪ್ ತಂಡ ಬಹುಮಾನ ವಿತರಣೆ ಮಾಡಿದರು.

ಮೊಮ್ಮಗ 12ನೇ ತರಗತಿ ಪಾಸ್; ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಸಿಎಂ ಭಾಗಿ

ಬೆಂಗಳೂರು, ಮೇ 21– ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೊಮ್ಮಗ ಕೆನಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಬೆಂಗಳೂರಿನಲ್ಲಿ 12ನೇ ತರಗತಿ ಪಾಸಾಗಿದ್ದು, ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಖುದ್ದು ಸಿದ್ದರಾಮಯ್ಯ ಹಾಜರಾಗಿದ್ದರು. ಸಿದ್ದರಾಮಯ್ಯ ಅವರ ಪುತ್ರ ರಾಕೇಶ್ ಅವರ ಮಗ ಧವನ್ ರಾಕೇಶ್ ಕೆನಡಿಯನ್ ಇಂಟರ್‌ನ್ಯಾಷನಲ್ ಸ್ಕೂಲ್ ಆಫ್ ಬೆಂಗಳೂರಿನಲ್ಲಿ 12ನೇ ತರಗತಿ ಪಾಸಾಗಿದ್ದು, ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಇಂದು ಶಾಲೆಯಲ್ಲಿ ಬೀಳ್ಕೊಡುಗೆ ನಡೆಯಿತು.

ಈ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಉಪಸ್ಥಿತರಿದ್ದು, ಬಳಿಕ ಮೊಮ್ಮಗ ಪಾಸಾದ ಖುಷಿಯನ್ನು ಟ್ವೀಟ್ ಮಾಡಿ ಹಂಚಿಕೊಂಡಿದ್ದಾರೆ



ಮೂರು ದಿನದ ಕಿರು ನಾಟಕೋತ್ಸವಕ್ಕೆ ವರ್ಣರಂಜಿತ ತೆರೆ



ಮೈಸೂರು, ಮೇ 21(ಸಿಎನ್)–ಬೇರೆ ರಾಜ್ಯಗಳ ಇತಿಹಾಸಕ್ಕೆ ಹೋಲಿಸಿದರೆ ನಮ್ಮ ಕರ್ನಾಟಕದ ಇತಿಹಾಸ ಅತ್ಯಂತ ಪ್ರಬಲವಾಗಿದೆ. ಪ್ರತಿಯೊಬ್ಬರು ನಮ್ಮ ರಾಜ್ಯದ ಇತಿಹಾಸ ತಿಳಿದುಕೊಳ್ಳಬೇಕು ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಸಲಹೆ ನೀಡಿದರು.

ನಗರದ ರಮಾಗೋವಿಂದ ರಂಗಮಂದಿರದಲ್ಲಿ ರಂಗ ವಸಂತ ಶೀರ್ಷಿಕೆಯಡಿ, ನಿರಂತರ ಫೌಂಡೇಷನ್ ಹಾಗೂ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಸಹಯೋಗದಲ್ಲಿ ಭಾನುವಾರ ಆಯೋಜಿಸಲಾಗಿದ್ದ ರಂಗ ವಸಂತ 2023ರ ಕೊನೆಯ ನಾಟಕ 'ವಾರಸುದಾರ' ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಹಾರಾಷ್ಟ್ರದ ಇತಿಹಾಸದಲ್ಲಿ ಶಿವಾಜಿಯನ್ನು ವೈಭವೀಕರಿಸಲಾಗಿದೆ. ತಮಿಳುನಾಡಿನಲ್ಲಿ ಚೋಳರು, ಆಂಧ್ರದಲ್ಲಿ ಶಾತವಾಹನರು ಹೀಗೆ ಆಯಾ ರಾಜ್ಯದ ಪ್ರಮುಖ ರಾಜರನ್ನೇ ಕೊಂಡಾಡಲಾಗಿದೆ. ಆದರೆ ಕರ್ನಾಟಕದಲ್ಲಿ ಪರಿಸ್ಥಿತಿ ಬೇರೆಯೇ ಇದೆ. ಇಲ್ಲಿ ಎಲ್ಲಾ ಭಾಗದ ರಾಜರು ಆಳಿದ್ದಾರೆ. ಅದರಲ್ಲೂ ನಮ್ಮ ಗಂಗರು, ಚಾಲುಕ್ಯರು, ಕದಂಬರು, ರಾಷ್ಟ್ರಕೂಟರು ಭಾರತದ ದಕ್ಷಿಣ ಭಾಗವನ್ನು ಆಳುವ ಮೂಲಕ ಕರ್ನಾಟಕವನ್ನು ದಕ್ಷಿಣ ಭಾರತದ ಕೇಂದ್ರ ಎನ್ನಲಾಗುತ್ತಿತ್ತು ಸುಮಾರು 100 ವರ್ಷಗಳ ಕಾಲ ಚೋಳರ ಆಡಳಿತ ಬಿಟ್ಟರೆ ಉಳಿದ ಎಲ್ಲಾ ಕಾಲಘಟ್ಟದಲ್ಲೂ ನಮ್ಮ ರಾಜರು ಎಲ್ಲಾ ರೀತಿಯಲ್ಲೂ ಭಾರತದ ಇತಿಹಾಸದ ಮೇಲೆ ಪ್ರಭಾವ ಬೀರಿದ್ದಾರೆ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಮೊಘಲರ ವಂಶಾವಳಿಯಲ್ಲಿನ ಘಟನೆ ಮತ್ತು ಸಂಘರ್ಷ ಒಳಗೊಂಡ 'ವಾರಸುದಾರ' ನಾಟಕ ಪ್ರದರ್ಶನ ನಡೆಯಿತು. ಈ ವೇಳೆ ಬಿಬಿಎಂಪಿ ವಿಶೇಷ ಆಯುಕ್ತ ಜಯರಾಮ್ ರಾಯಪುರ, ನೃಪತುಂಗಾ ಕನ್ನಡ ಶಾಲೆ ಕಾರ್ಯದರ್ಶಿ ಸವಿತಾ, ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜು, ನಿರ್ದೇಶಕ ಪ್ರಸಾದ್ ಕುಂದೂರು ನಿರಂತರ ಸಂಸ್ಥೆ, ಮತ್ತಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ: ರೀ... ನೋಡ್ರಿ, ನಮ್ಮ ಮಗ ತುಂಬಾನೆ ದುಡ್ಡು ಕದ್ದು ಖರ್ಚು ಮಾಡ್ತಿದಾನೆ...

ಗಂಡ: ದುಡ್ಡು ಅವನಿಗೆ ಸಿಗದಂತೆ ಬಚ್ಚಿಡು...

ಹೆಂಡತಿ: ಇಲ್ಲಾ ರೀ... ಎಲ್ಲಿ ಇಟ್ಟರೂ ಆತ ಬಿಡ್ತಿಲ್ಲ... ಕದಿಯುತ್ತಿದ್ದಾನೆ.

ಗಂಡ: ಹೌದಾ... ಹಾಗಾದರೆ ಬುಕ್ಕಲ್ಲಿ ಬಚ್ಚಿಡು, ಮುಂದಿನ ಎಕ್ಸಾಮ್‌ವರೆಗೂ ಬುಕ್ ನೋಡಲ್ಲ ಅವನು...!

ಮೈಸೂರು ಮಿತ್ರ

ಸೋಮವಾರ, 22 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಮೌನ ವ್ರತ ಎನ್ನುವುದು ಕೇವಲ ಒಂದು ವ್ರತ. ಅದು ಧ್ಯಾನದಲ್ಲಿ ಸ್ವಲ್ಪ ಮಟ್ಟಿಗೆ ಸಹಾಯಕವಾಗುವುದು. ಆದರೆ, ಸುಮ್ಮನೆ ಬಾಯಿ ಮುಚ್ಚಿಕೊಂಡಿದ್ದರೆ, ಮನಸ್ಸು ಹುಚ್ಚೆದ್ದು, ಅಲೆಯುತ್ತಿದ್ದರೆ ಅದರಿಂದ ಏನು ಪ್ರಯೋಜನ?

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಮಸ್ಯೆಯೆಂದರೆ ಸಾವಲ್ಲ, ಜೀವನ.

ನಿಮ್ಮ ಪತ್ರಗಳು

■ ಉಚಿತ ವಿದ್ಯುತ್ ಯೋಜನೆ ಪರಿಸರಕ್ಕೆ ಹೊರೆಯಾಗದಂತಿರಲಿ

ಮಾನ್ಯರೆ,



ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತಿದ್ದಂತೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ರಾಜ್ಯದಲ್ಲಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ತಿಳಿಸಿರುವ ಬೆನ್ನ ಹಿಂದೆಯೇ ಚರ್ಚೆಗಳು ಆರಂಭವಾಗಿವೆ. ಉಚಿತ 200 ಯೂನಿಟ್ ವಿದ್ಯುತ್ ಯೋಜನೆ ಆರ್ಥಿಕ ಹೊರೆ ಎಂಬ ಕೂಗು ಒಂದೆಡೆಯಾದರೆ, ಪರಿಸರ ಪ್ರಿಯರ ಚಿಂತೆ ದೂರಗಾಮಿಯದ್ದಾಗಿದೆ.

ನಮ್ಮ ವಿದ್ಯುತ್ ಉತ್ಪಾದನೆಯ ಬಹುಪಾಲು ಇಂದಿಗೂ ಕಲ್ಲಿದ್ದಲು ಸೇರಿದಂತೆ ಪಳೆಯುಳಿಕೆ ಇಂಧನದಿಂದ ಬರುತ್ತಿದ್ದು, ಇದರಿಂದ ತಾಪಮಾನ ಏರಿಕೆ ಹಾಗೇ ಕಲ್ಲಿದ್ದಲಿನ ಆಮದಿನ ಹೊರೆಯೂ ಇದೆ. ಹೀಗಾಗಿ ನವೀಕರಣ ಇಂಧನಕ್ಕೆ ಭಾರತವೂ ಸೇರಿದಂತೆ ಇಡೀ ಪ್ರಪಂಚ ಪ್ರಾಮುಖ್ಯತೆ ನೀಡುತ್ತಿದೆ.

ಉಚಿತ ವಿದ್ಯುತ್ ಯೋಜನೆ ಹೊಡೆತಕ್ಕೆ, ಸೋಲಾರ್ ಮೂಲಕ ವಿದ್ಯುತ್ ಉತ್ಪಾದಿಸುವ ಸರ್ಕಾರದ ಸೌರಗೃಹ ಯೋಜನೆ ಮಕಾಡೆ ಮಲಗುತ್ತದೆ. ಇದರೊಂದಿಗೆ ಸೋಲಾರ್ ಉದ್ಯಮ ಬಾಗಿ ಹೋಗುವುದೂ ಇದೆ. ಇನ್ನೂ ಕಾಳಜಿ ಎಂದರೆ ಹೆಚ್ಚುವ ಗೃಹ ವಿದ್ಯುತ್ ಬಳಕೆಯದು. ಸುಮಾರು ಒಂದು ಕೋಟಿಗೂ ಹೆಚ್ಚಿನ ಗೃಹ ಬಳಕೆ ಸ್ಥಾವರಗಳಲ್ಲಿ ಶೇಕಡಾ ಎಂಬತ್ತಕ್ಕಿಂತಲೂ ಹೆಚ್ಚಿನ ಬಳಕೆ ಮಾಡುವ ವಿದ್ಯುತ್ ನೂರರಿಂದ ನೂರೈವತ್ತು ಯೂನಿಟ್ ಮಾತ್ರ. ಈಗ ಉಚಿತ ಎಂಬ ಕಾರಣಕ್ಕೆ ಬೇಜವಾಬ್ದಾರಿಯಿಂದ ಬಳಸುವ ಸಾಧ್ಯತೆ ಹೆಚ್ಚು.

ಇದಲ್ಲದೇ ಇಂಧನ ಇಲಾಖೆ ಹೆಚ್ಚಿನ ಕ್ಷಮತೆ ಹೊಂದಿದ "ಸ್ಟಾರ್ ರೇಟೆಡ್" ಉಪಕರಣ ಬಳಸಲು ಪ್ರೋತ್ಸಾಹಿಸುತ್ತಿದೆ. ಇವುಗಳ ಖರೀದಿ ದರ ಹೆಚ್ಚಾದರೂ ವಿದ್ಯುತ್ ಉಳಿತಾಯ ಮಾಡುತ್ತವೆ. ಈಗ ವಿದ್ಯುತ್ ಉಚಿತ ಎಂಬ ಕಾರಣದಿಂದ ಜನರು ಕಡಿಮೆ ದರದ ಉಪಕರಣಗಳನ್ನು ಖರೀದಿಸಿಯಾರು.

ವಿದ್ಯುತ್ ದರದ ಕಾರಣದಿಂದ ಅನೇಕ ಮಧ್ಯಮ ವರ್ಗ ಹವಾನಿಯಂತ್ರಣ ಬಳಕೆಯಿಂದ ಹೊರಗಿದೆ. ಇನ್ನು ಅನುಕೂಲಕ್ಕೊ, ಪ್ರತಿಷ್ಠೆಗಾಗೋ ಹವಾನಿಯಂತ್ರಣ ಬಳಕೆ ಹೆಚ್ಚಾದೀತು. ಹವಾನಿಯಂತ್ರಣಗಳು ವಿದ್ಯುತ್ ಬಳಕೆ ಮಾತ್ರವಲ್ಲದೇ , ತಾವು ಬಳಸುವ ರಾಸಾಯನಿಕ ಮೂಲಕವೂ ಜಾಗತಿಕ ತಾಪಮಾನ ಏರಿಕೆಗೆ ಹಾಗೂ ಓಜೋನ್ ರಂಧ್ರಕ್ಕೂ ಕಾರಣವಾಗುತ್ತವೆ.

ಜಾಗತಿಕ ವೇದಿಕೆಯಲ್ಲಿ ಭಾರತ ತಾಪಮಾನ ಏರಿಕೆಯ ವಿರುದ್ಧ ತನ್ನ ಗುರಿ ಹಾಗೂ ಬದ್ಧತೆ ಈಗಲೂ ಪುನರುಚ್ಚರಿಸುತ್ತಿದೆ. 2070 ರಲ್ಲಿ "ಕಾರ್ಬನ್ ನ್ಯೂಟಲ್" ಮಹತ್ವಾಕಾಂಕ್ಷೆ ಹೊಂದಿದೆ. ಜಗತ್ತಿನ ಅನೇಕ ದೇಶಗಳು ಈ ಉದ್ದೇಶಕ್ಕಾಗಿ ಭಾರತಲ್ಲಿ ಹೂಡಿಕೆ ಮಾಡಲಿವೆ. ಉಚಿತ ಯೋಜನೆಯ ಕಾರಣದಿಂದ ಗೃಹ ಬಳಕೆ ವಿದ್ಯುತ್ ಹೆಚ್ಚಾಗದಿರಲಿ. ಈ ಬಗ್ಗೆ ಅರಿವು ಅಗತ್ಯ.

ಉಚಿತ ವಿದ್ಯುತ್ ಯೋಜನೆ ಬಡವರಿಗೆ ಅನುಕೂಲವಾದರೂ, ಸರ್ಕಾರಕ್ಕೆ ಆರ್ಥಿಕ ಹೊರೆಯಾದರೂ, ಪರಿಸರಕ್ಕೆ ಮಾತ್ರ ಹಾನಿಯಾಗದಿರಲಿ. ನೂತನ ಸರ್ಕಾರ ತನ್ನ ಗ್ಯಾರಂಟಿಯಿಂದ ಹಿಂದೆ ಸರಿಯಲಿ ಎಂಬ ಉದ್ದೇಶ ಇಲ್ಲಿಲ್ಲ. ಕೇವಲ ಯೋಜನೆಯಿಂದಾಗಿ ವಿದ್ಯುತ್ ಬಳಕೆ ಹೆಚ್ಚದಿರಲಿ ಎಂಬುದೇ ಪರಿಸರ ಪ್ರಿಯರ ಆಶಯ.

– ಅನಿಲ್ ಕುಮಾರ್ ನಾಡಿಗೇರ್, ಇಂಧನ ಹಾಗೂ ಪರಿಸರ ಸಲಹೆಗಾರರು, ಮೈಸೂರು. ಮೊ.ನಂ.9449837309

■ ಸಂಸತ್ ಅನುಭವ ಮಂಟಪವಾಗಲಿ

ಮಾನ್ಯರೆ,



75ನೇ ವರ್ಷದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ನವದೆಹಲಿಯಲ್ಲಿ ನಿರ್ಮಿಸಲಾಗಿರುವ ನೂತನ ಸಂಸತ್ ಭವನವನ್ನು ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಅವರು ಉದ್ಘಾಟಿಸಲಿದ್ದಾರೆ ಎಂಬ ಬಗ್ಗೆ ಚರ್ಚೆ ಶುರುವಾಗಿದೆ. ಈ ದೇಶದ ಜವಾಬ್ದಾರಿಯುತ ನಾಗರಿಕನಾಗಿ ನನ್ನ ಇಚ್ಛೆಯೆಂದರೆ ಹೊಸ ಸಂಸತ್ ಭವನವು ಅನುಭವ ಮಂಟಪವಾಗಲಿ ಮತ್ತು ಸರ್ವ ಜನಾಂಗದ ಶಾಂತಿಯ ತವರಾಗಲಿ. ಅಮೃತ ಮಹೋತ್ಸವದ ಅಂಗವಾಗಿ ನಿರ್ಮಿಸಲಾದ ಈ ಸಂಸತ್ ಭವನವು ಕೇವಲ ಇಟ್ಟಿಗೆ ಮತ್ತು ಗಟ್ಟಿ ಕಲ್ಲುಗಳ ಹಾಗೂ ದುಬಾರಿ ಬೆಲೆಯ ನೆಲಹಾಸಿನ ಕಟ್ಟಡವಾಗದೆ ದೇಶದ 143 ಕೋಟಿ ಜನರ ಕನಸುಗಳ ಈಡೇರಿಸುವ ಭವನವಾಗಲಿ.

ಪ್ರತಿಯೊಬ್ಬ ಪ್ರಜೆಗೂ ನ್ಯಾಯ ಸಿಗುವಂತಾಗಲಿ. ಪ್ರತಿಯೊಬ್ಬ ಭಾರತೀಯನಿಗೂ ಸಿಗಬೇಕಾದ ಹಕ್ಕು ಮತ್ತು ಅವರ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳಲಿ. ಯಾವುದೇ ಜಾತಿ, ಧರ್ಮ, ಭಾಷೆ ಕುರಿತು ರಾಜಕೀಯ ಪಕ್ಷಗಳು ಕಾರ್ಯನಿರ್ವಹಿಸದೆ ನಮ್ಮ ಅಸ್ಮಿತೆ ಅಂದರೆ ಭಾರತ ದೇಶಕ್ಕಾಗಿ ಒಳಿತನ್ನು ಬಯಸುವಂತಾಗಲಿ . ಸಂಸತ್ ಭವನ ಎಂದರೆ ಪ್ರಜೆಗಳ ಪಾಲಿನ ದೇವಸ್ಥಾನ. ಪ್ರತಿಯೊಬ್ಬ ಪ್ರಜೆಯ ಸಮಸ್ಯೆಗೂ ಸಂಸತ್ ಭವನ ಪರಿಹಾರ ನೀಡುತ್ತದೆ ಎನ್ನುವುದು ಭಾರತೀಯರ ಅಭಿಪ್ರಾಯ. ಅವರ ಆಸೆಗೆ ಚ್ಯುತಿ ತರದ ಹಾಗೆ ಪ್ರತಿಯೊಬ್ಬ ಸಂಸದನು ಕಾರ್ಯ ನಿರ್ವಹಿಸಬೇಕಾದ ಜರೂರು ಸದ್ಯಕ್ಕಿದೆ.

– ಶ್ರೀಶೈಲ್ ಪಾಟೀಲ್, ಜೇವರ್ಗಿ

■ ಕನ್ನಡಿಗರಿಗೆ ಅಪಮಾನ...

ಮಾನ್ಯರೆ,

ರಾಜ್ಯದ ನೂತನ ಸಚಿವ ಸಂಪುಟದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಜಮೀರ್ ಅಹಮದ್ ಖಾನ್ ಇಂಗ್ಲೀಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದು, ಒಂದು ರೀತಿಯಲ್ಲಿ ಕನ್ನಡಿಗರಿಗೆ ಅಪಮಾನ ಮಾಡಿದಂತೆ. ಇವರು ಹುಟ್ಟಿ ಬೆಳೆದದ್ದು, ಬೆಂಗಳೂರಿನಲ್ಲೆ. ಅವರೇ ಹೇಳುವಂತೆ ಅವರು ವ್ಯಾಸಂಗ ಮಾಡಿದ್ದು ಆದಿಚುಂಚನಗಿರಿ ಶಾಖಾ ಮಠದಲ್ಲಿ, ಆದರೂ ಇವರಿಗೆ ನಾಲ್ಕೈದು ಸಾಲುಗಳನ್ನು ಕನ್ನಡದಲ್ಲಿ ಓದಲು ಬರುವುದಿಲ್ಲವೆಂಬುದು ನಾಚಿಕೆಗೇಡಿನ ಸಂಗತಿ.

ಇವರೇನಾದರು ಉದ್ದೇಶಪೂರ್ವಕವಾಗಿ ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದೇ ಆದರೆ, ಸಮಸ್ತ ಕನ್ನಡಿಗರ ಕ್ಷಮೆಯಾಚಿಸಲಿ,

– ಬೂಕನಕೆರೆ ವಿಜೇಂದ್ರ, ಮೈಸೂರು, ಮೊ.ನಂ.94480 26186



ಜಿ.ಎಲ್. ತ್ರಿಪುರಾಂತಕ

ಮೊಬೈಲ್ ನಂ.: 96866–77284

ಬೆರಗು

ಸಾಯೋಕೆ ಮೂರು ದಾರಿ; ಬದುಕೋಕೆ ನೂರು ದಾರಿ...!



"ಒಮ್ಮೊಮ್ಮೆ ಸೋಲು ವರವಾಗಿ ಪರಿಣಮಿಸುವುದೂ ಉಂಟು. ಒಂದು ಶಾಲೆಯಲ್ಲಿ ಶಿಕ್ಷಕರೊಬ್ಬರು ಮುಂದಿನ ಬೆಂಚಿನ ಜಾಣ ಹುಡುಗನನ್ನು ಹೋಲಿಕೆ ಮಾಡಿಕೊಂಡು ಕಡೇ ಬೆಂಚಿನ ವಿದ್ಯಾರ್ಥಿ ಒಬ್ಬನನ್ನು ಹೀಯ್ಯಾಳಿಸುತ್ತಲೇ ಇದ್ದರು. ಪರೀಕ್ಷೆಯಲ್ಲಿ ಮುಂದಿನ ಬೆಂಚಿನ ಹುಡುಗ ಶಾಲೆಗೆ ಮೊದಲಿಗನಾದ, ಕಡೆಯ ಬೆಂಚಿನ ವಿದ್ಯಾರ್ಥಿ ಅನುತ್ತೀರ್ಣನಾದ. ಅವನನ್ನು ಕರೆದು ನಿನಗೆ ಭವಿಷ್ಯವಿಲ್ಲ ಎಂದು ಕೋಪದಿಂದಲೇ ಬೈದು ಕಳುಹಿಸಿಬಿಟ್ಟರು. ಕಾಲಾನಂತರ ಮುಂದಿನ ಬೆಂಚಿನ ಹುಡುಗ ಐಎಎಸ್ ಅಧಿಕಾರಿಯಾದ. ಕಡೆ ಬೆಂಚಿನ ವಿದ್ಯಾರ್ಥಿ ರಾಜಕಾರಣಿಯಾದ. ಒಮ್ಮೆ ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಮಾವೇಶಕ್ಕೆ ಎಲ್ಲಾ ವಿದ್ಯಾರ್ಥಿಗಳನ್ನು ಆಹ್ವಾನಿಸಿದಾಗ ಕಡೆಯ ಬೆಂಚಿನ ವಿದ್ಯಾರ್ಥಿ ಸಚಿವನಾಗಿ ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದಿದ್ದ, ಆದರೆ ಅವನೊಂದಿಗೆ ಬಂದಿದ್ದ ಐಎಎಸ್ ಅಧಿಕಾರಿ ಮೊದಲ ಬೆಂಚಿನ ವಿದ್ಯಾರ್ಥಿಯಾಗಿದ್ದ. ಗುರುಗಳಿಗೆ ಇಬ್ಬರ ಬೆಳವಣಿಗೆ ಕಂಡು ಸಂತೋಷವಾಗಿತ್ತು, ಆದರೆ ಅವರು ಕಡೆಯ ಬೆಂಚಿನ ವಿದ್ಯಾರ್ಥಿಗೆ ಅಂದು ಬೈದದ್ದು ಅವರನ್ನು ಕಾಡುತ್ತಲೇ ಇತ್ತು.

ಭೂಮಿಯ ಮೇಲೆ ಜನ್ಮ ತಾಳಿದ ಪ್ರತಿಯೊಂದು ಜೀವಿಯೂ ಒಂದಲ್ಲ ಒಂದು ದಿನ ಇಲ್ಲಿಂದ ನಿರ್ಗಮಿಸಲೇಬೇಕು. ಸಾವು ಎಂಬುದು ಹುಟ್ಟಿನಷ್ಟೇ ಸ್ವಾಭಾವಿಕ. ಹಾಗೆಯೇ ಹುಟ್ಟು ಆಕಸ್ಮಿಕವಾಗಬಹುದು, ಆದರೆ ಸಾವು ಮಾತ್ರ ನಿಶ್ಚಿತ. ಆಕಸ್ಮಿಕವಾದ ಹುಟ್ಟನ್ನು ಸ್ವೀಕರಿಸುವಷ್ಟೇ ಸಲೀಸಾಗಿ ನಿಶ್ಚಿತವಾದ ಸಾವನ್ನು ಸ್ವೀಕರಿಸಲು ಮನುಷ್ಯನ ಮನಸ್ಸು ಸಿದ್ಧಗೊಂಡಿರುವುದಿಲ್ಲ. ಆದರೆ ಹುಟ್ಟು ಹುಟ್ಟಿಸುವ ಭರವಸೆ, ಆಸೆ, ಆನಂದದಷ್ಟೇ ಸಾವು ಎಂಬುದು ನೋವು, ಸಂಕಟ ಹಾಗೂ ಯಾತನೆಯನ್ನು ತಂದೊಡುತ್ತದೆ. ಅಕಾಲಿಕ ಸಾವಾದರಂತೂ ಮನೆಯವರ ಸಂಕಟ ಹೇಳತೀರದು. ಕೆಲವು ವ್ಯಕ್ತಿಗಳ ಸಾವಾದರಂತೂ ಅದು ತುಂಬಲಾರದ ನಷ್ಟ. ಅಂತಹ ಕುಟುಂಬ ವ್ಯವಸ್ಥೆಯನ್ನು ಬುಡಮೇಲು ಮಾಡುತ್ತದೆ. ಅನಾರೋಗ್ಯದಿಂದಲೋ, ಅನಾಹುತದಿಂದಲೋ, ಅಪಘಾತದಿಂದಲೋ, ವಯೋ ಸಹಜವಾಗಿಯೋ ಸಾವುಂಟಾದರೆ ಅದು ನಮ್ಮ ಕೈಯಲ್ಲಿ ಇರಲಿಲ್ಲ ಎನ್ನಬಹುದು. ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದು ಮಾತ್ರ ಹೇಯ ಹಾಗೂ ಆಘಾತಕಾರಿ ಸಂಗತಿ. ಕಾರಣ ಏನೇ ಇರಬಹುದು ಆತ್ಮಹತ್ಯೆಯು ಅವರ್ಣನೀಯವಾದ, ಅಸಹನೀಯವಾದ ನೋವನ್ನು ಉಂಟು ಮಾಡುತ್ತದೆ.

'ಆತ್ಮಹತ್ಯೆಯು ತಾತ್ಕಾಲಿಕ ಸಮಸ್ಯೆಗೆ ಶಾಶ್ವತ ಪರಿಹಾರ' ಎಂಬ ಆಂಗ್ಲ ನಾಣ್ಣುಡಿಯೊಂದಿದೆ. ಹೌದು, ಸಮಸ್ಯೆಗಳು ನಿಂತ ನೀರಲ್ಲ, ಹರಿಯುವ ನೀರಿನಂತೆ. ಇಂದು ಕಾರ್ಮೋಡವಾಗಿ ಕಂಡದ್ದು ನಾಳೆ ಅದು ಬೆಳ್ಳಿಮೋಡವೇ ಆಗಿಬಿಡಬಹುದು. ಒಂದೇ ತೆರನಾದ ಕಷ್ಟ ಒಬ್ಬೊಬ್ಬರಿಗೆ ಒಂದೊಂದು ರೀತಿ ಕಾಣಬಹುದು. ಮನುಷ್ಯ ಎಂಬ ವಿಚಿತ್ರ ಪ್ರಾಣಿ ಅನೇಕ ಸಂಗತಿಗಳನ್ನು ವಿಚಿತ್ರವಾಗಿಯೇ ಕಾಣುತ್ತಾನೆ. ಮನುಷ್ಯನಿಗೆ ಇರುವ ಊಹೆ ಎಂಬ ಸಾಮರ್ಥ್ಯವು ಒಂದು ವರವೂ ಹೌದು, ಒಂದು ಶಾಪವೂ ಹೌದು. ಅನೇಕರು ತಮ್ಮ ಭವಿಷ್ಯದ ಭದ್ರತೆ ಬಗ್ಗೆ ಅಭದ್ರತೆ ಅನುಭವಿಸುವುದು ಊಹೆಯಿಂದಲೇ. ಇದು ಹೀಗಾಗಿಬಿಟ್ಟರೆ, ಹಾಗಾಗಿಬಿಟ್ಟರೆ ಎಂದು ಕಲ್ಪಿಸಿಕೊಂಡು ಕನವರಿಸುವವರೇ ಹೆಚ್ಚು. ಆ ಕಾರಣದಿಂದಲೇ ಕೆಲವು ವಿದ್ಯಾರ್ಥಿಗಳು ಪರೀಕ್ಷೆ ಬರೆದು ಫಲಿತಾಂಶ ಬರುವ ಮುನ್ನವೇ ತಮಗೆ ಕಡಿಮೆ ಅಂಕ ಬರುತ್ತದೆ ಎಂದು ಭಾವಿಸಿ ತಮ್ಮ ಅಮೂಲ್ಯವಾದ ಜೀವನವನ್ನು ಅಂತ್ಯಗೊಳಿಸಿಕೊಂಡಿರುವ ವರದಿಗಳನ್ನು ಹಾಗಾಗ ನೋಡುತ್ತಿರುತ್ತೇವೆ.

ತಾಯಿತಂದೆಯರು ತಮ್ಮ ಜೀವನದ ಸುಖ ಸಂತೋಷಗಳನ್ನು ಬದಿಗೊತ್ತಿ ಮಕ್ಕಳ ಸುಖ ಸೌಖ್ಯಕ್ಕೆ ಹಗಲಿರುಳು ಚಿಂತಿಸುತ್ತಾರೆ. ಅಂಥ ತಾಯಿತಂದೆಯ ತ್ಯಾಗವನ್ನು ಮನಗಾಣದೆ ಯಕಶ್ಚಿತ್ ಒಂದು ಪರೀಕ್ಷೆಯಲ್ಲಿ ನಪಾಸಾದ ಕಾರಣಕ್ಕೆ ನೇಣಿಗೆ ಕೊರಳೊಡ್ಡುವುದು ಯಾವ ಪುರುಷಾರ್ಥ? ಹಾಗಾದರೆ ಶಿಕ್ಷಣದಿಂದ ಕಲಿತ ಪಾಠವಾದರೂ ಏನು? ಮನುಷ್ಯನಿಗೆ ಸೋಲು ಒಂದು ಬದುಕಿನ ಪಾಠವಾಗಬೇಕೇ ವಿನಃ ಒಂದು ಅಂತಿಮ ಪಥ್ಯವಾಗಬಾರದು. ಸಾವು ಸೋಲಿಗೆ ಪರಿಹಾರವಲ್ಲ. ಕ್ಷುಲ್ಲಕ ಕಾರಣಕ್ಕೆ ಸಾವಿಗೆ ಶರಣಾಗಿಬಿಡುವ ಪರಿಪಾಠ ಇತ್ತೀಚೆಗೆ ಹೆಚ್ಚಿದೆ. ಅನೇಕ ಸೋತ ಮನಸುಗಳಿಗೆ ಸಾವೇ ಸುಲಭ ಪರಿಹಾರ ಎಂದು ಅನ್ನಿಸಿಬಿಡುವುದು ಉಂಟು. ಪರೀಕ್ಷೆಯಲ್ಲಿ ಅನುತ್ತೀರ್ಣರಾದರೂ ಧೃತಿಗೆಡದೆ ಬದುಕನ್ನು ಸವಾಲಾಗಿ ಸ್ವೀಕರಿಸಿ ದೊಡ್ಡ ವಿಜ್ಞಾನಿ, ಸಾಹಿತಿ, ಉದ್ಯಮಿ ಆದ ಅನೇಕ ಉದಾಹರಣೆಗಳು ಇವೆ.

ಕರ್ನಾಟಕ ರಾಜ್ಯದ ಉದ್ಯಮ ಕ್ಷೇತ್ರದಲ್ಲಿ ಸಿದ್ಧಾರ್ಥ ಎಂಬ ಹೆಸರು ಕೇಳದವರೇ ಇಲ್ಲ. 'ಕೆಫೆ ಕಾಫಿ ಡೇ' ಹೆಸರಿನ ಘಮಲನ್ನು ದೇಶ ವಿದೇಶಗಳಿಗೆ ಹಬ್ಬಿಸಿದ ಕೀರ್ತಿ ಅವರದ್ದು. ಕಾಫಿನಾಡು ಚಿಕ್ಕಮಗಳೂರಿನ ಈ ಯುವ ಉದ್ಯಮಿ ಕೆಲಕಾಲದಲ್ಲಿಯೇ ಉದ್ಯಮ ಕ್ಷೇತ್ರದಲ್ಲಿ ದಾಪುಗಾಲು ಹಾಕಿ ಎಲ್ಲರ ಹುಬ್ಬೇರಿಸುವಂತೆ ಮಾಡಿದ್ದರು. ಅಷ್ಟೇ ಅಲ್ಲದೆ ಅನೇಕ ಉದ್ಯಮ ಆಕಾಂಕ್ಷಿಗಳಿಗೆ ಸ್ಫೂರ್ತಿಯಾಗಿದ್ದರು. ಅಂತಹ ಬ್ಯುಸಿನೆಸ್ ಐಕಾನ್ ಸಿದ್ಧಾರ್ಥ ತಮ್ಮ ವ್ಯವಹಾರದಲ್ಲಿ ಆದ ನಷ್ಟಕ್ಕೆ ಜೀವನ ಅಂತ್ಯಗೊಳಿಸಿಕೊಂಡರು. ಈ ಒಂದು ಸಾವು ಅವರ ಕುಟುಂಬಕ್ಕೆ ಮಾತ್ರ ನಷ್ಟ ಅಲ್ಲ ಇಡೀ ಸಮಾಜಕ್ಕೆ ಒಂದು ಋಣಾತ್ಮಕವಾದ ಸಂದೇಶವನ್ನು ನೀಡುತ್ತದೆ. ಇಂತಹ ಅನುಭವಸ್ಥ ಉದ್ಯಮಿ ಒಂದು ಸೋಲಿಗೆ, ಸಾಲದ ಭಯಕ್ಕೆ ಸಾವಿಗೆ ಶರಣಾದರೆ, ಅಷ್ಟೇನು ಅನುಭವವಿಲ್ಲದ ಸಿದ್ಧಾರ್ಥ ಅವರ ಪತ್ನಿ ಮಾಳವಿಕ ಅವರು ಕೇವಲ ಎರಡೇ ವರ್ಷದ ಎಲ್ಲವನ್ನು ನಿಭಾಯಿಸಿಕೊಂಡು, ತಮ್ಮ ಪತಿಯ ಬ್ಯುಸಿನೆಸ್‌ಗೆ ಚೈತನ್ಯ ನೀಡಿ ಕಂಪನಿಯ ಉತ್ತಮ ಸಿ.ಇ.ಓ. ಎನಿಸಿಕೊಂಡಿದ್ದಾರೆ.

ಇತ್ತೀಚಿನ ಅನೇಕ ವೈದ್ಯರು, ಇಂಜಿನಿಯರ್‌ಗಳು, ಉದ್ಯೋಗಿಗಳು, ಗೃಹಿಣಿಯರು, ನವವಿವಾಹಿತೆಯರು ಸಣ್ಣ ಸಣ್ಣ ಕಾರಣಗಳಿಗೆ ಸಾವೇ ಸುಖ ಎಂದು, ಅದನ್ನು ಅರಸಿ ಹೊರಟುಬಿಟ್ಟಿದ್ದಾರೆ. ಸಾವಿಗೆ ಸಾಲವೇ ಇಲ್ಲ ಸೋಲೇ ಕಾರಣವಾಗಿರುವುದಿಲ್ಲ. ಇಲ್ಲಿ ಅನೇಕರು ಬದುಕನ್ನು ಬಂದ ಹಾಗೆ ಸ್ವೀಕರಿಸುವ ಮನೋಭಾವ ಹೊಂದಿರುವುದಿಲ್ಲ. ಪ್ರತಿಷ್ಠೆಗಾಗಿ ಬದುಕನ್ನು ತೆಗೆದುಕೊಳ್ಳುತ್ತಾರೆ. ಬಹುಪಾಲು ಮಂದಿ ಸಾಲಕ್ಕೆ ಅಂಜಿ ಜೀವ ಕಳೆದುಕೊಂಡಿರುವುದಿಲ್ಲ, ಆದರೆ ಮಾನಕ್ಕೆ ಅಂಜಿ, ಸಮಾಜದ ಮುಂದೆ ತಲೆತಗ್ಗಿಸಿ ನಡೆಯಬೇಕಾಗುತ್ತದೆ ಎಂದು ಕಪೋಕಲ್ಪಿತ ಭಯದಿಂದ ಜೀವ ತ್ಯಜಿಸಿಬಿಡುತ್ತಾರೆ. ಗೊತ್ತಿರಲಿ ಈ ಸಮಾಜ ಉದ್ಧಾರ ಆದರೂ, ಹಾಳಾದರೂ ಆಡಿಕೊಳ್ಳುವುದು ತಪ್ಪಲ್ಲಾ. ಆಡಿಕೊಳ್ಳುವವರೇನು ನಮ್ಮ ಕಷ್ಟಕ್ಕೆ ಆಗುವುದಿಲ್ಲ. ಸಮಾಜದ ಟೀಕೆ ಟಿಪ್ಪಣಿಗಳಿಗೆಲ್ಲಾ ಉತ್ತರಿಸುತ್ತಾ ಹೋದರೆ ಬದುಕಿನ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ.

ಯಾರನ್ನೋ ಮೆಚ್ಚಿಸಲು ನಾವು ನಮ್ಮ ಬದುಕನ್ನು ಹೈರಾಣ ಮಾಡಿಕೊಳ್ಳಬೇಕಿಲ್ಲ. ಇಲ್ಲಿ ಹೋಲಿಕೆ ಎಂಬುದು ಅನೇಕರ ಬದುಕಿನ ವಿಲನ್ ಆಗಿದೆ. ಒಬ್ಬರಂತೆ ಒಬ್ಬರು ಇರಲು ಸಾಧ್ಯವಿಲ್ಲ, ಒಬ್ಬರ ಬೆರಳಿನ ಅಚ್ಚಿನಂತೆ ಒಬ್ಬರದು ಇರಲು ಸಾಧ್ಯವಿಲ್ಲ ಎಂದ ಮೇಲೆ ಬೇರೆಯವರ ಬದುಕಿನ ಅನುಕರಣೆ ನಾವೇಕೆ ಮಾಡಬೇಕು? ನಮ್ಮ ಬದುಕು ಭಿನ್ನ. ಅನೇಕರು ತಮ್ಮನ್ನು ಹೋಲಿಕೆ ಮಾಡಿಕೊಂಡು ಇಲ್ಲದ ಸಂಗತಿಗಳಿಗೋಸ್ಕರ ಕೊರಗುತ್ತಾರೆ. ತಮ್ಮ ಬಳಿ ಬೆಲೆ ಕಟ್ಟಲಾಗದ ಅನೇಕ ಸಂಗತಿಗಳು ಇದ್ದರೂ ಅದನ್ನು ಲೆಕ್ಕಿಸದೆ ಕ್ಷುಲ್ಲಕ ವಿಚಾರ – ವಸ್ತುಗಳಿಗಾಗಿ ಸುಂದರ ಬದುಕಿಗೆ ಕೊಳ್ಳಿ ಇಟ್ಟುಕೊಳ್ಳುತ್ತಿದ್ದಾರೆ.

ಬದುಕು ಸರಳ ರೇಖೆಯಲ್ಲ. ಏಳುಬೀಳುಗಳ ಹಾದಿಯೇ ಸುಂದರ ಬದುಕಿಗೆ ನಾಂದಿ. ಅಂದುಕೊಂಡ ಹಾಗೆ ಜೀವನ ನಡೆದುಬಿಟ್ಟರೆ ಅದರಲ್ಲಿ ಸ್ವಾರಸ್ಯವೇ ಇರುತ್ತಿರಲಿಲ್ಲ. ಅನೇಕ ಹಿರಿಯರು ಎನಿಸಿಕೊಂಡವರು ಕೆಲಸ ಹೋದರೆ ಜೀವನವೇ ಮುಗಿಯಿತು ಎಂದು ಭಾವಿಸಿ ತಾವು ಮಾತ್ರವಲ್ಲ, ಹೆಂಡತಿ ಮಕ್ಕಳ ಜೀವಕ್ಕೂ ಕಂಟಕವಾಗುತ್ತಾರೆ. ಆದರೆ ಕೆಲವರು ಮಾತ್ರ ಎಷ್ಟೇ ಸೋಲುಗಳಾದರೂ ಎದೆಗುಂದದೆ ತಮ್ಮ ಧೈರ್ಯದ ಮುಂದೆ ಸೋಲು ಏನೇನು ಅಲ್ಲ ಎಂದು ಭಾವಿಸಿ ಮರಳಿ ಯತ್ನವ ಮಾಡು ಎಂದು ಸತತ ಪ್ರಯತ್ನದಿಂದ ಕೊನೆಗೊಂದು ದಿನ ಗೆಲುವಿನ ನಗೆ ಬೀರುತ್ತಾರೆ.

ಒಮ್ಮೊಮ್ಮೆ ಸೋಲು ವರವಾಗಿ ಪರಿಣಮಿಸುವುದೂ ಉಂಟು. ಒಂದು ಶಾಲೆಯಲ್ಲಿ ಶಿಕ್ಷಕರೊಬ್ಬರು ಮುಂದಿನ ಬೆಂಚಿನ ಜಾಣ ಹುಡುಗನನ್ನು ಹೋಲಿಕೆ ಮಾಡಿಕೊಂಡು ಕಡೇ ಬೆಂಚಿನ ವಿದ್ಯಾರ್ಥಿ ಒಬ್ಬನನ್ನು ಹೀಯ್ಯಾಳಿಸುತ್ತಲೇ ಇದ್ದರು. ಪರೀಕ್ಷೆಯಲ್ಲಿ ಮುಂದಿನ ಬೆಂಚಿನ ಹುಡುಗ ಶಾಲೆಗೆ ಮೊದಲಿಗನಾದ, ಅತ್ತ ಕಡೆಯ ಬೆಂಚಿನ ವಿದ್ಯಾರ್ಥಿ ಅನುತ್ತೀರ್ಣನಾದ. ಅವನನ್ನು ಕರೆದು ನಿನಗೆ ಭವಿಷ್ಯವಿಲ್ಲ ಎಂದು ಕೋಪದಿಂದಲೇ ಬೈದು ಕಳುಹಿಸಿದರು. ಕಾಲಾ ನಂತರ ಮುಂದಿನ ಬೆಂಚಿನ ಹುಡುಗ ಐಎಎಸ್ ಅಧಿಕಾರಿಯಾದ. ಕಡೇ ಬೆಂಚಿನ ವಿದ್ಯಾರ್ಥಿ ರಾಜಕಾರಣಿಯಾದ. ಒಮ್ಮೆ ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಮಾವೇಶಕ್ಕೆ ಎಲ್ಲಾ ವಿದ್ಯಾರ್ಥಿಗಳನ್ನು ಆಹ್ವಾನಿಸಿದಾಗ ಕಡೆಯ ಬೆಂಚಿನ ವಿದ್ಯಾರ್ಥಿ ಸಚಿವನಾಗಿ ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದಿದ್ದ, ಆದರೆ ಅವನೊಂದಿಗೆ ಬಂದಿದ್ದ ಐಎಎಸ್ ಅಧಿಕಾರಿ ಮೊದಲ ಬೆಂಚಿನ ವಿದ್ಯಾರ್ಥಿ. ಗುರುಗಳಿಗೆ ಇಬ್ಬರ ಬೆಳವಣಿಗೆ ಕಂಡು ಸಂತೋಷವಾಗಿತ್ತು. ಆದರೆ ಅವರು ಕಡೆಯ ಬೆಂಚಿನ ವಿದ್ಯಾರ್ಥಿಗೆ ಅಂದು ಬೈದದ್ದು ಅವರನ್ನು ಕಾಡುತ್ತಲೇ ಇತ್ತು.

ಇಂತಹ ಅನೇಕ ಉದಾಹರಣೆಗಳು ಇವೆ. ಯಾರೋ ಏನೋ ಅಂದರು ಅಂದ ಮಾತ್ರಕ್ಕೆ ಕುಂದಬಾರದು. ಅನ್ನುವವರು ಅನ್ನಲಿ, ನಮ್ಮ ಗುರಿ ಸ್ಪಷ್ಟವಾಗಿರಲಿ. ಸಾಧಿಸುವವರೆಗೆ ಮಾತನಾಡಬಾರದು, ಸಾಧನೆಯೇ ಮಾತನಾಡುವಂತಿರಬೇಕು. ಇಂದು ಅನೇಕ ಹೆತ್ತವರು, ಶಿಕ್ಷಕರಿಗೆ ಸೋತ ಮಕ್ಕಳಿಗೆ ಧನಾತ್ಮಕವಾಗಿ ಚಿಂತನೆ ಮಾಡುವಂತೆ ಸಲಹೆ ನೀಡುವ, ಅವರಿಗೆ ಧೈರ್ಯ ತುಂಬುವ ಸಂಯಮವೇ ಇರುವುದಿಲ್ಲ. ತಮ್ಮ ಮೂಗಿನ ನೇರಕ್ಕೆ ತಮ್ಮ ಮಕ್ಕಳ ಭವಿಷ್ಯವನ್ನು ನಿರೀಕ್ಷಿಸುತ್ತಾರೆ. ಎಲ್ಲರೂ ಒಂದೇ ರೀತಿ ಭವಿಷ್ಯವನ್ನು ರೂಪಿಸಿಕೊಳ್ಳಲು ಇದು ಕಾರ್ಖಾನೆಯಿಂದ ತಯಾರಾಗುವ ಮಾಲುಗಳಲ್ಲ, ಬದಲಿಗೆ ಕನಸುಗಳಿಂದ ನಿರ್ಮಾಣವಾಗುವ ವ್ಯಕ್ತಿತ್ವಗಳು. ಹಿರಿಯರ ಮಾತುಗಳು ಸೋತ ಮಕ್ಕಳಿಗೆ ಮುಂದೆ ಗೆಲ್ಲಲು ಸೋಪಾನವಾಗಬೇಕು, ಅವರ ಮಾತುಗಳು ಸಾವಿನ ಅಂಚಿಗೆ ಕೊಂಡೊಯ್ಯಬಾರದು. ಅವರಿವರು ಏನು ಅಂದುಕೊಳ್ಳುತ್ತಾರೆ ಅಂತ ನಮ್ಮ ಮಕ್ಕಳಿಗೆ ಗಂಡಾಂತರ ತಂದೊಡ್ಡುವುದು ಸರಿಯೋ?

ಬದುಕುವ ಛಲವೊಂದಿದ್ದರೆ ಯಾವುದೂ ಅಡ್ಡಿಯಲ್ಲ. ಆದರೆ ಕೆಲವರಿಗೆ ಗೆಲುವು ಎಂಬುದು ಸುಲಭದ ತುತ್ತಾಗಬೇಕು. ಪರಿಶ್ರಮವಿಲ್ಲದೆ ಜಯದಕ್ಕಬೇಕು. ಪ್ರಯಾಸವಿಲ್ಲದೇ ಹಣಗಳಿಸಿಬಿಡಬೇಕು. ಪ್ರಯತ್ನವಿಲ್ಲದೆ ಯಶಸ್ಸು ಗಳಿಸಬೇಕು. ಹಣೆಯ ಬೆವರನ್ನು ನಂಬದೆ, ಹಣೆಯ ಬರಹವನ್ನು ನಂಬಿ ಕುಳಿತರೆ ಗೆಲುವು ಸುಲಭ ಸಾಧ್ಯವಲ್ಲ. ಪರಿಶ್ರಮ, ಪ್ರಯತ್ನವಿದ್ದಾಗಿಯೂ ಅನೇಕರಿಗೆ ಸೋಲುಂಟಾದ ಉದಾಹರಣೆಗಳಿವೆ. ಆದರೆ ಸೋಲಿಗೆ ಸೋಲದೆ ಮುಂದೆ ನುಗ್ಗುವವರಿಗೆ ಮಾತ್ರ ಬದುಕು ಸ್ವಾರಸ್ಯವೆನಿಸುತ್ತದೆ. ಸಾಯೋದು ಹೇಡಿಗಳ ಕೆಲಸ ಬದುಕೋದು ವೀರರ ಕೆಲಸ. ಇಂದಿನ ಶಿಕ್ಷಣ ವ್ಯವಸ್ಥೆ ಮಕ್ಕಳಿಗೆ ಬದುಕನ್ನು ರೂಪಿಸಿಕೊಳ್ಳುವುದನ್ನು ಕಲಿಸಬೇಕು, ಕೇವಲ ಅಂಕಪಟ್ಟಿಯಲ್ಲಿ ಅಂಕ ಗಳಿಸುವುದನ್ನು ಕಲಿಸುವುದಲ್ಲ. ಏನಂತೀರಿ?

ಪದ ತಾಂಬೂಲ:

ಸತ್ತು ಸಾಧಿಸುವುದು ಅಸಾಧ್ಯ,
ಬದುಕಿ ಸಾಧಿಸುವುದು ಸಾಧ್ಯ !

ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್‌ನಿಂದ ಅನುಪಯುಕ್ತ ವಸ್ತುಗಳ ಹಸ್ತಾಂತರ

ವಸ್ತುಗಳ ಮರುಬಳಕೆ ಯೋಜನೆ ಬಳಕೆಗೆ ಪಾಲಿಕೆ ಆರೋಗ್ಯಾಧಿಕಾರಿ ಸಲಹೆ

ಮೈಸೂರು, ಮೇ 21– ಹಳೆ ವಸ್ತುಗಳನ್ನು ಮರು ಬಳಕೆ ಮಾಡುವ ಉದ್ದೇಶದಿಂದ ಮೈಸೂರು ಮಹಾನಗರ ಪಾಲಿಕೆ ಆರಂಭಿಸಿರುವ 'ನನ್ನ ಜೀವನ ನನ್ನ ಸ್ವಚ್ಛ ನಗರ' ವಿಶೇಷ ಅಭಿಯಾನದಡಿ ಭಾನುವಾರ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಅನುಪಯುಕ್ತ ವಸ್ತುಗಳನ್ನು ಹಸ್ತಾಂತರಿಸಲಾಯಿತು.



ಪಾಲಿಕೆಯು ಮೇ 20 ರಿಂದ ಜೂನ್ 5ರವರೆಗೆ ಹಮ್ಮಿಕೊಂಡಿರುವ ಈ ಅಭಿಯಾನಕ್ಕೆ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಕೈ ಜೋಡಿಸಿದ್ದು ಅದರಂತೆ ಭಾನುವಾರ ಹಳೆಯ ಬಟ್ಟೆ, ನ್ಯೂಸ್ ಪೇಪರ್ ಸೇರಿದಂತೆ ಇನ್ನಿತರ ವಸ್ತುಗಳನ್ನು ಪಾಲಿಕೆಗೆ ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಪಾಲಿಕೆ ಆರೋಗ್ಯಾಧಿಕಾರಿ ಡಾ. ನಾಗರಾಜು ಅವರು ವಸ್ತುಗಳನ್ನು ಸ್ವೀಕರಿಸಿ ಮಾತನಾಡಿ, ನಗರದಾದ್ಯಂತ ಪಾಲಿಕೆ 9 ವಲಯಗಳಲ್ಲಿ ಒಟ್ಟು 27 ಕಡೆಗಳಲ್ಲಿ ಇಂತಹ ವಸ್ತುಗಳನ್ನು ಸಂಗ್ರಹಿಸುವ ಕೇಂದ್ರಗಳನ್ನು ತೆರೆದಿದೆ. ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಈ ಕೇಂದ್ರಗಳು ಕಾರ್ಯನಿರ್ವಹಿಸಲಿವೆ. ಸಾರ್ವಜನಿಕರು ಹಳೆ ಬಟ್ಟೆ ಪುಸ್ತಕಗಳು, ಆಟಿಕೆಗಳು, ಬೈಸಿಕಲ್, ನ್ಯೂಸ್ ಪೇಪರ್‌ಗಳನ್ನು ನೀಡಿದರೆ ಅದನ್ನು ಪಾಲಿಕೆ ಸ್ವೀಕರಿಸುತ್ತದೆ. ಇಲ್ಲವೇ ನಿತ್ಯವೂ ಬೆಳಗಿನ ವೇಳೆ ಕಸ ಸಂಗ್ರಹಣೆಗೆ ಬರುವ ವಾಹನಗಳಿಗೂ ಈ ವಸ್ತುಗಳನ್ನು ನೀಡಬಹುದಾಗಿದೆ. ನಾಗರಿಕರು ಈ ಉಪಯುಕ್ತ ಯೋಜನೆಯನ್ನು ಬಳಕೆ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.

ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷರಾದ ವಿಕ್ರಮ ಅಯ್ಯಂಗಾರ್ ಮಾತನಾಡಿ, ನಮ್ಮ ಸಂಸ್ಥೆಯ ವತಿಯಿಂದ ನಮ್ಮ ಒಡನಾಡಿಗಳೆಲ್ಲರೂ ನೀಡಿದ ಹಳೆಯ ಬಟ್ಟೆಗಳು ಹಾಗೂ ಪುಸ್ತಕಗಳನ್ನು ಮೈಸೂರಿನ ಉತ್ತರಾದಿ ಮಠದ ಪಕ್ಕದಲ್ಲಿರುವ ಅನುಪಯುಕ್ತ ವಸ್ತುಗಳ ಸಂಗ್ರಹ ಕೇಂದ್ರಕ್ಕೆ ನೀಡಿದ್ದೇವೆ. ಇದರಿಂದ ಸಾಕಷ್ಟು ಜನಕ್ಕೆ ಅನುಕೂಲವಾಗಲಿದೆ. ಪುಸ್ತಕಗಳು ಅಗತ್ಯವಿರುವವರಿಗೆ ಬಳಕೆಯಾಗುತ್ತದೆ. ಹೀಗಾಗಿ ಪಾಲಿಕೆಯು ಜನರ ಸಂಕಷ್ಟಕ್ಕೆ ಸ್ಪಂದಿಸುವ ಪರಿಸರ ಸ್ನೇಹಿಯಾದ ವಿಶೇಷ ಅಭಿಯಾನಕ್ಕೆ ಕೈಜೋಡಿಸಿರುವುದು ನಮಗೆ ಅತ್ಯಂತ ತೃಪ್ತಿ ನೀಡಿದೆ ಎಂದರು.

ಈ ಅಭಿಯಾನದಿಂದ ನಗರದಲ್ಲಿ ಸಂಗ್ರಹವಾಗುವ ಕಸದ ಪ್ರಮಾಣ ಕಡಿಮೆಯಾಗುವುದಲ್ಲದೆ. ಒಂದು ಮನೆಯಲ್ಲಿ ಬಳಕೆಯಾಗದೆ ಮೂಲೆಯಲ್ಲಿ ಇರಿಸಿರುವ ವಸ್ತುಗಳು ಬೇರೊಬ್ಬರಿಗೆ ಬಳಕೆಗೆ ಬರುತ್ತವೆ. ಅಂತಹ ವಸ್ತುಗಳನ್ನು ಪಾಲಿಕೆಗೆ ಹಸ್ತಾಂತರಿಸಿದರೆ ಅವುಗಳನ್ನು ಮರು ಬಳಕೆ ಮಾಡಬಹುದಾಗಿದೆ. ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ನೀಡಿದರೆ ಬಟ್ಟೆಯ ಬ್ಯಾಗ್ ವಿತರಿಸಲಾಗುತ್ತದೆ. ಸಂಗ್ರಹವಾದ ಪ್ಲಾಸ್ಟಿಕ್ ಅನ್ನು ಮರು ಬಳಕೆಗೆ ನೀಡಲಾಗುತ್ತದೆ. ಇದೊಂದು ಅತ್ಯುತ್ತಮ ಸೇವಾ ಕಾರ್ಯವಾಗಿದೆ ಎಂದರು.

ವಲಯ ಕಚೇರಿಯ ಆರೋಗ್ಯ ನಿರೀಕ್ಷಕಿ ಪ್ರೀತಿ, ಸಂಚಾಲಕರಾದ ಎಸ್.ಎನ್.ರಾಜೇಶ್, ಬೈರತಿ ಲಿಂಗರಾಜು, ಮಂಜುನಾಥ್, ರವಿಚಂದ್ರ ಹಾಗೂ ಇನ್ನಿತರರು ಹಾಜರಿದ್ದರು.

ಪಿಎಚ್.ಡಿ ಪದವೀಧರರು

ಆರ್.ಎಸ್. ಇಂದುಮತಿ



ಮೈಸೂರು, ಮೇ 21– ಡಾ.ಮಮತಾ ಹಾಗೂ ಡಾ.ರಾಜೇಶ್ ಕಣ್ಣ ಅವರ ಮಾರ್ಗದರ್ಶನದಲ್ಲಿ ಮಹಾರಾಜ ತಾಂತ್ರಿಕ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಆರ್.ಎಸ್. ಇಂದುಮತಿ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ 'ಸಮ್ ಸ್ಟಡೀಸ್ ಆನ್ ಟೊಪೋಲೋಜಿಗಿಕಲ್ ಇಂಡಿಸೀಸ್ ಆಂಡ್ ಸ್ಪೆಕ್ಟ್ರಮ್ ಅಫ್ ಗ್ರಾಫ್' ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶ್ರೀಮತಿ ಸೀಮ ಮೆಹದಿ



ಮೈಸೂರು: ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಫಾರ್ಮಕಾಲಜಿ ವಿಭಾಗದ ಮುಖ್ಯಸ್ಥ ಡಾ.ಕೆ.ಎಲ್. ಕೃಷ್ಣ ಅವರ ಮಾರ್ಗದರ್ಶನದಲ್ಲಿ ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯದ ಉಪನ್ಯಾಸಕಿ ಶ್ರೀಮತಿ ಸೀಮ ಮೆಹದಿ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಖಿನ್ನತೆಯ ನಿರ್ವಹಣೆಯಲ್ಲಿ ಒಮೆಗಾ–3 ಕೊಬ್ಬಿನಾಮ್ಲಗಳ ಬಗ್ಗೆ ಒಂದು ಅಧ್ಯಯನ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಹೊಸ ವಾಚ್ ಉಡುಗೊರೆ!

ಮೈಸೂರು, ಮೇ 21–ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮತ್ತೊಂದು ವಾಚ್ ಈಗ ಸುದ್ದಿಯಲ್ಲಿದೆ. ಇಂದು ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ಸಿದ್ದರಾಮಯ್ಯನವರು, ತಮ್ಮ ವಾಚ್ ಅನ್ನು ನೋಡಿಕೊಂಡು ತಮ್ಮ ಎಡಬದಿ ಇದ್ದ ಸಚಿವ ಎಂ.ಬಿ.ಪಾಟೀಲ್‌ಗೆ ಅದನ್ನು ತೋರಿಸುತ್ತ 'ಇದನ್ನು ನನ್ನ ಪತ್ನಿ ಮತ್ತೊಮ್ಮೆ ಸಿಎಂ ಆಗಿದ್ದಕ್ಕೆ ಗಿಫ್ಟ್ ಕೊಟ್ಟಿದ್ದು' ಎಂದು ಉತ್ಸಾಹದಿಂದ ಹೇಳಿಕೊಳ್ಳುತ್ತಿದ್ದರು. ಈ ವೇಳೆ ಮುಖ್ಯಮಂತ್ರಿಗಳ ಮತ್ತೊಂದು ಬದಿಯಲ್ಲಿದ್ದ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಕೂಡಲೇ ಸಿದ್ದರಾಮಯ್ಯನವರ ಕೈ ಹಿಡಿದುಕೊಂಡು ಅವರ ವಾಚ್ ಅನ್ನು ಕುತೂಹಲದಿಂದ ವೀಕ್ಷಿಸಿದರು.



ಈ ಬೆಳವಣಿಗೆ ಸಮಾರಂಭದಲ್ಲಿ ನೆರೆದಿದ್ದವರಲ್ಲಿ ತೀವ್ರ ಅಚ್ಚರಿಗೆ ಕಾರಣವಾಯಿತು. ಇದೇನು ವಿಶೇಷ. ಮುಖ್ಯಮಂತ್ರಿಗಳು ಮತ್ತೊಮ್ಮೆ ತಮ್ಮ ವಾಚ್ ತೋರಿಸಿ ಚರ್ಚಿಸುತ್ತಿರುವುದೇನು ಎಂದು ತಮ್ಮ ತಮ್ಮಲ್ಲಿ ಮಾತನಾಡಿಕೊಂಡರು.

ಉಡುಪಿ ಮಾಜಿ ಶಾಸಕ ಯುಆರ್ ಸಭಾಪತಿ ನಿಧನ



ಉಡುಪಿ, ಮೇ 21– ಕಾಂಗ್ರೆಸ್ ಮುಖಂಡ, ಉಡುಪಿ ಮಾಜಿ ಶಾಸಕ ಯು.ಆರ್. ಸಭಾಪತಿ ಅನಾರೋಗ್ಯದಿಂದ ಭಾನುವಾರ ಬೆಳಗ್ಗೆ ನಿಧನರಾಗಿದ್ದು, ಅವರಿಗೆ 71 ವರ್ಷ ವಯಸ್ಸಾಗಿತ್ತು. ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಸಭಾಪತಿ ಅವರ ನಿಧನಕ್ಕೆ ರಾಜಕೀಯ ನಾಯಕರು ಸಂತಾಪ ಸೂಚಿಸಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಆಸ್ಕರ್ ಫರ್ನಾಂಡಿಸ್ ಅವರ ರಾಜಕೀಯ ಪ್ರವೇಶಕ್ಕೂ ಸಭಾಪತಿ ಪ್ರೇರಣೆಯಾಗಿದ್ದರು. ರಾಷ್ಟ್ರೀಯ ಜನತಾದಳ, ಜಾತ್ಯತೀತ ಜನತಾದಳದೊಂದಿಗೂ ಗುರುತಿಸಿಕೊಂಡಿದ್ದ ಯು.ಆರ್. ಸಭಾಪತಿಯವರು 80–90ರ ದಶಕದಲ್ಲಿ ಕರಾವಳಿ ಭಾಗದ ಪ್ರಭಾವಿ ನಾಯಕರಲ್ಲೊಬ್ಬರಾಗಿದ್ದರು. ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಅನುಯಾಯಿಯಾಗಿದ್ದ ಯು.ಆರ್.ಸಭಾಪತಿ, ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. 1994ರಲ್ಲಿ ಕೆಸಿಪಿ ಶಾಸಕರಾಗಿದ್ದ 1999ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿ ಚುನಾಯಿತರಾಗಿದ್ದರು.

ರಾಜಕಾಲುವೆ ಒತ್ತುವರಿ ತೆರವು ಮತ್ತೆ ಆರಂಭ



ಬೆಂಗಳೂರು, ಮೇ 21– ರಾಜಧಾನಿಯಲ್ಲಿ ಮಳೆ ನೀರು ಹರಿವಿಗೆ ತೊಡಕಾಗಿರುವ ರಾಜಕಾಲುವೆ ಒತ್ತುವರಿಯನ್ನು ತೆರವು ಮಾಡುವ ಕಾರ್ಯಾಚರಣೆ ಮತ್ತೆ ಆರಂಭಿಸಲಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಮಳೆ ಅವಾಂತರದ ಹಿನ್ನೆಲೆಯಲ್ಲಿ ಮಹಿಳೆಯೊಬ್ಬರು ಸಾವಿಗೀಡಾದ್ದರಿಂದ ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ಭೇಟಿ ನೀಡಿದ ಸಿಎಂ ಈ ವಿಷಯ ತಿಳಿಸಿದರು.

ಬೆಂಗಳೂರಿನ ಇನ್‌ಫೋಸಿಸ್ ಉದ್ಯೋಗಿ, ಆಂಧ್ರಪ್ರದೇಶ ಮೂಲದ ಭಾನುರೇಖಾ (22) ತನ್ನ ಹೊಸ ಮನೆ ನೋಡಲು ಊರಿನಿಂದ ಬಂದಿದ್ದ ಕುಟುಂಬಸ್ಥರನ್ನು ಇಂದು ಬೆಂಗಳೂರು ವೀಕ್ಷಣೆಗಾಗಿ ಕ್ಯಾಬ್‌ನಲ್ಲಿ ಕರೆದುಕೊಂಡು ಬಂದಿದ್ದರು. ಆಗ ಅವರಿದ್ದ ಕ್ಯಾಬ್ ಕೆ.ಆರ್. ರಸ್ತೆಯ ನೀರು ತುಂಬಿದ್ದ ಅಂಡರ್ ಪಾಸ್‌ನಲ್ಲಿ ಸಿಲುಕಿ ಎಲ್ಲರೂ ತೊಂದರೆಗೆ ಒಳಗಾಗಿದ್ದರು.

ಆ ಪೈಕಿ ತೀವ್ರ ಅಸ್ವಸ್ಥಗೊಂಡಿದ್ದ ಭಾನುರೇಖಾ ಬಳಿಕ ಸಾವಿಗೀಡಾದರು. ಸೇಂಟ್ ಮಾರ್ಥಾಸ್ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಕುಟುಂಬಸ್ಥರು ಮತ್ತು ಸಾರ್ವಜನಿಕರು ಆರೋಪಿಸಿದ್ದರು. ಇದೇ ಸಂದರ್ಭದಲ್ಲಿ ನಗರದಲ್ಲಿ ಪರಿಸ್ಥಿತಿ ವೀಕ್ಷಣೆಗೆ ರಸ್ತೆಗಿಳಿದಿದ್ದ ಸಿಎಂ ಸೇಂಟ್ ಮಾರ್ಥಾಸ್ ಆಸ್ಪತ್ರೆಗೂ ಭೇಟಿ ನೀಡಿದ್ದರು. ಅಲ್ಲಿ ಘಟನೆ ಕುರಿತು ಮಾಹಿತಿ ಪಡೆದ ಸಿಎಂ, ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. ಬಾಡಿಗೆ ವಾಹನ ಪಡೆದು ಬೆಂಗಳೂರು ನಗರ ನೋಡಲು ಬಂದಿದ್ದ ಆ ವಾಹನದಲ್ಲಿ ಚಾಲಕ ಸೇರಿ ಏಳು ಮಂದಿ ಇದ್ದರು. ಅವರಿಗೆ ಮಳೆಯ ಪ್ರಮಾಣದ ಅಂದಾಜು ಇರಲಿಲ್ಲ, ಚಾಲಕ ಅಂಡರ್ ಪಾಸ್ ಒಳಗೆ ಹೋಗಬಾರದಿತ್ತು. ನೀರಿನಲ್ಲಿ ಸಿಲುಕಿದ್ದ ವಾಹನದ ಬಾಗಿಲುಗಳನ್ನು ತೆರೆಯಲು ಆಗಿಲ್ಲ. ನೀರಿನ ಒತ್ತಡದಿಂದಾಗಿ ಗ್ಲಾಸ್ ಸಹ ಜಾಮ್ ಆಗಿತ್ತು. ಭಾನುರೇಖಾ ಮಳೆನೀರು ಕುಡಿದು ಸಾವಿಗೀಡಾಗಿದ್ದಾರೆ. ಆಸ್ಪತ್ರೆಗೆ ತಲುಪುವ ಮುನ್ನವೇ ಅವರ ನಿಧನವಾಗಿತ್ತು. ಆಸ್ಪತ್ರೆಯಲ್ಲಿ ಪ್ರಾಥಮಿಕ ತಪಾಸಣೆ ಬಳಿಕ ಇನ್ನೊಮ್ಮೆ ತಪಾಸಣೆ ನಡೆಸಿದ್ದಾರೆ ಎಂದು ಸಿಎಂ ತಿಳಿಸಿದರು.

ವಿಪರೀತ ನೀರು ತುಂಬಿಕೊಂಡ ಸಂದರ್ಭ ಇಲ್ಲಿನ ಸಂಚಾರವನ್ನು ಬಂದ್ ಮಾಡಬೇಕು. ಆದರೆ ಅನಿರೀಕ್ಷಿತವಾಗಿ ಮಳೆ ಬಂದು ಏಕಾಏಕಿ ನೀರು ತುಂಬಿದೆ. ವಾಹನದಲ್ಲಿದ್ದ ಏಳು ಮಂದಿ ಪೈಕಿ ಆರು ಮಂದಿಗೆ ಏನೂ ಆಗಿಲ್ಲ, ಚಾಲಕ ಸಹ ಸುರಕ್ಷಿತವಾಗಿದ್ದಾನೆ. ಆಸ್ಪತ್ರೆಯಿಂದ ವಿಳಂಬವಾಗಿದ್ದರೆ ಅದನ್ನು ವಿಚಾರಣೆ ಮಾಡೋಣ. ಆಸ್ಪತ್ರೆಯವರು ನಿರ್ಲಕ್ಷ್ಯ ಮಾಡಿದ್ದರೆ ಅವರ ವಿರುದ್ಧ ತನಿಖೆ ನಡೆಸುತ್ತೇವೆ. ಸದ್ಯ ಆಸ್ಪತ್ರೆ ವೈದ್ಯರು ಅಂಥ ಪರಿಸ್ಥಿತಿ ನಿರ್ಮಾಣ ಆಗಿಲ್ಲ ಎಂದು ಹೇಳಿದ್ದಾರೆ. ಮೃತ ಮಹಿಳೆ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ಘೋಷಿಸುತ್ತಿದ್ದೇನೆ. ಆರೋಗ್ಯ ಸಮಸ್ಯೆ ಎದುರಾದವರಿಗೆ ಸರ್ಕಾರವೇ ಚಿಕಿತ್ಸೆ ವೆಚ್ಚ ನೀಡಲಿದೆ ಎಂದ ಸಿಎಂ, ಮುಂಬರುವ ದಿನಗಳಲ್ಲಿ ಇಂತಹ ಸಮಸ್ಯೆ ಆಗದಂತೆ ನೋಡಿಕೊಳ್ಳುತ್ತೇವೆ. ರಾಜಕಾಲುವೆ ಒತ್ತುವರಿ ತೆರವನ್ನು ನಾವು ಹಿಂದೆ ಆರಂಭಿಸಿದ್ದೆವು. ಆದರೆ ಅದು ಅರ್ಧಕ್ಕೆ ನಿಂತಿದೆ, ಮತ್ತೊಮ್ಮೆ ಆರಂಭಿಸುತ್ತೇವೆ ಎಂದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮಂಟಪ ಮನೆ
ನಿತ್ಯ ಪೂಜೆ ಮಾಡಲು ನಿಮಗೊಂದು ದೇವರ ಮಂಟಪ ಬೇಕೇ ಬೀಟೆ ಮತ್ತು ಹಲಸು ಮರದಿಂದ ತಯಾರಿಸುತ್ತೇವೆ
ಸಂಪರ್ಕಿಸಿ: ಶ್ರೀನಗರ ಮೈಸೂರು



9448207634
9036742526

ಶ್ರೀ ಗೌರಿಶಂಕರ ಟ್ರಾವೆಲ್ಸ್
28-5-23(1ದಿನ)- ಘಾಟಿಸುಬ್ರಮಣ್ಯ, ಕೋಟಿಲಿಂಗ, ಇಶಾಫೌಂಡೇಷನ್
28-6-23(4ದಿನ)- ಶಿರಡಿ, ತ್ರಯಂಬಕೇಶ್ವರ, ಭೀಮಶಂಕರ, ನಾಸಿಕ್, ಘೃಶ್ನೇಶ್ವರ, ಎಲ್ಲೋರ ಇತ್ಯಾದಿ
11-8-23(7ದಿನ)- ಅಂಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಬಾಬಾ ಬೈದ್ಯನಾಥ್, ಗಯಾ, ಬುದ್ದಗಯಾ,ಇತರೆ ವಿಮಾನ/ಬಸ್/ರೂಂ/ಊಟ
9620002114

SITE FOR SALE ನಿವೇಶನ ಮಾರಾಟಕ್ಕಿದೆ
ಮೈಸೂರಿನ ವಿಜಯನಗರ 3ನೇ ಹಂತ B ಬ್ಲಾಕ್ ಬಡಾವಣೆಯಲ್ಲಿರುವ 50X80 ಅಳತೆಯ ಉತ್ತರದಿಕ್ಕಿನ ನಿವೇಶನ ಸಂಖ್ಯೆ 767, ಮುಂಭಾಗದ ರಸ್ತೆ 80 ಅಡಿ ಇದ್ದು ಮೋರ್ (MORE) ಪಕ್ಕದಲ್ಲಿರುತ್ತದೆ. ಈ ನಿವೇಶನವು ವ್ಯಾಪಾರಕ್ಕೆ ಇದೆ. ಸಂಪರ್ಕಿಸಿ: ಗಿರೀಶ್ ಗೌಡ
9590545222

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿಯೊಂದಿಗೆ ನರ್ಸಿಂಗ್ ಸೌಲಭ್ಯವಿದೆ. ಇಚ್ಛೆವುಳ್ಳವರು ಸಂಪರ್ಕಿಸಿ
9110455297 | 9591557126

WANTED TEACHING STAFF
for reputed institution (Experience Preferred) for all subjects. Transport facilities available. Drop your resume through WhatsApp Contact no:
8971577685 / 9980631121

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ/ ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ ಸಂಬಳ 12000 ದಿಂದ 18000 (ESI, PF ಸೌಲಭ್ಯ ಇರುತ್ತದೆ.)
8050699742
6366141518

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

WANTED FOR Bhaskar Heart Centre

Post:	Qualification:
Receptionist	Degree/PUC
Marketing / PRO (M)	Degree/PUC
Staff Nurses (F)	GNM/ANM
Laboratory Technician	CMLT/DMLT
Housekeeping	7th Std

0821-2499188 / 9880186386

ಮನೆ ಮತ್ತು ಗೋಡೌನ್ ಬಾಡಿಗೆಗೆ/ಭೋಗ್ಯಕ್ಕಿದೆ
[illegible]
8553501505 / 9611240336

St. Mary's GIRLS PU COLLEGE
Chamundipuram, Mysore
* Admission Open
* Arts & Commerce
* Affordable Fee
9972389020
9844144232
above 85%, Free Admission

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/ಎ, ಸರಸ್ವತಿಪುರಂ, ಮೈಸೂರು
11B ಮತ್ತು 9 & 11A ಖಾತಾಗಳಿಗೂ ಮುಡಾ & ಕಾರ್ಪೋರೇಷನ್ ಖಾತೆ ಇದ್ದರು, ಇಲ್ಲದಿದ್ದರೂ ಹಾಗೂ 15,000 ಮೇಲ್ಪಟ್ಟ ಸಂಬಳ ಇರುವವರಿಗೆ ಪರ್ಸನಲ್ ಲೋನ್ ಹಾಗೂ ಇಂಡಸ್ಟ್ರಿಯಲ್ ಮಾರ್ಟ್‌ಗೇಜ್ ಲೋನ್ ಸೌಲಭ್ಯ ದೊರೆಯುತ್ತದೆ.
8088647887

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
Mob: 8749098879

ಬಸವಮಾರ್ಗ ವ್ಯಸನ ಮುಕ್ತ ಕೇಂದ್ರ
28ನೇ 21 ದಿನಗಳ ಉಚಿತ ಕುಡಿತ ಬಿಡಿಸುವ ಶಿಬಿರ
8803344999
8553111999

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

ತಾರಸಿ ಸೋರುವಿಕೆ,
ಸಂಪ್ ಲೀಕೇಜ್, ಬಾತ್ ರೂಂ ಲೀಕೇಜ್ ಸರಿಪಡಿಸಲಾಗುವುದು
7829236625

ಸಂಪು ಕ್ಲೀನಿಂಗ್
ಸಂಪರ್ಕಿಸಿ:
8431541631

Sudarshan Saur SOLAR WATER HEATER
ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ :- ಕನಿಷ್ಠ ಓದು/ಬರಹ ಗೊತ್ತಿರಬೇಕು.
ವೇತನ:-13,448 + ESI & PF & ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲೆಗಳು, ಆಧಾರ್, ಬ್ಯಾಂಕ್ ಪಾಸ್ ಬುಕ್, ಫೋಟೊ -6, ಟಿ.ಸಿ, ಮಾರ್ಕ್ಸ್‌ಕಾರ್ಡ್ ಕಡ್ಡಾಯ
8453408502, 9108100117

ಬೇಕಾಗಿದ್ದಾರೆ
ಸ್ಟೀವರ್ಡ್
(ಅನುಭವವುಳ್ಳ ಅಭ್ಯರ್ಥಿಗಳಿಗೆ ಮಾತ್ರ)
9108085994

ಸುವರ್ಣಯಾತ್ರ
21.06.2023, ಕಾಶಿ ಪ್ರವಾಸ 6 ದಿನಗಳು, 08.06.2023, ನೇಪಾಳ ಪಶುಪತಿನಾಥ, ಮುಕ್ತಿನಾಥ ಪ್ರವಾಸ 9 ದಿನಗಳು, 18.06.2023: ಪುರಿಜಗನ್ನಾಥ, ಕೊನಾರ್ಕ, ಭುವನೇಶ್ವರ 'ಪ್ರವಾಸ 4 ದಿನಗಳು, 23.06.2023 ಕೇರಳ ಪ್ರವಾಸ, ಮುನ್ನಾರ್, ಆಲಪ್ಪಿ, ಅನಂತ ಪದ್ಮನಾಭ. ಇತರೆ 7 ದಿನಗಳು.
9008381022 / 9091962508

ಬೇವಿನ ಹಿಂಡಿ
ಉತ್ತಮ ದರ್ಜೆಯ ಪರಿಶುದ್ಧವಾದ ಗಾಣದ ಬೇವಿನ ಹಿಂಡಿ (COLD PRESSED) ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
ನಂ.203, ಬನ್ನಿಮಂಟಪ ಬಡಾವಣೆ, ಮೈಸೂರು–570015
8088887802

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR SALE
1) 20x30,30x40,40x60 sites in H D Kote Road near Defence Apartment, 2) 30x40 G+2 House Near Ashwini Choultry Srirampura 3) 28 Guntas Land Varkodu T Narasipura Road 4) 30x40 40x60 and 50x80 site Residential,Commercial Srirampura Dattagalli. Contact:
95386 90359 / 90359 90359

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 8th to PUC ವರೆಗೆ ಊಟ ವಸತಿ ESI, PF ವಾಹನ ಸೌಲಭ್ಯವಿರುತ್ತದೆ ಸಂಬಳ : 11400 to 18000 ಇರುತ್ತದೆ.
8951869646
9902645646

ಬೇಕಾಗಿದ್ದಾರೆ
ಸಲೂನ್ ಮೆನ್ಸ್ ಪಾರ್ಲರ್ ಅಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಸಂಬಳ: 15 ರಿಂದ 25 ಸಾವಿರ ವಿಳಾಸ: ಸಾತಗಳ್ಳಿ, ಮೈಸೂರು
9844341652
9880467652

ಸೈಟು ಮಾರಾಟಕ್ಕಿದೆ
DTCP ಅಪ್ರೂವ್ಡ್, 9&11A ಖಾತೆ 30x40, Rs.18,60,000/- ಬ್ಯಾಂಕ್ ಲೋನ್ ದೊರೆಯುತ್ತದೆ ಮಾಲೀಕರಿಂದ ನೇರವಾಗಿ ಮಾರಾಟ ಮೈಸೂರು–ಬನ್ನೂರು ರಸ್ತೆ
9945558166

WANTED
Required Office Staff (Data Entry Operator) Education : Any Graduates with Kannada Typing (Nudi), English Typing Experience Should be 2-3 Years Interest candidates send your CV to snsoperations95@gmail.com
NIMISH SECURITY SERVICES PVT.LTD.
Contact with Bio-Date # 14/A, 2nd Floor Krishna Vilasa Road Mysore-570001.
9513999752

ತಕ್ಷಣ ಬೇಕಾಗಿದ್ದಾರೆ
T.V.S. Toyota, ಬ್ರಿಟಾನಿಯಾ, ಟಾಟಾ ಮೋಟಾರ್ಸ್, ಬಿಗ್‌ಬಜಾರ್, ಕಂಪನಿಗಳಿಗೆ ಆಫೀಸ್‌ಗಳಿಗೆ 5th, 7th, 10th, PUC, Degree ITI, Diploma ಯುವಕ/ಯುವತಿಯರು ನೇರನೇಮಕಾತಿ ಸಂಬಳ18,000/- 60,000/- ವಸತಿ ಊಟವಿದೆ.
9686220858

ಸೈಟು ಮಾರಾಟಕ್ಕಿದೆ
30X40 ಅಳತೆಯ A ಖಾತೆಯುಳ್ಳ ಸೈಟು ಮಾರಾಟಕ್ಕಿದೆ. 11 ಲಕ್ಷದ 50 ಸಾವಿರಗಳು, ನಿರ್ಮಾಣ್ ಲೇಔಟ್, ತಲೂರು ಸರ್ಕಲ್ ಹತ್ತಿರ, ಮೈಸೂರು.
9742198093

ಬೇಕಾಗಿದ್ದಾರೆ
Tele Calling
ಕೆಲಸಕ್ಕೆ ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 8000 – 12000
ಸಂಪರ್ಕಿಸಿ:
8792140484

ಬೇಕಾಗಿದ್ದಾರೆ
ಟ್ರೆಂಡ್ಸ್ ಸೆರಾಮಿಕ್ ಅಂಡ್ ಸಾನಿಟೇಷನ್ ಬೋಗಾದಿ ಮೈಸೂರುನಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು ದ್ವಿಚಕ್ರ ವಾಹನ ಹೊಂದಿರಬೇಕು. ಆಕರ್ಷಕ ವೇತನ ಮತ್ತು ಪೆಟ್ರೋಲ್ ಭತ್ಯಾ ನೀಡಲಾಗುವುದು.
9108668282
9448361818

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ: 18000/- + W/O (8Hrs)
ವಯೋಮಿತಿ: 48 ವರ್ಷದೊಳಗೆ
ಊಟ ತಿಂಡಿ ಮತ್ತು ಪಿಕ್ & ಡ್ರಾಪ್ ವ್ಯವಸ್ಥೆ ಇರುತ್ತದೆ.
9538567819
9620777819

ಬೇಕಾಗಿದ್ದಾರೆ
ರೆಸ್ಟೋರೆಂಟ್ ಕ್ಯಾಪ್ಟನ್
ಅನುಭವವುಳ್ಳ ಅಭ್ಯರ್ಥಿಗಳಿಗೆ ಮಾತ್ರ
9620274630

WANTED
Female Receptionist for a showroom
SALARY 20000-30000/-
Ph.9380142144
SHIVARAMPET, MYSURU

ಬೇಕಾಗಿದ್ದಾರೆ
ಮಹಿಳೆಯರು ಮತ್ತು ಪುರುಷರು
Sales Executive, Sales ಮತ್ತು Marketing ಕೆಲಸಕ್ಕೆ Two wheeler compulsory. ಕರೆ ಮಾಡಿ:
9901080314

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ MARUTI SUZUKI, BOSCH SERVICE, HERO HONDA, ROYAL ENFIELD ಸಂಸ್ಥೆಯ Service Relationship ಮಾರ್ಕೆಟಿಂಗ್ ಮಾಡಲು 15 ಯುವಕ ಯುವತಿ Feild Excutives ಗಳುಬೇಕಾಗಿದ್ದಾರೆ. ವಿದ್ಯಾರ್ಹತೆ : PUC & Any Degree. ಸಂಬಳ : 15000 ರಿಂದ 24000 + Insentive. ನೇರ ಸಂದರ್ಶನ.
Call: 9483383590 / 9481620890

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ.
9731891409

100% Job
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ Any Qualification, (7th, 10th, PUC, ITI, Any Degree Pass /Fail) ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ 14,500 ರಿಂದ 39,000/- ESI+PF+OT ಸೇರಿ ಷರತ್ತು ಅನ್ವಯ
9036548905,9035143190

SITE FOR SALE IMMEDIATELY
By Owner, 40x52, E/F, 50 ft Road, Police Layout, 3rd Stage, Mysore. Price: 88 Lakhs
Brokers Excuse
7676171798

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 156 ವಿವಿಧ ಪೋಸ್ಟ್‌ಗಳಿಗೆ SSLC, PUC, ITI, Degree ಆಗಿರುವ ಉತ್ಸಾಯಿ ಯುವಕ /ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೂಟದೊಂದಿಗೆ 14,000– 30,000/- ESI+PF+OT
6364103418, 6366141586

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಕೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18ರಿಂದ 45, 8 Hrs Duty, 3 Shift ಹಾಗೂ Week Off ಇರುತ್ತದೆ. ಸಂಬಳ: ESI PFನೊಂದಿಗೊಂಡು 17800/– ರೂ. ಹೆಚ್ಚಿನ ಮಾಹಿತಿಗಾಗಿ ಖುದ್ದಾಗಿ ಬಂದು ಸಂಪರ್ಕಿಸಿ: ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು
9986874574

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚಾತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಶ್ಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:- ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

ಷೇರ್ ಮಾರ್ಕೆಟ್ ಟ್ರೇಡಿಂಗ್
ಮನೆಯಲ್ಲೇ ಕುಳಿತು ಟ್ರೇಡಿಂಗ್ ಮಾಡುವ ಮೂಲಕ 1500–2000 ಸಂಪಾದಿಸಿ
Self ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡುತ್ತೇವೆ (Options Bank Neft Trading Tips Available)
9945667806

ಬೇಕಾಗಿದ್ದಾರೆ
ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ಆಸ್ಪತ್ರೆಯಲ್ಲಿ 18 ವರ್ಷ ಮೇಲ್ಪಟ್ಟ ಯುವಕ ಯುವತಿಯರು ಕೂಡಲೇ ಬೇಕಾಗಿದ್ದಾರೆ. ಊಟವಸತಿಯೊಂದಿಗೆ ತಿಂಗಳ ವೇತನ 12000 ರಿಂದ 18000 ತನಕ ಕೊಡಲಾಗುವುದು. ಮೊದಲು ಬಂದವರಿಗೆ ಆದ್ಯತೆ. ನಿಮ್ಮ ದಾಖಲಾತಿ ಸಮೇತ ಸಂಪರ್ಕಿಸಿ
9035324777 / 7259306665

ಮೈಸೂರು ಮ್ಯಾರೇಜ್ ಬ್ಯೂರೋ
ವಧುವರರನ್ನು ಹುಡುಕಲು ಸಹಾಯ ಬೇಕೇ? ನಮಗೆ ಕರೆ ಮಾಡಿ ನಿಮ್ಮ ಫೋಟೋ, ಬಯೋಡೇಟಾ ಮತ್ತು ಜಾತಕವನ್ನು ವಾಟ್ಸಪ್ ಮಾಡಿರಿ
ಡಾ. ಗುರೂಜಿ
9448229184/7899625268

ವೃದ್ಧಾಶ್ರಮ
ಕುಡಿಯಲು ಬಿಸಿನೀರು, ಮಲಗಲು ಉತ್ತಮ ಹಾಸಿಗೆ, ಮಂಚ, ಬಿಸಿನೀರಿನ ಸ್ನಾನ ದಿನಕ್ಕೆ 3 ಬಾರಿ ಊಟ, 2 ಬಾರಿ ಕಾಫಿ, ನೋಡಲು ಟಿ.ವಿ. ಹಾಗೂ ಉತ್ತಮ ಪರಿಸರ ಉಳ್ಳ ವೃದ್ಧಾಶ್ರಮಕ್ಕೆ ಅರ್ಹ ವಯೋವೃದ್ಧರನ್ನು ಸೇರಿಸಿಕೊಳ್ಳಲಾಗುತ್ತದೆ. (ಷರತ್ತುಗಳು ಅನ್ವಯ) ಮತ್ತು ಅಡುಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ವೃದ್ಧರನ್ನು ನೋಡಿಕೊಳ್ಳಲು ನರ್ಸಿಂಗ್ ಆದವರು ಬೇಕಾಗಿದ್ದಾರೆ. ಸಂಪರ್ಕಿಸಿ:
8197804473

ಜಿಲ್ಲೆಯಲ್ಲಿ ಹೊಸದಾಗಿ
ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ
Salary :13,000-21,000 + ESI / PF
ವಿದ್ಯಾರ್ಹತೆ:10th. PUC. ITI.
DIPLOMA and Any Degree
ಇಂದೇ ಸಂಪರ್ಕಿಸಿ
9035734821

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರುಬೇಕಾಗಿದ್ದಾರೆ
ವಯಸ್ಸು : 18 ರಿಂದ 40 ವರ್ಷ
ವಿದ್ಯಾರ್ಹತೆ: 7 ರಿಂದ PUC
ಸಂಪರ್ಕಿಸಿ: 9480404036

SF Enterprises
Bannimantap
REQUIRED Labourers/Workers
B/W 20 to 25 years of age. 4 to 5 in member
Mob: 9980522256/9845442911
For further details Call to above nos.

WANTED TEACHERS
NST/PPTT/ Montessory
M.A. B.ED (English Major)
Physical Education Teacher (P.T. Teacher)
Contact
9901670090/9945640116

ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಬೇಕಾಗಿದ್ದಾರೆ. ಸಂಪರ್ಕಿಸಿ:
9449380528
7026498386

GNANAVAHINI HIGH SCHOOL
(ENGLISH MEDIUM)
CA-1, SRIRAMPURA 2ND STAGE, MYSURU-570 023
WANTED TEACHERS
1. Bsc., B.Ed.,(CBZ), 2. B.A. D.Ed., 3.B.A.BEd(English) 4.B.A. B.Ed (Hindi) 5. BP.Ed/ CP.Ed.,
Walk in Interview on 25.05.2023, between 11.00 AM to 1.00 P.M, Come along with Original & Xerox Documents
Ph: 0821 2361884/ 99725 90996

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ
Salary+ot 18800/-68000/-
9731029241

HOUSE FOR RENT
Independent 2 BHK House for Rent at K.B.L Layout, Bannur Road, Mysore
Contact:
9945614686

ತಿದ್ದುಪಡಿ
ಶ್ರೀ ಶಿವಯೋಗಿ ಸ್ವಾಮಿ ವಿದ್ಯಾ ಸಂಸ್ಥೆ, ಗಾಂಧಿನಗರ, ಮೈಸೂರು-07 ಇದರ ಸಹ ಶಿಕ್ಷಕರ ಹುದ್ದೆಗೆ ನೇಮಕಾತಿಗಾಗಿ ದಿ. 16.05.2023ರಂದು ಪ್ರಕಟಗೊಂಡ ಜಾಹೀರಾತಿನಲ್ಲಿ ಆಂಗ್ಲ ಸಹ ಶಿಕ್ಷಕರ ನೇಮಕಾತಿಗೆ ವಿದ್ಯಾರ್ಹತೆ B.Sc. B.Ed ಎಂದು ನಮೂದಾಗಿರುವುದನ್ನು B.A. B.Ed ಎಂದು ಓದಿಕೊಳ್ಳಲು ತಿಳಿಸಲಾಗಿದೆ.
ಸಹಿ/– ಗೌರವ ಕಾರ್ಯದರ್ಶಿ, ಶ್ರೀ ಶಿವಯೋಗಿ ಸ್ವಾಮಿ ವಿದ್ಯಾ ಸಂಸ್ಥೆ, ಗಾಂಧಿನಗರ, ಮೈಸೂರು–07

ಮುಡಾ ಸೈಟ್ ಸೇಲ್
30x40, ಮುಡಾ ಖಾತೆ, ಮೈನ್ ರೋಡ್ ಫೇಸಿಂಗ್, ದಡದಹಳ್ಳಿ, ಈಸ್ಟ್ ಫೇಸಿಂಗ್ ಸೈಟ್, ಜ್ಞಾನ ಭಾರತಿ ಲೇಔಟ್, ಜೆ.ಪಿ.ನಗರದ ರಿಂಗ್ ರೋಡ್ ನಿಂದ 5ಕಿ.ಮೀ
'ಡೈರೆಕ್ಟ್ ಓನರ್'
9342123373

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಆಹಾರಕ್ಕಾಗಿ ಕಾಫಿ ತೋಟಕ್ಕೆ ಬಂದ
ಗರ್ಭಿಣಿ ಆನೆಗೆ ಗುಂಡಿಕ್ಕಿ ಹತ್ಯೆ
ಕುಶಾಲನಗರ ಸಮೀಪ ಅಮಾನವೀಯ ಘಟನೆ

● ಖಾಲಿ ತೋಟಗಳು ಪತ್ತೆ ● ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲು ● ಆರೋಪಿಗಳ ಸುಳಿವು ಪತ್ತೆ ● ಮರಣೋತ್ತರ ಪರೀಕ್ಷೆ ನಂತರ ಆನೆ ಅಂತ್ಯಕ್ರಿಯೆ



ಮಡಿಕೇರಿ/ಕುಶಾಲನಗರ, ಮೇ 21– ಕಾಫಿ ತೋಟಕ್ಕೆ ಬಂದ ಗರ್ಭಿಣಿ ಕಾಡಾನೆಯನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿರುವ ಅತ್ಯಂತ ಅಮಾನವೀಯ ಘಟನೆ ಕುಶಾಲನಗರ ತಾಲೂಕು ಗುಡ್ಡೆ ಹೊಸೂರು ಗ್ರಾಮದ ರಸಲ್‌ಪುರ ಸಮೀಪದ ಬಾಳುಗೋಡುವಿನಲ್ಲಿ ನಡೆದಿದೆ.

ಶನಿವಾರ ರಾತ್ರಿ 11 ಗಂಟೆಯ ವೇಳೆಗೆ ಈ ಘಟನೆ ನಡೆದಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ. ಈ ಘಟನೆ ಕುರಿತು ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಅರಣ್ಯ ಇಲಾಖೆ ಪ್ರಕರಣ ದಾಖಲಿಸಿದೆ.

ಘಟನೆ ವಿವರ: ಶನಿವಾರ ರಾತ್ರಿ 11 ಗಂಟೆಯ ಸಮಯದಲ್ಲಿ ಆಹಾರ ಅರಸಿಕೊಂಡು ಅಂದಾಜು 18ರಿಂದ 20 ವರ್ಷ ಪ್ರಾಯದ ಗರ್ಭಿಣಿ ಆನೆಯೊಂದು ಬಾಳುಗೋಡುವಿನ ವ್ಯಕ್ತಿಯೊಬ್ಬರ ಕಾಫಿ ತೋಟಕ್ಕೆ ಬಂದಿದೆ. ಈ ವೇಳೆ ದುಷ್ಕರ್ಮಿಗಳು ಅದರ ಮೇಲೆ 2–3 ಸುತ್ತು ಗುಂಡು ಹಾರಿಸಿದ್ದಾರೆ. 1 ಗುಂಡು ಆನೆಯ ಕುತ್ತಿಗೆಯ ಭಾಗಕ್ಕೆ ಮತ್ತೊಂದು ಗುಂಡು ತಲೆಯ ಭಾಗಕ್ಕೆ ತಗುಲಿದ ಪರಿಣಾಮ ಆನೆ ಸ್ಥಳದಲ್ಲೇ ನೆಲಕ್ಕೆ ಉರುಳಿ ಮೃತಪಟ್ಟಿದೆ.

'ತೋಟ' ಪತ್ತೆ: ಶನಿವಾರ ರಾತ್ರಿಯೇ ಘಟನೆ ಕುರಿತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದರು. ಭಾನುವಾರ ಬೆಳಗ್ಗೆ ಸ್ಥಳ ಮಹಜರು ನಡೆಸುತ್ತಿದ್ದ ಸಂದರ್ಭ ಕಾಡಾನೆ ಮೃತಪಟ್ಟ ಸ್ಥಳದಿಂದ ಅನತಿ ದೂರದಲ್ಲಿ ಹತ್ಯೆಗೆ ಬಳಸಿದ್ದ 2–3 ಖಾಲಿ ತೋಟಗಳು ಪತ್ತೆಯಾಗಿವೆ. ಇವುಗಳು 'ಹೈ ವೆಲಾಸಿಟಿ' ತೋಟಗಳಾಗಿವೆ. ಅವುಗಳನ್ನು ವಶಕ್ಕೆ ಪಡೆಯಲಾಗಿದ್ದು, ಆರೋಪಿಗಳ ಪತ್ತೆಗೆ ತನಿಖೆ ಮುಂದುವರೆಸಲಾಗಿದೆ. ಮರಣೋತ್ತರ ಪರೀಕ್ಷೆ ಸಂದರ್ಭ ಆನೆ ಗರ್ಭಿಣಿ ಎಂಬುದು ಪತ್ತೆಯಾಗಿದೆ. ಬಳಿಕ ಸ್ಥಳದಲ್ಲೇ ಕಳೇಬರವನ್ನು ಹೂತು ಹಾಕಲಾಯಿತು. ಘಟನಾ ಸ್ಥಳಕ್ಕೆ ಮಡಿಕೇರಿ ಡಿಸಿಎಫ್ ಶಿವರಾಮ್ ಬಾಬು, ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್, ಉಪವಲಯ ಅರಣ್ಯಾಧಿಕಾರಿಗಳ ಅನಿಲ್ ಡಿಸೋಜ, ದೇವಯ್ಯ, ರಂಜನ್ ಹಾಗೂ ಆರ್‌ಆರ್‌ಟಿ ಸಿಬ್ಬಂದಿ ಭೇಟಿ ನೀಡಿ ಮಹಜರು ನಡೆಸಿದರು.

ಆರೋಪಿಗಳ ಸುಳಿವು: ಘಟನಾ ಸ್ಥಳಕ್ಕಾಗಮಿಸಿದ ಡಿಸಿಎಫ್ ಶಿವರಾಮ್ ಬಾಬು, ಬಾಳುಗೋಡುವಿನ ಜಗದೀಶ್ ಎಂಬುವರ ಕಾಫಿ ತೋಟದಲ್ಲಿ ಕಾಡಾನೆಯ ಮೃತದೇಹ ಪತ್ತೆಯಾಗಿದೆ. ಸ್ಥಳದಲ್ಲೇ 2–3 ಖಾಲಿ ತೋಟಗಳು (ಗುಂಡುಗಳು) ಲಭಿಸಿದ್ದು, ಆರೋಪಿಗಳ ಪತ್ತೆಗೆ ತನಿಖೆ ನಡೆಸಲಾಗುತ್ತಿದ್ದು, ಶಂಕಿತ ಆರೋಪಿಗಳ ಬಗ್ಗೆ ಸುಳಿವು ಸಿಕ್ಕಿದೆ. ಮೃತ ಕಾಡಾನೆಯ ಮರಣೋತ್ತರ ಪರೀಕ್ಷೆ ನಡೆಸಿ, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮಾಹಿತಿ ನೀಡಿದರು.

ಅಬ್ಬಿಫಾಲ್ಸ್ ಬಳಿ ಪ್ರವಾಸಿಗರ ಮೇಲೆ ಹಲ್ಲೆ

▸ ಹಲ್ಲೆಯ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ▸ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮೂವರ ವಿರುದ್ಧ ಪ್ರಕರಣ ದಾಖಲು

ಮಡಿಕೇರಿ, ಮೇ 21– ಕೊಡಗಿಗೆ ಮದುವೆಗೆಂದು ಆಗಮಿಸಿದ್ದರು ಎನ್ನಲಾಗಿರುವ ಪ್ರವಾಸಿಗರ ಮೇಲೆ ಅಬ್ಬಿಫಾಲ್ಸ್ ಬಳಿ ಪಾರ್ಕಿಂಗ್ ವಿಚಾರಕ್ಕೆ ಸಂಬಂಧಿಸಿದಂತೆ ಸುಂಕ ವಸೂಲಿಗಾರರು ದೊಣ್ಣೆಯಿಂದ ಹಲ್ಲೆ ಮಾಡಿರುವ ಘಟನೆ ಶನಿವಾರ ಸಂಜೆ ವೇಳೆ ನಡೆದಿದೆ.

ಮೂರು ಮಂದಿ ಯುವಕರು ಹಲ್ಲೆ ಮಾಡುತ್ತಿರುವ ದೃಶ್ಯವನ್ನು ಆಟೋ ಒಂದರಲ್ಲಿ ಬಂದ ಪ್ರವಾಸಿಗರು ವಿಡಿಯೋ ಮಾಡಿದ್ದು, ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಪ್ರಕರಣ ದಾಖಲು: ಪ್ರವಾಸಿ ತಾಣದಲ್ಲಿ ಪ್ರವಾಸಿಗರ ಮೇಲೆ ಹಲ್ಲೆ ಮಾಡುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಕೊಡಗಿನ ಪ್ರವಾಸಿ ತಾಣಗಳು ಸುರಕ್ಷಿತವೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿವೆ. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಪೊಲೀಸ್ ಇಲಾಖೆ ಹಲ್ಲೆ ನಡೆಸಿದ 3 ಮಂದಿ ಯುವಕರಾದ ಸುನೀಲ್, ಸುಬ್ಬಯ್ಯ ಮತ್ತು ಪ್ರಜ್ವಲ್ ಎಂಬವರ ವಿರುದ್ಧ ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಸುಮೋಟೋ ಕೇಸ್ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಕಳೆದ ಒಂದು ತಿಂಗಳ ಹಿಂದೆ ನಗರದ ಆಟೋ ಚಾಲಕ ಒಬ್ಬರ ಜೊತೆಯಲ್ಲಿ ಅಬ್ಬಿಫಾಲ್ಸ್ ಪಾರ್ಕಿಂಗ್ ವಿಚಾರಕ್ಕೆ ಸಂಬಂಧಿಸಿದಂತೆ ಕೆಲವರ ನಡುವೆ ವಾಗ್ವಾದ ನಡೆದು



ಪರಸ್ಪರ ಕೈ ಮಿಲಾಯಿಸಿಕೊಂಡ ಘಟನೆ ಕೂಡ ನಡೆದಿತ್ತು. ಈ ಸಂದರ್ಭವೂ ಮಡಿಕೇರಿ ಗ್ರಾಮಾಂತರ ಪೊಲೀಸರು ಎಚ್ಚರಿಕೆ ನೀಡಿ ಕಾನೂನು ಕ್ರಮ ಜರುಗಿಸುವುದಾಗಿ ತಿಳಿ ಹೇಳಿ ಪ್ರಕರಣ ಇತ್ಯರ್ಥ ಮಾಡಿದ್ದರು.

ವರ್ತನೆಗೆ ಬೇಕಿದೆ ಕಡಿವಾಣ: ಜಿಲ್ಲೆಯ ಕೆಲವು ಪ್ರವಾಸಿ ತಾಣಗಳಲ್ಲಿ ಹೊಡೆದಾಟ ಪ್ರಕರಣಗಳು ಹೊಸದೇನು ಅಲ್ಲ ಎನ್ನುವಂತಾಗಿದೆ. ಕೆಲವು ಪ್ರದೇಶಗಳಲ್ಲಿ ಪ್ರವಾಸಿಗರ ಹದ್ದು ಮೀರಿದ ವರ್ತನೆಗಳು, ಮೋಜು ಮಸ್ತಿಯ ಹೆಸರಲ್ಲಿ ಸ್ಥಳೀಯರ ಭಾವನೆ, ಭಕ್ತಿ ಭಾವ ಮಾತ್ರವಲ್ಲದೇ ಅಲ್ಲಿನ ಪರಿಸರಕ್ಕೆ ಕುತ್ತು ತರುವ ಕೆಲಸ ನಡೆದಿದೆ. ಇಂತಹ ಸ್ಥಳಗಳಲ್ಲಿ ಪ್ರವಾಸಿಗರ ಮೇಲೆ ಹಲ್ಲೆ ನಡೆದ ಘಟನೆಗಳು ಜಿಲ್ಲೆಯ ಕೆಲವು ಪೊಲೀಸ್ ಠಾಣೆಗಳ ದಾಖಲಾತಿಗಳಲ್ಲಿವೆ. ಪ್ರವಾಸಿ ತಾಣಗಳಲ್ಲಿ ಸಾರ್ವಜನಿಕವಾಗಿ ಮದ್ಯ ಸೇವನೆ, ಸ್ಥಳೀಯರ ಶ್ರದ್ಧಾ ಕೇಂದ್ರಗಳಾದ ದೇವರ ಕಾಡು, ದೇವರ ಬನ, ದೇವರ ನದಿ ಹೊಂಡ, ಕೋಟೆ ಶ್ರೀ ಈಶ್ವರ ದೇವಸ್ಥಾನ ಪ್ರದೇಶ, ಮಾಂದಲ್‌ಪಟ್ಟಿ ಸೇರಿದಂತೆ ಮತ್ತಿತರ ಕಡೆಗಳಲ್ಲಿ ಪ್ರವಾಸಿಗರು ಮದ್ಯ ಮಾಂಸ ಸೇವನೆಯ ಜೊತೆಯಲ್ಲಿ ಮೋಜು ಮಸ್ತಿ ಹೆಸರಲ್ಲಿ ಹದ್ದು ಮೀರಿದ ವರ್ತನೆ ತೋರಿದ ಘಟನೆಗಳು ಇಂದಿಗೂ ಇವೆ.

ಇಂತಹ ತೀರಾ ಗ್ರಾಮೀಣ ಭಾಗಗಳಲ್ಲಿ ಪ್ರವಾಸಿಗರಿಂದ ನಡೆದ ಅನುಚಿತ ಘಟನೆಗಳು ಇಂದಿಗೂ ಬೆಳಕಿಗೆ ಬಂದಿಲ್ಲ. ಈ ಬಗ್ಗೆ ಸ್ಥಳೀಯರು ಕೂಡ ಪ್ರವಾಸಿಗರ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಮನೆಯಿಂದ ಹೊರಗೆ ಹೋದ ವ್ಯಕ್ತಿ ನಾಪತ್ತೆ

ಮಡಿಕೇರಿ, ಮೇ 21– ಮಾದಾಪುರ ಗ್ರಾಮ ನಿವಾಸಿ ಮಂಡೀರ ಕುಟ್ಟಪ್ಪ(72) ಕಾಣೆಯಾಗಿರುವುದಾಗಿ ಅವರ ಪುತ್ರಿ ರೂಪ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.



ಮೇ 6ರ ಸಂಜೆ 6.30ರ ಸಮಯದಲ್ಲಿ ಮಂಡೀರ ಕುಟ್ಟಪ್ಪ ಅವರು ಮನೆಯಿಂದ ಹೊರ ಹೋಗಿ ವಾಪಸ್ ಬಂದಿಲ್ಲ. ನಂತರ ಅಕ್ಕ ಪಕ್ಕದ ಮನೆಗಳಲ್ಲಿ, ಸಂಬಂಧಿಕರ ಮನೆಗಳಲ್ಲಿ ಹುಡುಕಾಡಿದರೂ ಯಾವುದೇ ಮಾಹಿತಿ ದೊರೆತಿಲ್ಲ. ಈ ಹಿನ್ನೆಲೆಯಲ್ಲಿ ಕುಟ್ಟಪ್ಪ ಅವರ ಪುತ್ರಿ ಮೇ 17ರಂದು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ನಾಪತ್ತೆ ದೂರು ದಾಖಲಿಸಿದ್ದಾರೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. 72 ವರ್ಷ ಪ್ರಾಯದ ಮಂಡೀರ ಕುಟ್ಟಪ್ಪ ಕೊಡವ ಜನಾಂಗಕ್ಕೆ ಸೇರಿದವರಾಗಿದ್ದು, ಎಣ್ಣೆಕೆಂಪು ಬಣ್ಣ, 5 ಅಡಿ ಎತ್ತರ ಹಾಗೂ ಮನೆಯಿಂದ ಹೊರ ಹೋಗುವ ಸಮಯದಲ್ಲಿ ಬಿಳಿ ಬಣ್ಣದ ಗೆರೆ ಇರುವ ಶರ್ಟ್ ಹಾಗೂ ಆರ್ಮಿ ಕಲರ್ ಪ್ಯಾಂಟ್ ಧರಿಸಿರುವುದಾಗಿ ಪೊಲೀಸ್ ಪ್ರಕಟಣೆ ತಿಳಿಸಿದೆ.

ಕಾಣೆಯಾದ ವ್ಯಕ್ತಿ ಬಗ್ಗೆ ಮಾಹಿತಿ ದೊರೆತಲ್ಲಿ ಎಸ್.ಪಿ. ಕೊಡಗು: 08272–229000, ಸೋಮವಾರಪೇಟೆ ಪೊಲೀಸ್ ವೃತ್ತ ನಿರೀಕ್ಷಕರು: 9480804925 ಅಥವಾ ಸೋಮವಾರಪೇಟೆ ಠಾಣಾಧಿಕಾರಿ: 08276–282040 ಈ ಸಂಖ್ಯೆಗಳನ್ನು ಸಂಪರ್ಕಿಸುವಂತೆ ಪೊಲೀಸ್ ಇಲಾಖೆ ಪ್ರಕಟಣೆಯ ಮೂಲಕ ಮನವಿ ಮಾಡಿದೆ.

ಮೇ 26 ರಿಂದ ಮಾವು, ಹಲಸು ಮೇಳ

ಮಡಿಕೇರಿ, ಮೇ 21– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಕೊಡಗು ಜಿಲ್ಲಾ ಹಾಪ್ ಕಾಮ್ಸ್ ಇವರ ಸಹಯೋಗದಲ್ಲಿ ಮೇ 26 ರಿಂದ 28 ರವರೆಗೆ ಕೊಡಗು ಜಿಲ್ಲಾ ಹಾಪ್‌ಕಾಮ್ಸ್, ಮುಖ್ಯರಸ್ತೆ, ಮಡಿಕೇರಿ ಇಲ್ಲಿ ಮಾವು ಮತ್ತು ಹಲಸು ಮೇಳ ನಡೆಯ ಲಿದೆ. ಮಾವು ಮತ್ತು ಹಲಸು ಮೇಳದ ಉದ್ಘಾಟನಾ ಕಾರ್ಯಕ್ರಮವು ಮೇ 26 ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ.

ಆದಿಚುಂಚನಗಿರಿಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಭೇಟಿ



ಆದಿಚುಂಚನಗಿರಿ, ಮೇ 21– ಒಕ್ಕಲಿಗರ ಆರಾಧ್ಯ ದೈವ ಮಂಡ್ಯ ಜಿಲ್ಲೆ ನಾಗಮಂಗಲ ತಾಲೂಕಿನ ಆದಿಚುಂಚನ ಗಿರಿ ಮಠಕ್ಕೆ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಭೇಟಿ ನೀಡಿ, ಶ್ರೀಕಾಲಭೈರವೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿ, ಮಠದ ಪೀಠಾಧಿಪತಿ ಶ್ರೀನಿರ್ಮಲಾನಂದನಾಥ ಸ್ವಾಮೀಜಿಗಳ ಆಶೀರ್ವಾದ ಪಡೆದರು.

ಭಾನುವಾರ ಸಂಜೆ ಶ್ರೀಮಠಕ್ಕೆ ಭೇಟಿ ನೀಡಿದ ಡಿಸಿಎಂ ಡಿಕೆಶಿ, ಸ್ವಾಮೀಜಿ ಆಶೀರ್ವಾದ ಪಡೆದು 30 ನಿಮಿಷಗಳ ಕಾಲ ಶ್ರೀಗಳೊಂದಿಗೆ ಗೌಪ್ಯ ಮಾತುಕತೆ ನಡೆಸಿದರು.

ಬಳಿಕ ಮಾತನಾಡಿದ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಮಳೆಯಿಂದ ಬೆಂಗಳೂರಿನಲ್ಲಿ ಯುವತಿ ಸಾವನ್ನಪ್ಪಿರುವ ಬಗ್ಗೆ ಪ್ರತಿಕ್ರಿಯಿಸಿ, ಪ್ರಕೃತಿ ಯಾರ ಕೈಯಲ್ಲೂ ಇಲ್ಲ. ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ಯುವತಿ ಕುಟುಂಬಕ್ಕೆ ಪರಿಹಾರ ಕೊಡುವುದು ಅಲ್ಲ, ಮುಂದೆ ಈ ರೀತಿ ಆಗದಂತೆ ಜಾಗ್ರತೆ ವಹಿಸಬೇಕೆಂದು ಹೇಳಿದರು.

ನಾನು ಶ್ರೀಮಠದ ಭಕ್ತ ದೇವರಿಗೆ ಕೈ ಮುಗಿಯಲು ಬಂದಿದ್ದೇನೆ. ಮನೆಯನ್ನು ಹುಷಾರಾಗಿ ಕಾಪಾಡಿಕೊಳ್ಳುವ ಹಾಗೆ ಮಠವನ್ನು ಕಾಪಾಡಿಕೊಳ್ಳಬೇಕು. ಮಂಡ್ಯ ಜನ ಕಾಂಗ್ರೆಸ್ ಅನ್ನು ಬಲಪಡಿಸಿದ್ದಾರೆ. ಸಮಯ ಬಂದಾಗ ಮಂಡ್ಯ ಜನಕ್ಕೆ ನಮ್ಮ ಕೃತಜ್ಞತೆ ಅರ್ಪಿಸುತ್ತೇವೆ ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಎನ್. ಚಲುವರಾಯಸ್ವಾಮಿ, ಡಾ.ರಂಗನಾಥ್, ಕೆ.ಎಂ.ಉದಯ್‌ಗೌಡ ಉಪಸ್ಥಿತರಿದ್ದರು.

ಮೋಹನ್‌ಕುಮಾರ್ ನಿಧನ



ಶ್ರೀರಂಗಪಟ್ಟಣ, ಮೇ 21– ತಾಲೂಕಿನ ಬೆಳಗೊಳ ಗ್ರಾಮದ ನಿವಾಸಿ ಮೋಹನ್ ಕುಮಾರ್ (65) ಭಾನುವಾರ ಸಂಜೆ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭೂಮಿ ವೈವಿಧ್ಯತೆ ಜೀವರಾಶಿಗಳ ಕಣಜ: ಹನುಮಂತು



ಮಂಡ್ಯ, ಮೇ 21– ಭೂಮಿ ವೈವಿಧ್ಯತೆ ಜೀವರಾಶಿಗಳ ಕಣಜ. ಜೀವ ಸಂಕುಲಗಳ ನಿಧಿ ಭೂ ಗ್ರಹ ಎಂದು ಕೃಷಿಕ ಲಯನ್ಸ್ ಸಂಸ್ಥೆ ಆಡಳಿತಾಧಿಕಾರಿ ಕೆ.ಟಿ.ಹನುಮಂತು ತಿಳಿಸಿದರು.

ನಗರದ ಮರಿಗೌಡ ಬಡಾವಣೆ 2ನೇ ಕ್ರಾಸ್‌ನಲ್ಲಿ ಕೃಷಿಕ ಲಯನ್ಸ್ ಸಂಸ್ಥೆ ಆಯೋಜಿಸಿದ್ದ ವಿಶ್ವ ಜೀವ ವೈವಿಧ್ಯ ದಿನಾಚರಣೆ ಪ್ರಯುಕ್ತ "ಜೀವ ವೈವಿಧ್ಯ ಮರಳಿ ನಿರ್ಮಿಸಿ" ಎಂಬ ಘೋಷವಾಕ್ಯದೊಂದಿಗೆ ಕೆ.ಸಿದ್ದೇಗೌಡ (ಗುರೂಜಿ) ಉದ್ಯಾನವನ ನಿರ್ಮಾಣಕ್ಕೆ ಸಸಿ ನೆಡುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ಭೂಮಿಯಲ್ಲಿ ಅಸಂಖ್ಯಾತ ಜೀವಿಗಳು ಹುಟ್ಟುತ್ತವೆ. ಬೆಳೆಯುತ್ತವೆ. ಅಂತ್ಯಗೊಳ್ಳುತ್ತವೆ ಜೀವರಾಶಿಗಳು ಒಂದರಂತೆ ಇನ್ನೊಂದಿಲ್ಲ ಇನ್ನೊಂದರಂತೆ ಮತ್ತೊಂದಿಲ್ಲ. ಜೀವಿಗಳಲ್ಲಿ ಕಂಡು ಬರುವ ಈ ವೈವಿಧ್ಯತೆಯನ್ನೇ ಜೀವವೈವಿಧ್ಯತೆ ಎನ್ನುತ್ತೇವೆ ಎಂದು ನುಡಿದರು.

ವೈವಿಧ್ಯಮಯ ಜೀವರಾಶಿಗಳೊಂದಿಗೆ ಮನುಷ್ಯ ಬದುಕಬೇಕು. ಮನುಷ್ಯನೇ ಪರಿಸರ ಅಲ್ಲ. ಜೀವ ಸಂಪತ್ತು, ಸಸ್ಯ ಸಂಪತ್ತಿನಿಂದ ಮಾತ್ರ ಮನುಷ್ಯ ಬದುಕಲು ಸಾಧ್ಯವೇ ಹೊರತು ಮನುಷ್ಯನಿಂದ ಪರಿಸರ ಬದುಕುವುದಿಲ್ಲ ಎಂಬುದನ್ನು ಅರಿಯಬೇಕಿದೆ. ದುರಾಸೆಯಿಂದ ಮನುಕುಲ ವಿನಾಶದತ್ತ ದಾಪುಗಾಲು ಇಡುತ್ತಿರುವುದು ಗೋಚರವಾಗುತ್ತಿದೆ ಎಂದು ಎಚ್ಚರಿಸಿದರು.

ಬದಲಾಗುತ್ತಿರುವ ಪ್ರಕೃತಿ ಬಗ್ಗೆ ಜಾಗೃತಿ ಹಾಗೂ ಮಾಹಿತಿ ನೀಡಲು ವಿಶ್ವ ವನ್ಯಜೀವಿ ದಿನವನ್ನು ವಿಶ್ವದ ಎಲ್ಲಾ ರಾಷ್ಟ್ರಗಳು ಆಚರಿಸುತ್ತಿವೆ. ಮಾನವನ ಚಟುವಟಿಕೆಗಳಿಂದ ವೃಕ್ಷ ಮತ್ತು ಪ್ರಾಣಿ ಜೀವ ಸಂಕುಲ ಸಮಸ್ಯೆ ಎದುರಿಸುತ್ತಿರುವ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಅನಿವಾರ್ಯ ಎಂದರು. ಜಗತ್ತಿನಲ್ಲಿ ಮನುಷ್ಯನ ನೆರವಿಲ್ಲದೇ ವನ್ಯಜೀವಿಗಳು ಬದುಕಬಲ್ಲವು. ಆದರೆ ವನ್ಯಜೀವಿಗಳಿಲ್ಲದೇ ಮನುಷ್ಯ ಬದುಕಲಾರ. ಪ್ರಾಣಿಗಳು ಮನುಕುಲದ ಜೀವಾಳ. ಸಾಕುಪ್ರಾಣಿಗಳು ಮತ್ತು ಪಕ್ಷಿಗಳು ಹಾಗೂ ವನ್ಯಜೀವಿಗಳ ಪರೋಕ್ಷ ಉಪಕಾರ ಸ್ಮರಿಸಬೇಕಿದೆ ಎಂದು ಸಲಹೆ ನೀಡಿದರು.

ಪ್ರಕೃತಿ ಸಮತೋಲನಕ್ಕೆ ಜೀವವೈವಿಧ್ಯತೆಗಳು ಆಧಾರ. ಜೀವರಾಶಿಗಳು ಭೂಮಿ ಮೇಲಿರಲಿ, ನೀರಲ್ಲಿರಲಿ, ಮಣ್ಣಲ್ಲಿರಲಿ, ಆಕಾಶದಲ್ಲಿ ಹಾರಾಡುತ್ತಿರಲಿ ಇವುಗಳ ಪಾತ್ರ ಪರಿಸರ ನಿರ್ವಹಣೆಯಲ್ಲಿ ಅನನ್ಯ ಎಂದರು.

ನಿವೃತ್ತ ಶಿಕ್ಷಕ ಜಯಶಂಕರ್ ಅವರು ಬಟ್ಟೆ ಬ್ಯಾಗ್‌ಗಳನ್ನು ನಾಗರಿಕರಿಗೆ ವಿತರಿಸಿ, ಪ್ಲಾಸ್ಟಿಕ್ ಬಳಕೆಯಿಂದ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಉಪನ್ಯಾಸ ನೀಡಿದರು. ಕೋಟ್ಯಾಂತರ ರೂ. ಬೆಲೆಬಾಳುವ ಜಾಗವನ್ನು ಉದ್ಯಾನವಕ್ಕೆ ದಾನವಾಗಿ ನೀಡಿರುವ ಸ್ಥಳಕ್ಕೆ ಕೆ.ಸಿದ್ದೇಗೌಡ (ಗುರೂಜಿ) ಉದ್ಯಾನವನ ಎಂದು ಘೋಷಿಸಿ ಹೆಸರಿಟ್ಟು, ಅಭಿವೃದ್ಧಿಗಾಗಿ ನಗರಸಭೆಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡ ಬಿ.ಆರ್. ರಾಮಚಂದ್ರ, ಕೃಷಿಕ ಲಯನ್ಸ್ ಸಂಸ್ಥೆ ಅಧ್ಯಕ್ಷ ಮೋಹನ್ ಕುಮಾರ್, ದಂತ ವೈದ್ಯ ಡಾ.ಚಂದ್ರಶೇಖರ್, ಮಂಡ್ಯ ನಗರ ಲಯನ್ಸ್ ಸಂಸ್ಥೆ ಅಧ್ಯಕ್ಷ ಡಾ.ಶಿವಕುಮಾರ್, ಸ್ಥಳೀಯ ಮುಖಂಡರಾದ ದೇವೇಗೌಡ, ಪ್ರೊ.ಶಂಕರೇಗೌಡ, ಪ್ರಾಧ್ಯಾಪಕ ನಂಜಪ್ಪ, ಯೋಗೇಶ್, ರವಿಕುಮಾರ್, ಸುರೇಶ್, ಭೀಮರಾಜ್, ತಿಲಕ್ ಮತ್ತಿತರರಿದ್ದರು.

ಭಾರತ್ ವಿಕಾಸ್ ಪರಿಷತ್‌ಗೆ ಶಿವಮಾದೇಗೌಡ ಅಧ್ಯಕ್ಷ



ಭಾರತೀನಗರ, ಮೇ 21– ಇಲ್ಲಿನ ಸ್ನೇಹ ವಿದ್ಯಾಸಂಸ್ಥೆ ಆವರಣದಲ್ಲಿ ಭಾರತ್ ವಿಕಾಸ್ ಪರಿಷತ್ ನೂತನ ಪದಾಧಿಕಾರಿಗಳ ಪದಗ್ರಹ ಕಾರ್ಯಕ್ರಮ ಜರುಗಿತು.

ನೂತನ ಅಧ್ಯಕ್ಷ ಶಿವಮಾದೇಗೌಡ, ಕಾರ್ಯದರ್ಶಿ ಶಿವರಾಮು, ಖಜಾಂಚಿ ಗಾಯಿತ್ರಿ, ಉಪಾಧ್ಯಕ್ಷ ನಾಗರಾಜು, ಸಹ ಕಾರ್ಯದರ್ಶಿಯಾಗಿ ಡಿ.ಎಸ್.ಗಿರೀಶ್ ಆಯ್ಕೆಯಾಗಿದ್ದಾರೆ. ಭಾರತ್ ವಿಕಾಸ್ ಪರಿಷತ್ ಮಹಾಪೋಷಕರಾದ ಟಿ.ಪಿ. ಚೌಡಯ್ಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಂಡ್ಯ ಜಿಲ್ಲೆ ಹೊರತು ಪಡಿಸಿದರೆ ಇನ್ನುಳಿದ ಭಾಗಗಳಲ್ಲಿ ಭಾರತ್‌ವಿಕಾಸ್ ಪರಿಷತ್ ಚಟುವಟಿಕೆಗಳು ಕುಂಠಿತವಾಗುತ್ತಿವೆ ಎಂದು ವಿಷಾದಿಸಿದರು.

1962ರಲ್ಲಿ ಭಾರತ–ಚೀನಾ ಯುದ್ಧ ನಡೆದು ಬಹಳಷ್ಟು ಸೈನಿಕರಿಗೆ ಸಾವು–ನೋವು ಉಂಟಾಗಿತ್ತು ಆ ಸಂದರ್ಭ ಕಂಗೆಟ್ಟಿದ್ದ ಸೈನಿಕರ ಕುಟುಂಬದವರಿಗೆ ಸಹಾಯಾಸ್ತ ಚಾಚುವ ದೃಷ್ಟಿಯಿಂದ ಆರಂಭವಾಗಿದ್ದೆ ಭಾರತ್ ವಿಕಾಸ್ ಪರಿಷತ್. ಇದು ಸಮಾನ ಮನಸ್ಕರದಿಂದ ನಡೆಯುವ ಸಂಸ್ಥೆ ಎಂದು ತಿಳಿಸಿದರು. ಭಾರತ್ ವಿಕಾಸ್ ಪರಿಷತ್ ಮಾಜಿ ಅಧ್ಯಕ್ಷ ಎಂ.ಮಾಯಪ್ಪ ಮಾತನಾಡಿ, ಭಾರತ್ ವಿಕಾಸ್ ಪರಿಷತ್ ಸಂಸ್ಥೆ ಸೇವಾ ಮನೋಭಾವವುಳ್ಳ ಸಂಸ್ಥೆಯಾಗಿದೆ. ಹಾಗಾಗಿ ಸೇವಾ ಮನೋಭಾವನೆವುಳ್ಳವರು ಸಂಸ್ಥೆಗೆ ಸೇರ್ಪಡೆಗೊಳ್ಳುತ್ತಿದ್ದಾರೆ. ಇದು ಸಂತಸದ ವಿಷಯ. ನೂತನ ಪದಾಧಿಕಾರಿಗಳು ಸಮಾಜಮುಖಿ ಕೆಲಸ ಮಾಡುವ ಮೂಲಕ ಉತ್ತಮ ಸೇವೆ ಸಲ್ಲಿಸಲಿ ಎಂದರು.

ನೂತನ ಪದಾಧಿಕಾರಿಗಳಿಗೆ ಭಾರತ್ ವಿಕಾಸ್ ಪರಿಷತ್ ಮಾಜಿ ಅಧ್ಯಕ್ಷ ಪುಟ್ಟರಾಮರಾಜೇ ಅರಸು ಪ್ರತಿಜ್ಞಾವಿಧಿ ಬೋಧಿಸಿದರು. ವೇದಿಕೆಯಲ್ಲಿ ಪರಿಷತ್ ಮಾಜಿ ಅಧ್ಯಕ್ಷ ನಂಜುಂಡೇಗೌಡ, ದಾಸೇಗೌಡ, ಮಾಜಿ ಕಾರ್ಯದರ್ಶಿ ರಾಮಯ್ಯ, ಕೋಶಾಧಿಕಾರಿಗಳಾದ ಸುಶೀಲ, ಪವಿತ್ರ, ಶೋಭಾ, ರಾಜೇಗೌಡ, ಬೋರಯ್ಯ, ರಾಜಣ್ಣ, ಡಿ.ಎಚ್. ಪುಟ್ಟರಾಮು, ಡಿ.ಸಿ.ಮಹೇಶ್ ಇತರರಿದ್ದರು.

ಶಿಶಿಕ್ಷು ತರಬೇತಿಗೆ ನೇಮಕ

ಮಂಡ್ಯ, ಮೇ 21– ಕರಾರಸಾನಿ ನಿಗಮ ಮಂಡ್ಯ ವಿಭಾಗದಲ್ಲಿ ಶಿಶಿಕ್ಷು ತರಬೇತಿಗೆ ಖಾಲಿ ಇರುವ ತಾಂತ್ರಿಕ ವೃತ್ತಿಗಳಿಗೆ ಫಿಟ್ಟರ್, ಎಲೆಕ್ಟ್ರಿಷಿಯನ್/ ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ ಹಾಗೂ ವೆಲ್ಡರ್(ಐಟಿಐ ನಲ್ಲಿ ತೇರ್ಗಡೆ ಹೊಂದಿದ) ಅಭ್ಯರ್ಥಿಗಳನ್ನು ನಿಯೋಜಿಸಿಕೊಳ್ಳಲಾಗುವುದು.

ಅರ್ಹ ಅಭ್ಯರ್ಥಿಗಳು ಸೂಕ್ತ ದಾಖಲಾತಿಗಳೊಂದಿಗೆ ಮೇ 31ರೊಳಗೆ (ಭಾನುವಾರ ಹಾಗೂ ಸಾರ್ವತ್ರಿಕ ರಜೆ ಹೊರತುಪಡಿಸಿ) ಮಂಡ್ಯ ವಿಭಾಗೀಯ ಕಚೇರಿಗೆ ಹಾಜರಾಗಿ ದಾಖಲಾತಿ ಸಲ್ಲಿಸಬಹುದು. ಮಾಹಿತಿಗೆ ಸಂಬಂಧ ಪಟ್ಟ ಅಧಿಕಾರಿ/ ಘಟಕ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಮೇಲೆಲ್ಲಾ ಸಿದ್ದರಾಮಯ್ಯ...
ಅಭಿಮಾನಿಯ ಪರಾಕಾಷ್ಠೆ



ಕೊಳ್ಳೇಗಾಲ, ಮೇ 21– ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೆ ಕೊಳ್ಳೇಗಾಲ ಪಟ್ಟಣದ ಬಸ್ತಿಪುರದ ಅಭಿಮಾನಿಯೋರ್ವ ಮೈಮೇಲೆಲ್ಲಾ ಸಿದ್ದು, ಹುಲಿಯಾ, ಸಿದ್ದರಾಮಯ್ಯ ಎಂದು ಬರೆಸಿಕೊಳ್ಳುವ ಮೂಲಕ ತಮ್ಮ ಅಭಿಮಾನದ ಪರಾಕಾಷ್ಠೆ ಪ್ರದರ್ಶಿಸಿದ್ದಾರೆ.

ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನಡೆದ ಸಿದ್ದರಾಮಯ್ಯರವರ ಮುಖ್ಯಮಂತ್ರಿ ಪ್ರಮಾಣವಚನಕ್ಕೂ ಮುನ್ನವೇ ಬಸ್ತೀಪುರದ ಮಲ್ಲೇಶ್ ಎಂಬ ತರಕಾರಿ ವ್ಯಾಪಾರಿ ತನ್ನ ಮೈಮೇಲೆ "ಹುಲಿಯಾ ಸಿದ್ದರಾಮಯ್ಯ, ಸಿದ್ದು ಸಿಎಂ" ಎಂದು ಬರೆಸಿಕೊಂಡು ಗಮನ ಸೆಳೆದಿದ್ದಾರೆ. ಮೇ 13ರ ಫಲಿತಾಂಶಕ್ಕೂ ಮುನ್ನ ಇವರು ಸಿದ್ದರಾಮಯ್ಯ ಗೆಲ್ಲುತ್ತಾರೆ ಎಂದು ಹಣ ಪಣಕ್ಕಿಟ್ಟು ಬಾಜಿಗೆ ಆಹ್ವಾನಿಸುವ ವಿಡಿಯೋ ವೈರಲ್ ಆಗಿ ವಿವಾದಕ್ಕೂ ಈಡಾಗಿದ್ದರು. ನಮ್ಮ ಸಾಹೇಬರು, ನಮ್ಮ ಸಿದ್ದು ಎಂದು ಮಲ್ಲೇಶ್ ಹೆಮ್ಮೆಯಿಂದ ಹೇಳಿಕೊಳ್ಳುತ್ತ ಅಭಿಮಾನದ ಪರಕಾಷ್ಠೆ ಮೆರೆಯುವ ಮೂಲಕ ಗಮನ ಸೆಳೆದಿದ್ದಾರೆ.

ಪಂಚಾಯತ್ ರಾಜ್ ವ್ಯವಸ್ಥೆಗೆ ರಾಜೀವ್‌ಗಾಂಧಿ ಕೊಡುಗೆ ಅಪಾರ



ಚಾಮರಾಜನಗರ, ಮೇ 21– ಪಂಚಾಯತ್ ರಾಜ್ ವ್ಯವಸ್ಥೆಗೆ ಬಲ ತುಂಬುವುದರ ಜೊತೆಗೆ ಮಾಹಿತಿ ತಂತ್ರಜ್ಞಾನವನ್ನು ದೇಶಕ್ಕೆ ಪರಿಚಯ ಮಾಡಿಸಿಕೊಟ್ಟ ಮಾಜಿ ಪ್ರಧಾನಿ ರಾಜೀವ್‌ಗಾಂಧಿ ಇಡೀ ದೇಶಕ್ಕೆ ಮಾದರಿ ಆಡಳಿತ ನೀಡಿದ ಮಹಾನ್ ಪುರುಷ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಬಣ್ಣಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭಾನುವಾರ ಮಾಜಿ ಪ್ರಧಾನಿ ದಿ. ರಾಜೀವ್‌ಗಾಂಧಿ ಅವರ 32ನೇ ವರ್ಷದ ಪುಣ್ಯ ಸ್ಮರಣೆಯ ಕಾರ್ಯಕ್ರಮದಲ್ಲಿ ರಾಜೀವ್‌ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ರಾಜೀವ್‌ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಜನಸಾಮಾನ್ಯರಿಗೂ ಅಧಿಕಾರ ಹಂಚಿಕೆಯಾಗಬೇಕು ಎಂಬ ಹಂಬಲವನ್ನು ಹೊಂದಿದ್ದರು. ಪಂಚಾಯತ್ ರಾಜ್ ವ್ಯವಸ್ಥೆಯನ್ನು ದೇಶಾದ್ಯಂತ ಬಲಪಡಿಸಿ, ದೆಹಲಿಯಿಂದ ಹಳ್ಳಿಯವರೆಗೆ ಅಧಿಕಾರ ವಿಕೇಂದ್ರೀಕರಣಗೊಳಿಸಿದ್ದರು. ಜಿಪಂ ಬಲವರ್ಧನೆ ಮೂಲಕ ನನ್ನಂಥ ಅನೇಕ ನಾಯಕರನ್ನು ಹುಟ್ಟಿ ಹಾಕಿದ ಕೀರ್ತಿ ರಾಜೀವ್ ಗಾಂಧಿ ಅವರಿಗೆ ಸಲ್ಲುತ್ತದೆ. ಅವರ ಪರಿಕಲ್ಪನೆಯಿಂದಾಗಿ ದೇಶ ವಿಶ್ವಮಟ್ಟದಲ್ಲಿ ಗುರುತಿಸಿಕೊಳ್ಳುವಂತೆ ಮಾಡಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ದೇಶದ ಅಭಿವೃದ್ಧಿಯಲ್ಲಿ ಮಾಹಿತಿ ಮತ್ತು ತಂತ್ರಜ್ಞಾನ ಬೆಳವಣಿಗೆಯಾಗಲು ಹೆಚ್ಚಿನ ಉತ್ತೇಜನ ನೀಡಿದ್ದರು. ಇದರ ಪರಿಣಾಮವಾಗಿ ಮೊಬೈಲ್ ಕ್ರಾಂತಿ, ಸಾಮಾಜಿಕ ಜಾಲತಾಣಗಳು ಅಭಿವೃದ್ಧಿಯಾದವು. ಇತರೇ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು ಸಹ ಅಗ್ರಸ್ಥಾನದತ್ತ ಕೊಂಡೊಯ್ಯಲು ರಾಜೀವ್ ಗಾಂಧಿ ಅವರು ನೀಡಿದ ಕೊಡುಗೆ ಅಪಾರವಾಗಿದೆ ಎಂದರು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎ.ಎಸ್. ಗುರುಸ್ವಾಮಿ, ಮಹಮದ್ ಅಸ್ಗರ್, ತಾಪಂ ಮಾಜಿ ಸದಸ್ಯರಾದ ಕಾಗಲವಾಡಿ ಶಿವಸ್ವಾಮಿ, ಮುಖಂಡರಾದ ಶಂಭಪ್ಪ, ಶಿವಮೂರ್ತಿ, ಎಎಚ್‌ಎನ್ ನಸ್ರುಲ್ ಖಾನ್, ಆಯೂಬ್ ಖಾನ್, ಜಿಪಂ ಮಾಜಿ ಸದಸ್ಯೆ ಕಾವೇರಿ ಶಿವಕುಮಾರ್, ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಶಕುಂತಲಾ, ರಾಚಶೆಟ್ಟಿ, ಮಾಜಿ ನಗರಸಭಾ ಸದಸ್ಯರಾದ ಕೆಂಪರಾಜು, ಮಲ್ಲು, ಪುಟ್ಟಸ್ವಾಮಿ, ಪಿ. ಶೇಖರ್, ಚೆನ್ನಿಪುರಮೋಳೆ ಚಂದ್ರು ಹಾಜರಿದ್ದರು.

ಆಲೂರು ಹೊಮ್ಮದಲ್ಲಿ ವಿಜೃಂಭಣೆಯ ರಾಮೋತ್ಸವ




ಚಾಮರಾಜನಗರ, ಮೇ.21– ತಾಲೂಕಿನ ಆಲೂರು ಹೊಮ್ಮ ಗ್ರಾಮದಲ್ಲಿ ನಾಯಕ ಸಮುದಾಯದ ವತಿಯಿಂದ ರಾಮೋತ್ಸವ ವಿಜೃಂಭಣೆಯಿಂದ ನಡೆಯಿತು.

ಗ್ರಾಮದ ಶ್ರೀಪಟ್ಟಾಭಿ ರಾಮಮಂದಿರದಲ್ಲಿ ಶ್ರೀರಾಮನ ಪಲ್ಲಕ್ಕಿ ಉತ್ಸವದ ಅಂಗವಾಗಿ ಶನಿವಾರ ಸಾಯಂಕಾಲ ಹೋಮ, ಶ್ರೀರಾಮದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ರಾತ್ರಿ 10.30 ಗಂಟೆಯಲ್ಲಿ ರಾಮದೇವರಿಗೆ ಪೂಜೆ ಸಲ್ಲಿಸಿ ಹೂವಿನ ಅಲಂಕೃತ ಪಲ್ಲಕ್ಕಿಯಲ್ಲಿ ಶ್ರೀರಾಮದೇವರ ಭಾವಚಿತ್ರವಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆ ಹಾದು ಹೋಗುವ ರಸ್ತೆ ಮೇಲೆ ಬಣ್ಣಬಣ್ಣದ ಚಿತ್ತಾರ ಬಿಟ್ಟು ಸ್ವಾಗತಿಸಲಾಯಿತು. ರಾಮೋತ್ಸವದ ಅಂಗವಾಗಿ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ವಿದ್ಯುತ್ ದೀಪಗಳಿಂದ, ಹಸಿರು ತೋರಣಗಳಿಂದ ಶೃಂಗರಿಸಲಾಗಿತ್ತು. ಮೆರವಣಿಗೆಯಲ್ಲಿ ಗೂಳೀಪುರ ಗ್ರಾಮದ ನಾಯಕ ಜನಾಂಗದವರು ಮತ್ತು ಹೊಮ್ಮ ಗ್ರಾಮದ ನಾಯಕ ಜನಾಂಗದವರು, ಗ್ರಾಮಸ್ಥರು ಭಾಗವಹಿಸಿದ್ದರು.

ಬಿರುಗಾಳಿಗೆ ಮನೆಯ ಮೇಲ್ಛಾವಣಿ ಹಾರಿ ನಷ್ಟ



ಚಾಮರಾಜನಗರ, ಮೇ 21– ತಾಲೂಕಿನ ನಂಜೆದೇವನಪುರ ಗ್ರಾಮದಲ್ಲಿ ಬೀಸಿದ ಬಿರುಗಾಳಿಗೆ ತೋಟದಲ್ಲಿ ನಿರ್ಮಿಸಿದ್ದ ರೇಷ್ಮೆ ಹುಳು ಸಾಗಾಣಿಕೆ ಮನೆಯ ಮೇಲ್ಛಾವಣಿ ಹಾರಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಗ್ರಾಮದ ಬೆಳ್ಳಿ ಮಾದಮ್ಮ ಅವರು ತಮ್ಮ ತೋಟದಲ್ಲಿ ರೇಷ್ಮೆ ಹುಳು ಸಾಕಾಣಿಕೆಗಾಗಿ ಮನೆಯೊಂದನ್ನು ನಿರ್ಮಿಸಿದ್ದರು. ಗುರುವಾರ ಮಧ್ಯಾಹ್ನ ಬೀಸಿದ ಬಿರುಗಾಳಿಗೆ ಮನೆಯ ಮೇಲ್ಛಾವಣಿಗೆ ಹಾಕಲಾಗಿದ್ದ ಕಲ್ನಾರ್ ಸೀಟ್‌ಗಳು ಹಾರಿ ನೆಲಕ್ಕೆ ಬಿದ್ದು ಹೊಡೆದು ಹೋಗಿವೆ. ಇದಲ್ಲದೇ ಮನೆಗೂ ಸಹ ಹಾನಿಯಾಗಿ ನಷ್ಟ ಸಂಭವಿಸಿದೆ. ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಮಠ ಮಂದಿರಗಳಿಗೆ ಶಾಸಕ ಗಣೇಶ್‌ಪ್ರಸಾದ್ ಭೇಟಿ



ಗುಂಡ್ಲುಪೇಟೆ, ಮೇ 21– ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾದ ನಂತರ ಎಚ್.ಎಂ.ಗಣೇಶ್ ಪ್ರಸಾದ್ ಮಠ ಮಂದಿರಗಳಿಗೆ ಭೇಟಿ ನೀಡುತ್ತಿದ್ದಾರೆ.

ತಮ್ಮ ತಾಯಿ ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಜತೆಗೂಡಿ ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ ಶಿವರಾತ್ರಿ ದೇಶಿಕೇಂದ್ರಸ್ವಾಮಿಗಳ ಆಶೀರ್ವಾದ ಪಡೆದರು. ನಂತರ ಶಾಸಕರು ಕುಟುಂಬದ ಸದಸ್ಯರು ಹಾಗೂ ಕಾರ್ಯಕರ್ತರ ಜತೆಗೂಡಿ ನಂಜನಗೂಡಿಗೆ ತೆರಳಿ ನಂಜುಂಡೇಶ್ವರನ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಗಣೇಶ್ ಪ್ರಸಾದ್ ಪತ್ನಿ, ವಿದ್ಯಾ ಗಣೇಶ್, ಪುತ್ರ ಇಷ್ಟಾರ್ಥ್ ಪ್ರಸಾದ್, ಚಿಕ್ಕಮ್ಮ ರೂಪಾ, ಮುಖಂಡರಾದ ಜಿ.ಕೆ.ಲೋಕೇಶ್, ಚಂದನ್ ಹಾಗೂ ಇತರರು ಇದ್ದರು.

ಅಭಿಮಾನಿಗಳಿಂದ ಪೂಜೆ: ಗಣೇಶ್ ಪ್ರಸಾದ್ ಅತ್ಯಧಿಕ ಬಹುಮತಗಳಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಅಭಿಮಾನಿಗಳು ದೇವಾಲಯಗಳಲ್ಲಿ ಪೂಜೆ ಮಾಡಿಸುತ್ತಿದ್ದಾರೆ. ನಾನಾ ಗ್ರಾಮಗಳಲ್ಲಿ ಅಭಿಮಾನಿಗಳು ಹಾಗೂ ಕಾರ್ಯಕರ್ತರು ತಮ್ಮ ಊರುಗಳ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಸಾದ ವಿತರಣೆ ಮಾಡುತ್ತಿದ್ದಾರೆ. ನೂತನ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮುಖ್ಯಮಂತ್ರಿಗಳನ್ನು ಕರೆತಂದು ಪಟ್ಟಣದಲ್ಲಿ ಬೃಹತ್ ಅಭಿನಂದನಾ ಕಾರ್ಯಕ್ರಮ ನಡೆಸುವ ಬಗ್ಗೆ ಸಿದ್ಧತೆ ನಡೆಸುತ್ತಿದ್ದಾರೆ.

ಸದನದೊಳ್ ಸಿದ್ದರಾಮಯ್ಯರಿಗೆ ಸರಿಸಮರ್ಯಾರು!

ಪ್ರಸ್ತುತ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಸ್ಪಷ್ಟ ಬಹುಮತ ಪಡೆದು ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಹೀಗೆ ವಿಸ್ತಾರವಾದ ಹಾಗೂ ವಿಭಿನ್ನವಾದ ವಿವಿಧ ರಾಜಕೀಯ ಮಜಲುಗಳನ್ನು ದಾಟಿ ಬಂದಿರುವ ಸಿದ್ದರಾಮಯ್ಯನವರು ಅನುಭವಿ ಹಾಗೂ ರಾಜಕೀಯ ಪಟ್ಟುಗಳನ್ನು ಕರಗತ ಮಾಡಿಕೊಂಡಿರುವ ಹಿರಿಯ ಮುತ್ಸದ್ದಿ. ಇಂತಹ ಮುಖ್ಯಮಂತ್ರಿಯನ್ನು ಸದನದಲ್ಲಿ ಎದುರಿಸುವುದು ವಿರೋಧ ಪಕ್ಷಕ್ಕೆ ಸವಾಲಿನ ಕೆಲಸವೇ ಸರಿ.

ಪ್ರತಾಪ ರುದ್ರಮೂರ್ತಿ
ವಕೀಲರು, ಮೈಸೂರು.

ಕರ್ನಾಟಕ ರಾಜ್ಯದ ಸಾರ್ವತ್ರಿಕ ವಿಧಾನಸಭಾ ಚುನಾವಣೆ 2023ರ ಫಲಿತಾಂಶ ಹೊರಬಿದ್ದಿದ್ದು, ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತ ಪಡೆದು, ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರದ ಗದ್ದುಗೆ ಹಿಡಿದಿದ್ದಾರೆ.



1983ರಲ್ಲಿ ಭಾರತೀಯ ಲೋಕದಳ ಪಕ್ಷದ ಮೂಲಕ ವಿಧಾನಸಭೆ ಪ್ರವೇಶಿಸಿ, ನಂತರದಲ್ಲಿ ಜನತಾ ಪಾರ್ಟಿ ಸೇರಿ ರಾಮಕೃಷ್ಣ ಹೆಗಡೆಯವರ ಸಂಪುಟದಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದರು. 1994ರಲ್ಲಿ ಅಧಿಕಾರಕ್ಕೆ ಬಂದ ಜನತಾದಳ ಸರ್ಕಾರದಲ್ಲಿ ಎಚ್.ಡಿ.ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿ ಗಮನ ಸೆಳೆದರು. 1996ರಲ್ಲಿ ಜೆ.ಎಚ್.ಪಟೇಲರು ಮುಖ್ಯಮಂತ್ರಿ ಆದಾಗ ಇವರು ಹಣಕಾಸು ಸಚಿವ ಸ್ಥಾನದ ಜೊತೆಗೆ ರಾಜ್ಯದ ಉಪಮುಖ್ಯಮಂತ್ರಿಯಾದರು.

ಜನತಾದಳ ವಿಘಟನೆಯಾದಾಗ ಸಿದ್ದರಾಮಯ್ಯನವರು ಎಚ್.ಡಿ.ದೇವೇಗೌಡರ ನೇತೃತ್ವದ ಜಾತ್ಯಾತೀತ ಜನತಾದಳದಲ್ಲಿ ಗುರುತಿಸಿಕೊಂಡರು. 2004ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಮತ್ತೆ ರಾಜ್ಯದ ಉಪಮುಖ್ಯಮಂತ್ರಿಯಾದರು. ಈ ಸಮಯದಲ್ಲಿ ಇವರು ಅಹಿಂದ ಸಂಘಟನೆಗೆ ಒತ್ತುಕೊಟ್ಟ ಕಾರಣ ಪಕ್ಷದಿಂದ ಉಚ್ಚಾಟನೆಯಾದರು. ಬದಲಾದ ರಾಜಕೀಯ ಸ್ಥಿತ್ಯಂತರದಿಂದಾಗಿ ಕಾಂಗ್ರೆಸ್ ಪಕ್ಷ ಸೇರಿ 2006ರ ಉಪಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ವಿಧಾನಸಭೆಗೆ ಮತ್ತೆ ಆಯ್ಕೆಯಾದರು. ನಂತರದಲ್ಲಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಭಾರತೀಯ ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಸಿದ್ದರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿ ಇಡೀ ಸದನವನ್ನೇ ತಮ್ಮತ್ತ ಸೆಳೆದಿದ್ದರು.

ಆಗ ಬಿಜೆಪಿ ಸರ್ಕಾರದಲ್ಲಿ ಪ್ರಭಾವಿ ಸಚಿವರಾಗಿದ್ದ ಜನಾರ್ದನ ರೆಡ್ಡಿ ಮತ್ತು ಸಿದ್ದರಾಮಯ್ಯನವರ ನಡುವೆ ಸದನದಲ್ಲಿ ನಡೆದ ಸಂಘರ್ಷದಲ್ಲಿ ಬಳ್ಳಾರಿ ಪಾದಯಾತ್ರೆಯ ಶಪಥ ಮಾಡಿ ಅಂತೆಯೇ ಬೆಂಗಳೂರಿನಿಂದ ಪಾದಯಾತ್ರೆ ಮೂಲಕ ಬಳ್ಳಾರಿ ತಲುಪಿ, ಅಲ್ಲಿಯೇ ಸಮಾವೇಶ ಮಾಡುವ ಮೂಲಕ ತಮ್ಮ ಶಪಥವನ್ನು ಪೂರೈಸಿಕೊಂಡು ದಿಟ್ಟ ಹೋರಾಟಗಾರ ಎನಿಸಿಕೊಂಡರು. ಇದರಿಂದಾಗಿ ಕಾಂಗ್ರೆಸ್ ಪಕ್ಷದ ವರ್ಚಸ್ಸು ಹೆಚ್ಚಿಸುವುದರ ಜೊತೆಗೆ ಕಾಂಗ್ರೆಸಿನಲ್ಲಿ ತಮ್ಮ ಪ್ರಭಾವವನ್ನು ಇಮ್ಮಡಿಗೊಳಿಸಿಕೊಂಡರು.

ನಂತರ 2013ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ನಿಚ್ಚಳ ಬಹುಮತ ಪಡೆದಾಗ ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗಿ ಐದು ವರ್ಷಗಳ ಪೂರ್ಣಾವಧಿ ಆಡಳಿತ ನಡೆಸಿದರು.

ಪ್ರಸ್ತುತ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಸ್ಪಷ್ಟ ಬಹುಮತ ಪಡೆದು ಸಿದ್ದರಾಮಯ್ಯನವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಹೀಗೆ ವಿಸ್ತಾರವಾದ ಹಾಗೂ ವಿಭಿನ್ನವಾದ ವಿವಿಧ ರಾಜಕೀಯ ಮಜಲುಗಳನ್ನು ದಾಟಿಬಂದಿರುವ ಸಿದ್ದರಾಮಯ್ಯನವರು ಅನುಭವಿ ಹಾಗೂ ರಾಜಕೀಯ ಪಟ್ಟುಗಳನ್ನು ಕರಗತ ಮಾಡಿಕೊಂಡಿರುವ ಹಿರಿಯ ಮುತ್ಸದ್ದಿ. ಇಂತಹ ಮುಖ್ಯಮಂತ್ರಿಯನ್ನು ಸದನದಲ್ಲಿ ಎದುರಿಸುವುದು ವಿರೋಧ ಪಕ್ಷಕ್ಕೆ ಸವಾಲಿನ ಕೆಲಸವೇ ಸರಿ.

ಪ್ರಜಾಪ್ರಭುತ್ವದ ಸೌಂದರ್ಯ ಅಡಗಿರುವುದೇ ಬಲಿಷ್ಠ ಹಾಗೂ ಪ್ರಬುದ್ಧ ವಿರೋಧ ಪಕ್ಷದಲ್ಲಿ! ಪ್ರಸ್ತುತ ವಿಧಾನಸಭೆಯಲ್ಲಿ ಭಾರತೀಯ ಜನತಾ ಪಕ್ಷ ಅಧಿಕೃತ ವಿರೋಧ ಪಕ್ಷವಾಗಿದೆ. ಆದರೆ ಅಲ್ಲಿ ಈಗ ದಕ್ಷ ಹಾಗೂ ಗಟ್ಟಿ ಧ್ವನಿಯಾದ ಯಡಿಯೂರಪ್ಪನವರಿಲ್ಲ! ಒಂದು ಕಾಲದಲ್ಲಿ "ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು" ಎಂಬ ಮಾತಿತ್ತು. ಈಗ ನುರಿತ ಸಿದ್ದರಾಮಯ್ಯನವರ ವಿರುದ್ಧ ಯಡಿಯೂರಪ್ಪನವರ ಅನುಪಸ್ಥಿತಿ ಎದ್ದುಕಾಣುತ್ತಿದೆ. ಈಶ್ವರಪ್ಪನವರು ಯಡಿಯೂರಪ್ಪನವರ ಜೊತೆಯಲ್ಲಿಯೇ ರಾಜಕಾರಣ ಮಾಡಿದವರು. ಹಾಗೂ ಹಲವು ಬಾರಿ ಸದನಕ್ಕೆ ಆಯ್ಕೆಯಾಗಿ ಸಚಿವರಾಗಿ ಕೆಲಸ ಮಾಡಿದ ಅನುಭವಿ ಹಾಗೂ ಸಿದ್ದರಾಮಯ್ಯನವರ ರಾಜಕೀಯ ಪಟ್ಟುಗಳನ್ನು ಹತ್ತಿರದಿಂದಲೇ ಬಲ್ಲ ಸಂಸದೀಯ ಪಟು. ಆದರೆ ಪ್ರಸ್ತುತ ಅವರು ಸಹ ಸದನದಲ್ಲಿಲ್ಲ. ಸಿದ್ದರಾಮಯ್ಯ ಹಾಗೂ ಈಶ್ವರಪ್ಪನವರ ವಾಗ್ವಾದಗಳಿಗೆ ಹಲವು ಬಾರಿ ಸದನ ಸಾಕ್ಷಿಯಾಗಿದೆ. ಹಾಗಾಗಿ ಈಶ್ವರಪ್ಪನವರ ಅನುಪಸ್ಥಿತಿಯೂ ಕೂಡ ಬಹುಮಟ್ಟಿಗೆ ವಿರೋಧ ಪಕ್ಷವಾದ ಬಿ.ಜೆ.ಪಿಯನ್ನು ಕಾಡಬಹುದು.

ಜೆ.ಸಿ.ಮಾಧುಸ್ವಾಮಿಯವರು ಅತ್ಯುತ್ತಮ ಸಂಸದೀಯ ಪಟು ಎನ್ನುವುದರಲ್ಲಿ ಸಂಶಯವಿಲ್ಲ. ಹಲವಾರು ಬಾರಿ ಅವರು ಆಡಳಿತ ಪಕ್ಷವನ್ನು ಸದನದಲ್ಲಿ ಇಕ್ಕಟ್ಟಿಗೆ ಸಿಲುಕಿಸಿದ್ದಾರೆ. ಅದರಲ್ಲೂ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಸಮ್ಮಿಶ್ರ ಸರ್ಕಾರದ ಪತನದ ಸಮಯದಲ್ಲಿ ಸದನದಲ್ಲಿ ಇವರ ಗಂಭೀರ ಮಾತುಗಳು ಗಮನ ಸೆಳೆದಿದ್ದವು. ಪ್ರಸ್ತುತ ಸದನದಲ್ಲಿ ಇವರೂ ಸಹ ಇಲ್ಲ.

ಸಂಘ ಪರಿವಾರದಿಂದ ಬಂದು ಬಿಜೆಪಿಯ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿರುವ ಸಿ.ಟಿ.ರವಿ ಸಹ ಅನುಭವಿ ಸಂಸದೀಯ ಪಟು. ಇವರೂ ಸಮರ್ಥವಾಗಿ ವಿರೋಧ ಪಕ್ಷದ ನಾಯಕನ ಕೆಲಸವನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದ್ದರು. ಇವರು ಸಹ ಸದನದಲ್ಲಿ ಈಗ ಇಲ್ಲ. ಹಾಗೆಯೇ ಹಿರಿಯ ಮುತ್ಸದ್ದಿಗಳಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರೂ ಸದನದಲ್ಲಿಲ್ಲ. ಆದರೆ, ಸಿದ್ದರಾಮಯ್ಯನವರ ನೇತೃತ್ವದ ಆಡಳಿತ ಪಕ್ಷದಲ್ಲಿ ಅನುಭವಿಗಳ ದಂಡೇ ಇದೆ. ಇಂತಹ ಆಡಳಿತ ಪಕ್ಷವನ್ನು ಎದುರಿಸುವ ದಿಟ್ಟ ವಿರೋಧ ಪಕ್ಷದ ನಾಯಕನ ಅನಿವಾರ್ಯತೆ ಬಿಜೆಪಿಗೆ ಇದೆ. ಹಾಗಾಗಿ ಬಿಜೆಪಿ ತನ್ನಲ್ಲಿ ಸಮರ್ಥ ನಾಯಕ ಹುಡುಕಾಟದಲ್ಲಿದೆ. ಆ ಮೂಲಕ ತನ್ನ ಪಕ್ಷಕ್ಕೆ ಹೊಸ ಹುರುಪು ತುಂಬುವ, ಬಲಿಷ್ಠಗೊಳಿಸುವ ಹೊಸ ನಾಯಕನ ಮೂಲಕ ಮುಂದಿನ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವ ಸಿದ್ಧತೆಯಲ್ಲಿದೆ. ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಸೋಲು ಅಂತಿಮವೂ ಅಲ್ಲ. ಹಾಗೆಯೇ ಗೆಲುವು ಶಾಶ್ವತವೂ ಅಲ್ಲ. ಪ್ರಸ್ತುತ ಬಿಜೆಪಿ ಪಕ್ಷವು ತನ್ನ ಹಳೆಯ ತಲೆಮಾರಿನಿಂದ ಹೊಸ ತಲೆಮಾರಿಗೆ ಮಗ್ಗುಲು ಬದಲಿಸುವ ಕಾಲಘಟ್ಟದಲ್ಲಿದೆ. ಇಂತಹ ಸಮಯದಲ್ಲಿ ಪಕ್ಷವು ಸೂಕ್ತ ವಿರೋಧ ಪಕ್ಷದ ನಾಯಕನ ಮೂಲಕ ತನ್ನ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳುವ ಅನಿವಾರ್ಯತೆಯು ಆ ಪಕ್ಷದ ಮುಂದಿದೆ.

ಪ್ರಸ್ತುತ ಪ್ರತಿಪಕ್ಷವಾದ ಬಿಜೆಪಿಯು ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವನ್ನು ಸದನದಲ್ಲಿ ಸಮರ್ಥವಾಗಿ ಎದುರಿಸುವುದೇ? ಸರ್ಕಾರದ ಲೋಪದೋಷಗಳನ್ನು ಸದನದಲ್ಲಿ ಎಳೆ ಎಳೆಯಾಗಿ ಬಿಚ್ಚಿಡುವುದೇ? ತಾನು ಮತ್ತೆ ಅಧಿಕಾರದ ಗದ್ದುಗೆಯನ್ನು ಏರಲು ಜನರ ವಿಶ್ವಾಸವನ್ನು ಗಳಿಸುವುದೇ? ಮುಂದೆ ಬರುವ ವಿರೋಧಪಕ್ಷದ ನಾಯಕರು ಸದನದಲ್ಲಿ ಮಿಂಚಿನ ಸಂಚಾರ ತರಬಲ್ಲರೇ? ಅಥವಾ ಹೆಸರಿಗಷ್ಟೇ ಸೀಮಿತವಾಗುವರೇ? ಇವೆಲ್ಲವನ್ನೂ ಕಾಲವೇ ನಿರ್ಧರಿಸಬೇಕು.

ವಾರಭವಿಷ್ಯ

21.05.2023 ರಿಂದ 27.05.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ, ಚಂದ್ರ-ವೃಷಭ, ಮಿಥುನ, ಕಟಕ, ಸಿಂಹ, ಮೇಷ, ಗುರು-ಮೇಷ, ಶುಕ್ರ-ಮಿಥುನ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಹೋಟೆಲ್, ಟ್ರಾವೆಲ್ ಏಜೆನ್ಸಿ, ಲಾಡ್ಜಿಂಗ್ ಉದ್ಯಮಿಗಳಿಗೆ ಉತ್ತಮ ಧನಲಾಭವಾಗಲಿದೆ. ಕಳೆದುಕೊಂಡ ಆರೋಗ್ಯ ಮತ್ತೆ ಪಡೆಯುವಿರಿ. ಹಿಡಿದ ಕೆಲಸಗಳು ಸಫಲತೆಯನ್ನು ಹೊಂದುವುದು. ಧನ-ಧಾನ್ಯ ವೃದ್ಧಿ, ಭೋಜನ, ಶಯನ ಸುಖಗಳೂ ಉಂಟು, ಮಠಾಧೀಶರ ಭೇಟಿ ಹಾಗೂ ಆಶೀರ್ವಚನ ದೊರೆಯುವುದು. ವಿದೇಶಯಾನಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಾದೀತು.
ಶ್ರೀಗಣೇಶ ಅರ್ಚನೆ. ಶುಭ ಸಂಖ್ಯೆ-1.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ವಾರದ ಪೂರ್ವಾರ್ಧಕ್ಕೆ ನಿರೀಕ್ಷಿತ ಹಣ ಕೈ ಸೇರುವುದು ಉಚ್ಚ ಚಂದ್ರನ ಪ್ರಭಾವದಿಂದ ರಾಜಸಿಕ ವಸ್ತು, ವಿಷಯಗಳು, ಸುಖ, ಭೋಗ ದೊರೆತು ಉಲ್ಲಸಿತರಾಗಿರುವಿರಿ. ಬ್ಯಾಂಕ್ ಸಾಲಕ್ಕೆ ಪ್ರಯತ್ನಿಸುತ್ತಿದ್ದರೆ ಸಫಲರಾಗುವಿರಿ. ವಿದ್ವಜ್ಜನರ ಭೇಟಿಯಿಂದ ಜ್ಞಾನಪ್ರಾಪ್ತಿ ಹಾಗೂ ಪೂರಕ ಸ್ಫೂರ್ತಿ ದೊರೆಯುವುದು. ವಿದ್ಯಾರ್ಥಿಗಳಿಗೆ ಮರು ಯತ್ನದಲ್ಲಿ ಸಫಲತೆ ದೊರೆಯುವುದು. ವಾರಾಂತ್ಯಕ್ಕೆ ಧರ್ಮಕ್ಷೇತ್ರಕ್ಕೆ ಭೇಟಿ.
ಶ್ರೀವೆಂಕಟೇಶ್ವರನಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಗುರು ಕೃಪೆಯಿಂದ ಭಾಗ್ಯದ ಬಾಗಿಲು ತೆರೆದಿದೆ. ಎನ್‌ಕ್ಯಾಷ್ ಮಾಡಿಕೊಳ್ಳಲು ಹಿಂಜರಿಯದಿರಿ. ಪುನಸ್ಕಾರ, ಪ್ರಶಸ್ತಿಗಳು ದೊರೆಯುವ ಸಂಭವ. ಸುವರ್ಣ ವ್ಯಾಪಾರಗಾರರಿಗೆ ಉತ್ತಮ ಧನ ಲಾಭವಿದೆ. ಮಕ್ಕಳ ಸಾಧನೆಯಿಂದ ಹೆಮ್ಮೆಪಡುವಿರಿ. ವಿವಾಹ ಮಾತುಕತೆಗಳು ಆಷಾಢದ ನಂತರ ಫಲಪ್ರದವಾಗುವುದು. ಹಲವರಿಗೆ ಪುತ್ರ ಸಂತಾನದ ಸಂತಸ. ವಾರದ ಕಡೆಗೆ ಆಕಸ್ಮಿಕ ಧನಲಾಭ, ಶಾರ್ಟ್ ಟ್ರಿಪ್.
ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ನಿಮ್ಮ ರಾಶ್ಯಾಧಿಪತಿ ಚಂದ್ರ ಲಾಭ ಸ್ಥಾನದಲ್ಲಿ ಇದ್ದಾರೆ. ಕೆಲಸ ಕಾರ್ಯಗಳನ್ನು ಆದ್ಯತೆಯ ಅನುಸಾರ ಕೈಗೆತ್ತಿಕೊಳ್ಳಿ ಸಫಲರಾಗುವಿರಿ. ಪ್ರೀತಿ-ಪ್ರೇಮ ವಿಷಯಗಳಲ್ಲಿ ಸಕಾರಾತ್ಮಕ ಫಲವನ್ನು ಹೊಂದುವಿರಿ, ಜೊತೆಗೆ ನಿಮ್ಮ ವೈಯಕ್ತಿಕ ಸಮಸ್ಯೆಗಳಿಗೆ ಉತ್ತರ ದೊರೆಯಲಿದೆ. ಸರ್ಕಾರಿ ಹಾಗೂ ನ್ಯಾಯಾಲಯ ಕೆಲಸಗಳು ಅನುಕೂಲಕರವೆನಿಸಲಿದೆ, ನೀವು ನ್ಯಾಯಮಾರ್ಗವನ್ನು ತೊರೆಯದಿರಿ.
ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-3.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಗುರುಕೃಪೆಗೆ ಪಾತ್ರರಾಗಿದ್ದೀರಾ. ಸಮಯಕ್ಕೆ ಸರಿಯಾಗಿ ಹಣ ಒದಗಿ ಬರುವುದು. ಸರ್ಕಾರಿ ನೌಕರರು ಮೇಲಧಿಕಾರಿಗಳ ಮರ್ಜಿಯಂತೆ ನಡೆದರೆ ನಿಮಗೇ ಲಾಭ ಹಾಗೂ ಹೊಸ ಜವಾಬ್ದಾರಿಗಳನ್ನು ಸ್ವೀಕರಿಸಲು ಸಿದ್ಧರಾಗಿರಿ. ಗುರು-ಹಿರಿಯರ ಮಾರ್ಗದರ್ಶನ ಪಾಲಿಸುವುದರಿಂದ ನಿಮ್ಮ ಭವಿಷ್ಯ ಉಜ್ವಲವಾಗಲಿದೆ. ಸಮಾಜ ವಿರೋಧಿ ವ್ಯಕ್ತಿಗಳಿಂದ ದೂರವಿದ್ದರೆ ಕ್ಷೇಮ, ಅನ್ಯಥಾ ತೊಂದರೆಗೆ ಗುರಿಯಾಗುವಿರಿ.
ಶ್ರೀ ಸೂರ್ಯಸ್ತುತಿ. ಶುಭ ಸಂಖ್ಯೆ-3.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸುಖ-ಸಂತೋಷಗಳು ಚಲಿಸುವ ಮೋಡಗಳಂತೆ ಸ್ಥಿರವಲ್ಲ. ಎಲ್ಲವನ್ನೂ ಸಾತ್ವಿಕವಾಗಿ ಸ್ವೀಕರಿಸಿದರೆ ಚಿತ್ತಕ್ಷೋಭೆಯಿಂದ ಬಿಡುಗಡೆ ಮಾಡುವ ಮುಖ್ಯ ಕೆಲಸ ಕಾರ್ಯಗಳಲ್ಲಿ ಆರಂಭದಲ್ಲಿ ಅಡ್ಡಿ ಆತಂಕಗಳು ಉಂಟಾದರೂ ದಡ ಸೇರುವುದು. ಇದಕ್ಕೆ ಆಪ್ತೇಷ್ಟರ ಸಹಾಯಹಸ್ತ ದೊರೆಯಲಿದೆ. ರಾಹು-ಕೇತುಗಳು ಅಶುಭರಿದ್ದು ನೆರೆಹೊರೆಯಲ್ಲಿ ಕಲಹಕ್ಕೆ ಆಸ್ಪದ ಕೊಡದಿರಿ. ವಿಕೋಪಕ್ಕೆ ಹೋದೀತು.
ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ವಾರದಾರಂಭಕ್ಕೆ ಸಜ್ಜನರ ಸಹವಾಸ ದಾನ-ಧರ್ಮಾಸಕ್ತಿ, ಆಧ್ಯಾತ್ಮ ಜ್ಞಾನ ಪ್ರಾಪ್ತಿ. ಸ್ಥಗಿತಗೊಂಡಿದ್ದ ಕೆಲಸ ಕಾರ್ಯಗಳು ಪ್ರಗತಿಯ ಹಾದಿಯಲ್ಲಿ ಸಾಗುತ್ತವೆ. ಜವಳಿ ಹಾಗೂ ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಹೇರಳ ಧನಲಾಭ, ವಾರಮಧ್ಯೆ ಉತ್ತಮ ಭೋಜನ, ಶಯನ ಸುಖಗಳು, ಶ್ರೀಮತಿ ಸಹಕಾರದಿಂದ ಆಸ್ತಿ ಹೊಂದುವ ವಿಚಾರದಲ್ಲಿ ಮುನ್ನಡೆ. ಮನೆ ಸೇವಕರ ಬಗ್ಗೆ ಎಚ್ಚರಿಕೆ ಇರಲಿ.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-7.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

ಸಪ್ತಾಹದ ಆದಿಗೆ ಉಚ್ಚ ಚಂದ್ರನಿಂದ ಹೋಟೆಲ್ ಹಾಗೂ ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಧನಲಾಭ. ಸುಖ, ಹರ್ಷ ಪ್ರಾಪ್ತಿ. ಗಣ್ಯ ವ್ಯಕ್ತಿಗಳ ಸಹಾಯಹಸ್ತ ದೊರಕುತ್ತದೆ. ವಿದ್ಯಾರ್ಥಿಗಳಿಗೆ ಮರು ಯತ್ನದಲ್ಲಿ ಯಶಸ್ಸು, ಸ್ವಜನರ ಮೋಹಕ್ಕೆ ಬಿದ್ದರೆ ಶೋಕಕ್ಕೆ ಕಾರಣವಾಗಬಹುದು. ಪುತ್ರ-ಪುತ್ರಿಯರು ದುಃಖಕ್ಕೆ ಕಾರಣರಾಗುವರು. ಮನಸ್ಸಿನ ಭಾರ ಕಡಿಮೆಯಾಗಲು ಕುಟುಂಬ ಸಮೇತ ಪುಣ್ಯ ಕ್ಷೇತ್ರಕ್ಕೆ ಭೇಟಿ ನೀಡಿ.
ಶ್ರೀ ಲಕ್ಷ್ಮೀನೃಸಿಂಹ ಕರಾವಲಂಬನ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಈ ವಾರ ಮಹತ್ತರವಾದ ಯೋಜನೆಗಳಿಗೆ ಪ್ರಯತ್ನಿಸಿದರೆ ಸಫಲರಾಗುವಿರಿ. ನಿಮ್ಮ ರಾಶ್ಯಾಧಿಪತಿ ಪಂಚಮದಲ್ಲಿದ್ದು ನಿಮ್ಮ ಕೈ ಹಿಡಿಯಲಿದ್ದಾರೆ. ಗೃಹದಲ್ಲಿ ಮಂಗಳ ಕಾರ್ಯಗಳಿಗೆ ನಾಂದಿಯಾಗಲಿದೆ. ಕುಟುಂಬದಲ್ಲಿ 'ಒಗ್ಗಟ್ಟು ಇದ್ದರೆ ಒಬ್ಬಟ್ಟು' ಪರಸ್ಪರ ಸೌಹಾರ್ದತೆ ಇರಲಿ. ನಿಮ್ಮ ಪ್ರಬುದ್ಧ ನಡೆಯಿಂದ ಆಸ್ತಿ ವಿಭಾಗ ವಿಚಾರಗಳು ಸುಖಾಂತ್ಯವಾಗುವುದು. ಹಳೆಯ ಅಸ್ವಸ್ಥತೆಯಿಂದ ಬಿಡುಗಡೆ.
ಶ್ರೀ ನಂಜುಂಡೇಶ್ವರ ಅರ್ಚನೆ. ಶುಭ ಸಂಖ್ಯೆ-6.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದಾರಂಭಕ್ಕೆ ಧನ-ಧಾನ ಲಾಭ, ಮನಸ್ಸಿಗೆ ಹರ್ಷ ನೀಡುವ ಪ್ರಸಂಗಗಳು. ಸ್ತ್ರೀಯರು ಶಾಪಿಂಗ್‌ಗಾಗಿ ಹೆಚ್ಚಿನ ಹಣ ವಿನಿಯೋಗಿಸುವರು. ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ. ವಾರಮಧ್ಯೆ ಆಯಾಸಕರ ಪ್ರಯಾಣಗಳು. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗವಾದೀತು. ಆರೋಗ್ಯದ ಕಡೆ ನಿಗಾ ವಹಿಸಿ, ನಿಶಕ್ತಿಯಿಂದ ದೇಹಕ್ಕೆ ಹಿತವಿರದು. ಆತುರದ ಡ್ರೈವಿಂಗ್ ಮಾರಕವಾಗುವುದು. ಸಾವಧಾನವಾಗಿರಿ.
ಶ್ರೀ ಹರಿನಾಮ ಸ್ಮರಣೆ. ಶುಭ ಸಂಖ್ಯೆ-2.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಕಲಿಯುಗ ದಂಡಾಧಿಕಾರಿಯಾದ ಶನಿದೇವ ನಿಮ್ಮ ರಾಶಿಯಲ್ಲೇ ಸ್ಥಿತನಿದ್ದಾನೆ. ಕಾರಣ ಮನೆಯ ಆಂತರಿಕ ಕಲಹಗಳು, ಅಪಾರ್ಥಗಳು ಬೀದಿಗೆ ಬಾರದಿರಲಿ. ಗುರು-ಹಿರಿಯರ ಭೇಟಿ ಮಾಡಿ. ನಿಮ್ಮ ಸಮಸ್ಯೆಗೆ ಪರಿಹಾರ ದೊರಕುತ್ತದೆ. ಮನಸ್ಸಿಗೆ ನೆಮ್ಮದಿ ನೀಡುವ ಮಾರ್ಗವೊಂದು ಗೋಚರಿಸುತ್ತದೆ. ವಾರದ ಕಡೆಗೆ ಶುಭ ಚಂದ್ರನಿಂದ ಆರ್ಥಿಕ ಸಬಲತೆ ಸೇರಿದಂತೆ ಪ್ರಮುಖ ಸಾಮಾಜಿಕ ವಿಚಾರಗಳು ನಿಮ್ಮ ಪರವಾಗಿ ಇರುವುದು. ಶ್ರೀ ಸುದರ್ಶನ ಮಂತ್ರ ಜಪಿಸಿ. ಶುಭ ಸಂಖ್ಯೆ-8.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಶುಭ ಫಲ ಹಾಗೂ ಶುಭ ಫಲವನ್ನು ನಿರೀಕ್ಷಿಸಬಹುದು. ಇಷ್ಟಾರ್ಥಸಿದ್ಧಿಯೂ, ಬಂಧು ಬಾಂಧವರ ಮಿಲನವೂ ನಿಮ್ಮನ್ನು ಪುಳಕಿತಗೊಳಿಸಬಹುದು. ಹಲವರಿಗೆ ಅನಾರೋಗ್ಯ ಹಾಗೂ ಆಸ್ಪತ್ರೆಯಿಂದ ಬಿಡುಗಡೆ ಆದೀತು. ಸರ್ಕಾರಿ ಕೆಲಸ ಕಾರ್ಯಗಳು ನಿಮ್ಮ ನಿಮ್ಮ ಮನೋಭಿಲಾಷೆಯಂತೆ ನಡೆದು ಸಂತಸ. ಮನೆಯಲ್ಲಿ ಮಂಗಳ ಕಾರ್ಯಗಳ ನಡೆದೀತು. ಜಯಾಪಜಯಗಳನ್ನು ಸಮನಾಗಿ ಸ್ವೀಕರಿಸಿ. ಶ್ರೀ ಶಿರಡಿಸಾಯಿ ದರ್ಶನ. ಶುಭ ಸಂಖ್ಯೆ-5.

ಮಕ್ಕಳ ಚಿತ್ರಕಥೆ

'ರಂಗ ದಂಗಾದ...!'

-ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ಒಂದನೇ ಪುಟದಿಂದ

ಹಾರ ತುರಾಯಿ ಬೇಡವೇ ಬೇಡ

ಇನ್ನು ಮುಂದೆ ಹಾರ ತುರಾಯಿಗಳ ಬದಲಾಗಿ ಪುಸ್ತಕ ನೀಡುವಂತೆ ಮನವಿ ಮಾಡಿದ್ದಾರೆ. ಈ ಕುರಿತಾಗಿ ಟ್ವೀಟ್ ಮಾಡಿರುವ ಸಿಎಂ ಸಿದ್ದರಾಮಯ್ಯ "ನಾಳೆಯಿಂದ ಸಾರ್ವ ಜನಿಕರಿಂದ ಗೌರವ-ಸನ್ಮಾನದ ರೂಪದಲ್ಲಿ ಹಾರ-ತುರಾಯಿ, ಶಾಲು-ಶಲ್ಯಗಳನ್ನು ಸ್ವೀಕರಿಸದೆ ಇರಲು ನಿರ್ಧರಿಸಿದ್ದೇನೆ. ಇದು ನನ್ನ ಮನೆ-ಕಚೇರಿ ಮತ್ತು ಸಾರ್ವಜನಿಕ ಸಮಾರಂಭಗಳಿಗೂ ಅನ್ವಯ. ಪ್ರೀತಿ-ಗೌರವವನ್ನು ಕಾಣಿಕೆಗಳ ಮೂಲಕವೇ ಸಲ್ಲಿಸಬೇಕೆನ್ನುವವರು ಪುಸ್ತಕಗಳನ್ನು ನೀಡಬಹುದು. ನಿಮ್ಮೆಲ್ಲರ ಪ್ರೀತಿ-ಅಭಿಮಾನ ಸದಾ ನನ್ನ ಮೇಲಿರಲಿ" ಎಂದು ಅವರು ಮನವಿ ಮಾಡಿದ್ದಾರೆ.

ಇದಕ್ಕೂ ಮೊದಲು ಅವರು ಜೀರೋ ಟ್ರಾಫಿಕ್ ಕುರಿತಾಗಿ ಟ್ವೀಟ್ ಮಾಡಿ "ನನ್ನ ವಾಹನ ಸಂಚಾರಕ್ಕೆ ನೀಡಲಾಗಿರುವ ಜೀರೋ ಟ್ರಾಫಿಕ್ ಸೌಲಭ್ಯವನ್ನು ಹಿಂದಕ್ಕೆ ಪಡೆಯುವಂತೆ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ತಿಳಿಸಿದ್ದೇನೆ. ಜೀರೊ ಟ್ರಾಫಿಕ್‌ನಿಂದಾಗಿ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದನ್ನು ಕಂಡು ಈ ನಿರ್ಧಾರ ಕೈಗೊಂಡಿದ್ದೇನೆ" ಎಂದು ಟ್ವೀಟ್ ಮಾಡಿದ್ದರು.

ಮಹಿಳಾ ಉದ್ಯೋಗಿ ದುರಂತ ಸಾವು

ಮಹಿಳೆ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ. ಆಸ್ಪತ್ರೆ ಸಿಬ್ಬಂದಿ ನಿರ್ಲಕ್ಷ್ಯ ತೋರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲಾಗುವುದು ಎಂದು ಹೇಳಿದ್ದಾರೆ. ಮೃತ ಮಹಿಳೆ ಕುಟುಂಬದವರು ಬೆಂಗಳೂರು ನೋಡಲು ವಿಜಯವಾಡದಿಂದ ಆಗಮಿಸಿದ್ದರು. ಅವರನ್ನು ಟ್ಯಾಕ್ಸಿಯಲ್ಲಿ ಎಲ್ಲೆಡೆ ಭಾನುರೇಖಾ ಕರೆದೊಯ್ದಿದ್ದರು. ಅವರೇ ದುರಂತ ಸಾವಿಗೀಡಾಗಿರುವುದರಿಂದ ಅವರ ಕುಟುಂಬ ದುಃಖದ ಕಡಲಲ್ಲಿ ಮುಳುಗಿದೆ. ಈ ಮಧ್ಯೆ ನಗರದಲ್ಲಿ ಧಾರಾಕಾರ ಮಹಿಳೆಯ ಪರಿಣಾಮ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಮನೆಗಳಿಗೆ ನೀರು ನುಗ್ಗಿದ್ದು, ವಾಹನಗಳು ಮುಳುಗಡೆಯಾಗಿ ಲಕ್ಷಾಂತರ ರೂ. ನಷ್ಟ ಉಂಟಾಗಿದೆ. ಇನ್ನು ಮಳೆ ಅವಾಂತರಕ್ಕೆ ಚಿಕ್ಕಮಗಳೂರಿನ ಮೂಡಿಗೆರೆ ಚಿಕ್ಕಳ್ಳ ಬಳಿ ಓರ್ವ ಬೈಕ್ ಸವಾರ ಬೃಹತ್ ಮರ ಬಿದ್ದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೂವರು ಬಲಿ

ನಂದೀಶ್, ಗ್ರಾಮಲೆಕ್ಕಿಗ ಸುಮಂತ್ ಮತ್ತಿತರರಿದ್ದರು. ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಬಳಿಯ ಆವರ್ತಿ ಗ್ರಾಮದ ಲೋಕೇಶ್(55) ಭಾನುವಾರ ಸಂಜೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಬಿರುಸಿನ ಮಳೆಯಾಗಿದ್ದರಿಂದ ಮರದ ಕೆಳಗೆ ನಿಂತಿದ್ದರು. ಈ ಸಿಡಿಲು ಬಡಿದು ಲೋಕೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ಬೈಲುಕುಪ್ಪೆ ಪೊಲೀಸರು, ಕುಶಾಲನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ವಿದ್ಯುತ್ ತಂತಿ ತುಳಿದು ಸಾವು: ಗಾಳಿ-ಮಳೆಯಿಂದಾಗಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಸ್ವಾಮಿ(18) ಎಂಬ ಯುವಕ ಸಾವನ್ನಪ್ಪಿದ್ದಾನೆ. ಬೆಟ್ಟದಪುರ ಪೊಲೀಸ್ ಠಾಣೆ ವ್ಯಾಪ್ತಿಯ ಕುಡಕೂರು ಬಳಿ ಭಾನುವಾರ ಬೆಳಗ್ಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಘಟನೆಯಲ್ಲಿ ದೊಡ್ಡಕೊಪ್ಪಲು ಹರೀಶ್ ಹಾಗೂ ಸಂಜಯ್ ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಮೈಸೂರಿನ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಸೆಸ್ಕ್ ಬೆಟ್ಟದಪುರದ ಉಪವಿಭಾಗದ ಎಇಇ ಪ್ರಶಾಂತ್ ಕುಮಾರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಘಟನೆ ಸಂಬಂಧ ಬೆಟ್ಟದಪುರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪ್ರಕಾಶ ಎಂ.ಎತ್ತಿನ ಮಣಿ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕುರುಬರ ಸಂಘದ ತಾಲೂಕು ಪ್ರಧಾನ ಕಾರ್ಯದರ್ಶಿ ಕದರೆಗೌಡನ ಕೊಪ್ಪದ ಸುನಿಲ್, ಮೃತ ಯುವಕನ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಮನೆಗಳಿಗೆ ಹಾನಿ: ಹುಣಸೂರು ತಾಲೂಕಿನ ಮರೂರು, ಗಾವಡಗೆರೆ, ಮರೂರು ಕಾವಲ್, ಕಟ್ಟೆಮಳಲವಾಡಿ ಭಾಗದಲ್ಲಿ ಮರಗಳು ಹಾಗೂ 20 ಹೆಚ್ಚು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಧರ್ಮಾಪುರ ಸಮೀಪದ ಸುಭಾಷ್ ಕಾಲೊನಿ, ವಿನೋಬ ಕಾಲೊನಿ ಹೊನ್ನಿಕುಪ್ಪೆ ಗ್ರಾಮದಲ್ಲಿ ವಿದ್ಯುತ್ ಕಂಬ ತುಂಡಾಗಿ ಬಿದ್ದಿದ್ದು, ಸುಭಾಷ್ ಕಾಲೋನಿಯಲ್ಲಿ ಮನೆಯೊಂದರ ಛಾವಣಿ ಹಾರಿಹೋದ ಪರಿಣಾಮ ಮನೆಯೊಳಗೆ ನೀರು ತುಂಬಿದೆ. ಹೊನ್ನಿಕುಪ್ಪೆ ಗ್ರಾಮದಲ್ಲಿ ತೆಂಗಿನಮರ ಬಿದ್ದು ಮನೆಗೆ ಹಾನಿಯಾಗಿದೆ. ಹೆಚ್.ಡಿ.ಕೋಟೆ ಪಟ್ಟಣದ ವಿಶ್ವನಾಥಯ್ಯ ಕಾಲೋನಿಯಲ್ಲಿ ಹಲವು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಬೃಹತ್ ಮರ ಬಿದ್ದು ಕಾರು ಜಖಂಗೊಂಡಿದೆ. ಮಣಿಕಂಠ ಎಂಬುವರ ಮನೆ ಮೇಲೆ ಮರ ಬಿದ್ದಿದ್ದು ಅದೃಷ್ಟವಶಾತ್ ಮನೆಯಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೈಸೂರು ನಗರದಲ್ಲಿ ಮಳೆ ಅಬ್ಬರ: ಮೈಸೂರು ನಗರದೆಲ್ಲೆಡೆ ಭಾನುವಾರ ಭಾರೀ ಗಾಳಿ-ಮಳೆಯಿಂದಾಗಿ ಹಲವೆಡೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದ್ದು, ವಿದ್ಯುತ್ ತಂತಿ ತಗುಲಿ ಜಾನುವಾರುವೊಂದು ಮೃತಪಟ್ಟಿದೆ. ಬೆಳಗ್ಗೆಯಿಂದ ಬಿಡುವು ನೀಡಿದ್ದ ಮಳೆ ಸಂಜೆ 4 ಗಂಟೆಗೆ ನಗರದ ಕೆಲವೆಡೆ ಗಂಟೆಗೂ ಹೆಚ್ಚು ಕಾಲ ಜೋರಾಗಿ ಸುರಿಯಿತು. ನಂತರ ಕೆಲ ಸಮಯ ಬಿಡುವು ಕೊಟ್ಟ ಮಳೆ 6 ಗಂಟೆಯಿಂದ 7.30ರವರೆಗೂ ಅಬ್ಬರಿಸಿತು. ಭಾರೀ ಗಾಳಿಯಿಂದಾಗಿ ಜಿಲ್ಲಾ ನ್ಯಾಯಾಲಯದ ಎದುರು ಚಾಮರಾಜಪುರಂನ ವಿಷ್ಣುವರ್ಧನ್ ರಸ್ತೆಯಲ್ಲಿ ಬೃಹತ್ ಮರವೊಂದು ಬುಡ ಸಮೇತ ನೆಲಕ್ಕುರುಳಿದೆ. ವಿದ್ಯುತ್ ಕಂಬದ ಮೇಲೆ ಮರ ಬಿದ್ದಿರುವುದರಿಂದ ವಿದ್ಯುತ್ ಕಂಬವೂ



ತುಂಡಾಗಿದೆ. ಹಾಗೆಯೇ ಹುಣಸೂರು ಮುಖ್ಯ ರಸ್ತೆಯ ಕಲಾಮಂದಿರದ ಎದುರು, ಜೆಎಲ್‌ಬಿ ರಸ್ತೆಯಲ್ಲಿನ ಮುಡಾ ಎದುರು, ಬೋಗಾದಿ 2ನೇ ಹಂತ, ವಿಜಯನಗರ 2ನೇ ಹಂತ, ಆಲನಹಳ್ಳಿ, ಹಳೇ ಆರ್‌ಟಿಓ ತ್ರಿವೇಣಿ ವೃತ್ತ, ವಿದ್ಯಾರಣ್ಯಪುರಂನಲ್ಲಿರುವ ಸೆಂಟ್‌ಥಾಮಸ್ ಸ್ಕೂಲ್ ಹತ್ತಿರ, ಸರಸ್ವತಿಪುರಂನ 5ನೇ ಮುಖ್ಯ ರಸ್ತೆಯಲ್ಲಿ ಮರಗಳು ಧರೆಗುರುಳಿದ್ದರೆ, ಎಂಜಿ ರಸ್ತೆಯಲ್ಲಿರುವ ಕೆ.ಆರ್.ಪೊಲೀಸ್ ಠಾಣೆ ಕಟ್ಟಡದ ಮೇಲೆಯೇ ಮರದ ಕೊಂಬೆಯೊಂದು ಮುರಿದು ಬಿದ್ದಿದೆ.

ಹಲವೆಡೆ ವಿದ್ಯುತ್ ಕಂಬ ನೆಲಸಮ: ಮರಗಳ ಜೊತೆಗೆ ಹಲವೆಡೆ ವಿದ್ಯುತ್ ಕಂಬಗಳು ತುಂಡಾಗಿದ್ದು, ಕಗ್ಗತ್ತಲು ಆವರಿಸಿದೆ. ಮೈಸೂರು ನಗರ ಸೇರಿದಂತೆ ಜಿಲ್ಲೆಯ ವರುಣ, ಮೆಲ್ಲಹಳ್ಳಿ, ರಮ್ಮನಹಳ್ಳಿ, ಹಂಚ್ಯಾ, ಮೇಗಳಾಪುರ ಮತ್ತಿತರ ಗ್ರಾಮಗಳು ಹತ್ತಾರು ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ವಿದ್ಯುತ್ ಕಂಬಗಳು ತುಂಡಾಗಿ ಬಿದ್ದ ಪರಿಣಾಮ ಗ್ರಾಮಗಳಲ್ಲಿ ಕತ್ತಲೂ ಆವರಿಸಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

ಅಪಾಯಕಾರಿ ಕಟೌಟ್: ನಗರದ ರಾಮಸ್ವಾಮಿ ವೃತ್ತದಲ್ಲಿನ ಫುಟ್‌ಪಾತ್‌ನಲ್ಲಿ ಕಬ್ಬಿಣದ ಪೈಪ್‌ಗಳನ್ನು ಬಳಸಿ ನಿಲ್ಲಿಸಿರುವ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಬೃಹತ್ ಕಟೌಟ್ ಮುರಿದು ಬಿದ್ದಿದ್ದು, ಪಾದಚಾರಿಗಳಲ್ಲಿ ಆತಂಕ ಸೃಷ್ಟಿಸಿದೆ. ಗಾಳಿಯ ರಭಸಕ್ಕೆ ಬಾರಿ ಎತ್ತರದ ಕಟೌಟ್ ಅರ್ಧಕ್ಕೆ ತುಂಡಾಗಿ, ಪಕದಲ್ಲಿಯೇ ಹಾದು ಹೋಗಿರುವ ಕೇಬಲ್ ವೈರ್‌ಗಳ ಕಂಬದ ಮೇಲೆ ಬಿದ್ದಿದೆ. ನೆಲಕ್ಕೆ ಬಿದ್ದಿದ್ದರೆ ಅನಾಹುತವೇ ಸಂಭವಿಸುತ್ತಿತ್ತು ಎಂದು ಕೆಲ ಪಾದಚಾರಿಗಳು ಆತಂಕ ವ್ಯಕ್ತಪಡಿದರಲ್ಲದೆ ಕೂಡಲೇ ತೆರವುಗೊಳಿಸದಿದ್ದರೆ ಪಾದಚಾರಿಗಳ ತಲೆ ಮೇಲೆ ಬೀಳುವ ಸಾಧ್ಯತೆ ಹೆಚ್ಚಾಗಿದೆ. ಆದ್ದರಿಂದ ಕಟೌಟ್ ಜೋತು ಬಿದ್ದಿರುವ ಕೆಲಭಾಗದಲ್ಲಿ ಯಾರು ಸಂಚರಿಸಬೇಡಿ ಎಂದು ಎಚ್ಚರಿಸಿದರು.

ಸವಾರರು ಹೈರಾಣ: ಬಾರೀ ಗಾಳಿ-ಮಳೆಯಿಂದಾಗಿ ವಾಹನ ಸವಾರರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಪರದಾಡುವಂತಾಯಿತು. ಅದರಲ್ಲೂ ದ್ವಿಚಕ್ರ ವಾಹನ ಸವಾರರು ವಾಹನ ಚಾಲಿಸಲು ಸಾಧ್ಯವಾಗದೆ ಅಲ್ಲಲ್ಲಿ ನಿಂತು ಮಳೆ ಕಡಿಮೆಯಾದಂತೆ ಮುಂದೆ ಸಾಗಿದರು. ಹಾಗೆಯೇ ಪ್ರಮುಖ ರಸ್ತೆ, ಚರಂಡಿಗಳು ಮಳೆ ನೀರಿನಿಂದ ತುಂಬಿ ಹರಿದು ಪಾದಚಾರಿಗಳು ಪರದಾಡುವಂತಾಯಿತು. ಹಾಗೆಯೇ ಕೆ.ಆರ್.ನಗರ, ನಂಜನಗೂಡು, ತಿ.ನರಸೀಪುರ ತಾಲೂಕುಗಳ ಹಲವೆಡೆ ಭಾರೀ ಮಳೆಯಾಗಿದ್ದು, ಹಲವು ವಿದ್ಯುತ್ ಕಂಬ ಹಾಗೂ ಮರಗಳು ಬಿದ್ದಿವೆ. ಅಪಾರ ಪ್ರಮಾಣದ ಬೆಳೆ ಹಾನಿಯಾಗಿ ರೈತರು ಸಂಕಷ್ಟಕ್ಕೀಡಾಗಿದ್ದಾರೆ.

ಇನ್ನೂ 3 ದಿನ ಮಳೆ ಸಾಧ್ಯತೆ

ಮೈಸೂರು, ಮೇ 21(ಪಿಎಂ)- ಮೈಸೂರು ನಗರದಲ್ಲಿ ಭಾನುವಾರ ಮಧ್ಯಾಹ್ನ ಆಗಾಗ್ಗೆ ಸಾಧಾರಣಕ್ಕೂ ಹೆಚ್ಚು ಮಳೆಯಾಗಿದ್ದು, ಅಂತೆಯೇ ಜಿಲ್ಲೆಯ ವಿವಿಧ ಭಾಗಗಳಲ್ಲೂ ಇಂದು ಮಳೆಯಾಗಿದೆ. ಮೈಸೂರು ಜಿಲ್ಲೆಯಲ್ಲಿ ಇದೇ ರೀತಿ ಇನ್ನು 3 ದಿನಗಳ ಕಾಲ ಮಳೆಯಾಗುವ ಮುನ್ಸೂಚನೆ ಇದೆ. ಮೈಸೂರು ನಗರದಲ್ಲಿ ಇಂದು ಮಧ್ಯಾಹ್ನ ಹಾಗೂ ಸಂಜೆ ವೇಳೆ ಸೇರಿದಂತೆ 2 ಬಾರಿ ಮಳೆಯಾಗಿದ್ದು, ಅಂದಾಜು 15 ಮಿ.ಮೀ. ಮಳೆಯಾಗಿದೆ. ಅದೇ ರೀತಿಯಲ್ಲಿ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕು ವ್ಯಾಪ್ತಿಯಲ್ಲೂ ಇಂದು ಅಲ್ಲಲ್ಲಿ ಮಳೆಯಾಗಿದೆ. ಹೆಚ್‌ಡಿ ಕೋಟೆ ತಾಲೂಕಿನ ಎನ್.ಬೇಗೂರು ಸುತ್ತಮುತ್ತ 67 ಮಿ.ಮೀ. ಮಳೆಯಾಗಿದೆ. ಅಂತೆಯೇ ಹುಣಸೂರು ತಾಲೂಕಿನ ಕೆಲಭಾಗಗಳಲ್ಲಿ 35 ಮಿ.ಮೀ., ಕೆಆರ್ ನಗರ ತಾಲೂಕು ಚನ್ನಂಗೆರೆ ಸುತ್ತಮುತ್ತ 20 ಮಿ.ಮೀ., ಮೈಸೂರು ತಾಲೂಕು ಹಾರೋಹಳ್ಳಿ ಸುತ್ತಮುತ್ತ 45 ಮಿ.ಮೀ., ನಂಜನಗೂಡು ತಾಲೂಕಿನ ದಾಸನೂರು ಸುತ್ತಮುತ್ತ 16 ಮಿ.ಮೀ., ಪಿರಿಯಾಪಟ್ಟಣ ತಾಲೂಕು ಕೊಪ್ಪ ಸುತ್ತಮುತ್ತ 15 ಮಿ.ಮೀ. ಹಾಗೂ ಟಿ.ನರಸೀಪುರ ತಾಲೂಕಿನ ಉಕ್ಕಲಗೆರೆ ಸುತ್ತಮುತ್ತ 21 ಮಿ.ಮೀ. ಮಳೆಯು ಭಾನುವಾರ ರಾತ್ರಿ 7ರವರೆಗೆ ಆಗಿದೆ ಎಂದು 'ವರುಣ ಮಿತ್ರ' ಸಹಾಯವಾಣಿ (ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಮಾನಿಟರಿಂಗ್ ಸೆಲ್) 'ಮೈಸೂರು ಮಿತ್ರ'ನಿಗೆ ತಿಳಿಸಿತು.

ಮುಂಗಾರು ಮಳೆ: ಭಾನುವಾರವೂ ಸೇರಿದಂತೆ ಕಳೆದ 2 ದಿನಗಳಿಂದ ಮೈಸೂರು ಜಿಲ್ಲೆಯಲ್ಲಿ ತಪಾಮಾನ ಹೆಚ್ಚಳವಿತ್ತು. ಹಾಗಾಗಿ ತಾಪಮಾನ 40 ಡಿಗ್ರಿಗೆ ಹೋಗುತ್ತಿದ್ದಂತೆ ಮಳೆಯಾಗಿ 35ರಿಂದ 36 ಡಿಗ್ರಿಗೆ ತಾಪಮಾನ ಹಿಂತಿರುಗುವ ಮೂಲಕ ವಾತಾವರಣ ತಂಪುಗೊಳಿಸಿದೆ. ನೆರೆ ಜಿಲ್ಲೆಗಳಲ್ಲಿಯೂ ಇದೇ ರೀತಿಯಾಗಿದೆ. ಈ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿತ್ತು. ಜೂನ್ ಮೊದಲ ವಾರ ಇಲ್ಲವೇ 2ನೇ ವಾರದಲ್ಲಿ ರಾಜ್ಯಕ್ಕೆ ಮುಂಗಾರು ಮಳೆ ಪ್ರವೇಶ ಪಡೆಯಲಿದೆ ಎಂದರು.

ಎನ್‌ಐಇ ಕಾಲೇಜಿನಲ್ಲಿ ನೆರೆದವರ ಕಣ್ಮನ ಸೂರೆಗೊಂಡ ಶ್ವಾನ ಪ್ರದರ್ಶನ









ಮೈಸೂರು,ಮೇ 21(ಎಂಟಿವೈ)- ಮೈಸೂರಿನ ಎನ್‌ಐಇ ಕಾಲೇಜಿನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ ವಿವಿಧ ತಳಿಯ ಶ್ವಾನಗಳು ತಮ್ಮ ವಯ್ಯಾರದಿಂದ ಸಭಿಕರ ಕಣ್ಮನ ಸೆಳೆದವು.

ಕಾಲೇಜಿನ ವಿದ್ಯಾರ್ಥಿ ಸಂಘವು ಮೈಸೂರು ಕೆನೈನ್ ಕ್ಲಬ್ ನೆರವಿನೊಂದಿಗೆ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ 22 ತಳಿಯ 75 ಶ್ವಾನಗಳು ಪಾಲ್ಗೊಂಡಿದ್ದವು. ಮೈಸೂರು ಕೆನೈನ್ ಕ್ಲಬ್‌ನಲ್ಲಿ ನೋಂದಣಿ ಮಾಡಿಕೊಂಡು ಮೈಕ್ರೋ ಚಿಪ್ ಅಳವಡಿಸಲಾಗಿರುವ ಶ್ವಾನಗಳನ್ನು ಪ್ರದರ್ಶನಕ್ಕೆ ಆಹ್ವಾನಿಸಲಾಗಿತ್ತು. ಕಾಲೇಜಿನ ವಜ್ರಮಹೋತ್ಸವ ಭವನದಲ್ಲಿ ನಡೆದ ಶ್ವಾನ ಪ್ರದರ್ಶನ ವಿದ್ಯಾರ್ಥಿ ಸಮೂಹ ಹಾಗೂ ಶ್ವಾನಪ್ರಿಯರನ್ನು ಆಕರ್ಷಿಸಿತು.

ತಳಿಗೆ ಅನುಗುಣವಾಗಿ ಪ್ರತ್ಯೇಕ ವಿಭಾಗದಲ್ಲಿ ನಡೆದ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ ಮುದ್ದಾದ ಶ್ವಾನಗಳು, ಮಾಲೀಕರು ನೀಡಿದ ಆಜ್ಞಾನುಸಾರ ತಮ್ಮ ಚಾಕಚಕ್ಯತೆ ಪ್ರದರ್ಶಿಸಿದವು. ಶ್ವಾನಗಳ ನಡಿಗೆ, ಅವುಗಳ ಸುಕೋಮಲ ಕೂದಲು, ಆರೋಗ್ಯಕರ ದೈಹಿಕ ಸದೃಢತೆ ಸೇರಿದಂತೆ ವಿವಿಧ ಆಯಾಮದಲ್ಲಿ ಶ್ವಾನಗಳನ್ನು ಪರೀಕ್ಷಿಸಲಾಯಿತು. ಅಂತಿಮವಾಗಿ ಹೆಚ್ಚು ಅಂಕ ಪಡೆದ ವಿವಿಧ ತಳಿಯ ಒಂದೊಂದು ಶ್ವಾನಕ್ಕೆ ಬಹುಮಾನ ನೀಡಲಾಯಿತು.


ಪ್ರದರ್ಶನದಲ್ಲಿ ಜರ್ಮನ್ ಶೆಫರ್ಡ್, ಗೋಲ್ಡನ್ ರಿಟ್ರೀವರ್, ಶಿಟ್ಜು, ಪಗ್, ಸೇಂಟ್ ಬರ್ನಾಡ್, ಗ್ರೇಟ್ ಡೇನ್, ಸೈಬೀರಿಯನ್ ಹಸ್ಕಿ, ಮುದೋಳ್ ಸೇರಿದಂತೆ ಇನ್ನಿತರ ತಳಿಯ ಶ್ವಾನಗಳು ಪಾಲ್ಗೊಂಡಿದ್ದವು. ಎಲ್ಲಾ ಶ್ವಾನಗಳು ಚಾಣಾಕ್ಷತನ ಪ್ರದರ್ಶಿಸಿ ಗಮನ ಸೆಳೆದವು. ಸ್ಪರ್ಧೆಗೆ ಪಾಲ್ಗೊಳ್ಳಲು ಒಂದು ಶ್ವಾನಕ್ಕೆ 300 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿತ್ತು. ಆದರೆ, ಶ್ವಾನ ಪ್ರದರ್ಶನ ವೀಕ್ಷಣೆಗೆ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಇದರಿಂದ ಕಾಲೇಜಿನ ವಿದ್ಯಾರ್ಥಿಗಳ ಸಮೂಹದೊಂದಿಗೆ ಶ್ವಾನಪ್ರಿಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ವಾನಗಳನ್ನು ವೀಕ್ಷಿಸಿ ಸಂಭ್ರಮಿಸಿದರು. ಬಹುತೇಕರು ಶ್ವಾನದೊಂದಿಗೆ ಫೋಟೋ ತೆಗೆಸಿಕೊಂಡು ಖುಷಿಪಟ್ಟರು.

ಮೈಸೂರು ಕೆನೈನ್ ಕ್ಲಬ್ ಅಧ್ಯಕ್ಷ ಬಿ.ಪಿ.ಮಂಜುನಾಥ್, ಪಶುಸಂಗೋಪನಾ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಡಾ.ರಾಜಶೇಖರ್, ಅಭಿಷೇಕ್ ಪರಶಿವಮೂರ್ತಿ, ಎನ್‌ಐಇ ಸ್ಟೂಡೆಂಟ್ ಕೌನ್ಸಿಲ್ ಅಧ್ಯಕ್ಷ ದೀಕ್ಷಿತ್ ಗೌಡ, ಜಂಟಿ ಕಾರ್ಯದರ್ಶಿ ಸಾರ್ಥಕ್ ಪಿ.ಗೌಡ, ಪ್ರೇಕ್ಷಿತ, ಸುದೀಪ್ ಕುಮಾರ್, ನೀರಜ್ ಎಂ. ಗೌಡ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಕ್ಕಳನ್ನು 'ರಿಸೀವರ್' ಆಗಿ ಬೆಳೆಸಿ

ಪೋಷಕರಿಗೆ ಆಕಾಶವಾಣಿ ನಿರ್ದೇಶಕ ಉಮೇಶ್ ಸಲಹೆ

ಮೈಸೂರು ಮೇ 21(ಸಿಎನ್)- ಪೋಷಕರು, ಮಕ್ಕಳು ಬೇಸಿಗೆ ರಜಾದಿನಗಳನ್ನು ಅತ್ಯಂತ ಕೌಶಲ್ಯಯುತ ಚಟುವಟಿಕೆ ಮೂಲಕ ಅರ್ಥಪೂರ್ಣವಾಗಿ ಕಳೆಯಲು ಪ್ರೋತ್ಸಾಹಿಸಬೇಕು. ಯೋಗ ಭಂಗಿಗಳ ಮುಖೇನ ಮಕ್ಕಳ ಬುದ್ಧಿಶಕ್ತಿ, ವ್ಯಕ್ತಿ ವಿಕಸನ, ಚುರುಕುತನ ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ. ಹಾಗಾಗಿ ಯೋಗ ಶಿಬಿರಗಳಲ್ಲಿ ಮಕ್ಕಳನ್ನು ತೊಡಗಿಸಬೇಕು ಎಂದು ಆಕಾಶವಾಣಿ ನಿರ್ದೇಶಕ ಎಂ.ಉಮೇಶ್ ಸಲಹೆ ನೀಡಿದರು.



ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿಯಿಂದ ಭಾನುವಾರ ಆಯೋಜಿಸಲಾಗಿದ್ದ 12ನೇ ತಂಡದ ಅಂತರ್‌ದೃಷ್ಟಿ ಮೆದುಳು ಜಾಗೃತಿ ಯೋಗಿಕ್ ಶಿಬಿರದ ಸಮಾರೋಪ ಹಾಗೂ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳು ಬುದ್ಧಿಶಾಲಿಗಳಾಗಿದ್ದರೆ ಪೋಷಕರಿಗೆ ತುಂಬಾ ಸಂತೋಷವಾಗುತ್ತದೆ. ಮಕ್ಕಳ ನಗು ಹಾಗೂ ಕಲಿಕೆಯನ್ನು ನಿರಂತರವಾಗಿ ಕಾಪಾಡಿಕೊಂಡು ಬರುವ ಜವಾಬ್ದಾರಿ ಪೋಷಕರ ಮೇಲಿದೆ. ತಮ್ಮ ಮಕ್ಕಳನ್ನು ಒಂದು ರಿಸೀವರ್ ರೀತಿ ಬೆಳೆಸಬೇಕು. ಯಾವುದೇ ವಿಷಯವಿದ್ದರೂ ಚುರುಕಾಗಿ ಗ್ರಹಿಸುವ ಶಕ್ತಿ ಹೊಂದುವಂತೆ ಅವರಿಗೆ ತರಬೇತಿ ನೀಡಬೇಕು. ಅಂತಹ ಕೌಶಲ್ಯಯುತ ಚಟುವಟಿಗಳು ಯೋಗದಲ್ಲಿ ಅಡಕವಾಗಿವೆ.

ಬೇಸಿಗೆ ಶಿಬಿರಗಳಲ್ಲಿ ಒಂದಿಷ್ಟು ಆಟ-ಪಾಠ, ನಾಟಕಗಳನ್ನು ಮಾತ್ರ ಕಲಿಸುತ್ತಾರೆ. ಆದರೆ ಯೋಗ ಶಿಬಿರಗಳಲ್ಲಿ, ಮಕ್ಕಳಿಗೆ ಸಾಕಷ್ಟು ಉಪಯೋಗವಿದೆ. ಮಕ್ಕಳ ಏಕಾಗ್ರತೆ, ನೆನಪಿನ ಶಕ್ತಿ, ಎಡ ಮತ್ತು ಬಲ ಮೆದುಳಿನ ಸಮತೋಲನ, ಬ್ರೈನ್ ಜಿಮ್, ಯೋಗ ಮತ್ತು ಪ್ರಾಣಾಯಾಮ, ಪಿರಮಿಡ್ ಧ್ಯಾನದಂತಹ ಕ್ರಿಯಾತ್ಮಕ ಯೋಗ ಕಲಿಸಲಿದ್ದಾರೆ. ಹಾಗಾಗಿ ಮಕ್ಕಳನ್ನು ಯೋಗ ಶಿಬಿರಗಳಿಗೆ ಸೇರಿಸುವ ಮೂಲಕ ನಿಮ್ಮ ಮಕ್ಕಳ ಬುದ್ಧಿ ಬೆಳವಣಿಗೆ ನಿಮ್ಮ ಗಮನಕ್ಕೆ ಬರುತ್ತದೆ ಎಂದರು.

ಈ ವೇಳೆ ಅಂತರಾಷ್ಟ್ರೀಯ ಯೋಗ ಶಿರ್ಪುಗಾರರಾದ ಶಿವಪ್ರಕಾಶ್ ಗುರೂಜಿ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಎಂ.ಬಿ.ಶ್ರೀಕಂಠಸ್ವಾಮಿ, ಆಕಾಶವಾಣಿ ನಿರ್ದೇಶಕ ಎಂ.ಉಮೇಶ್, ಲರ್ನರ್ಸ್ ಗ್ಲೋಬಲ್ ಸ್ಕೂಲ್ ಮತ್ತು ಪಿಯು ಕಾಲೇಜು ಸಂಸ್ಥಾಪಕ ಮುರುಳಿ ಮೋಹನ್, ಶಿಬಿರದ ವ್ಯವಸ್ಥಾಪಕಿ ಮಿಥಿಲ ಮಂಜುನಾಥ್ ಮತ್ತಿತರರಿದ್ದರು.

ಗಾಂಧಾರಿ ವಿದ್ಯೆ ಪ್ರದರ್ಶನ:- ತಕ್ಷ ಚಾಣಕ್ಯ ರೇಬಾ(ಬಸವ ಪ್ರತಿಭೆ) ಎಂಬ 8ನೇ ತರಗತಿ ವಿದ್ಯಾರ್ಥಿ, ಏಕಾಗ್ರತೆ ಹಾಗೂ ಗ್ರಹಿಕಾ ಶಕ್ತಿಯಿಂದ ಬಣ್ಣಗಳು, ಪುಸ್ತಕದ ಪುಟಗಳು, ಸಂಖ್ಯೆಗಳು, ವ್ಯಕ್ತಿಯ ಚಹರೆ, ಧರಿಸಿರುವ ಬಟ್ಟೆ, ವಸ್ತುಗಳನ್ನು ಕಣ್ಣಿಗೆ ಕಪ್ಪುಪಟ್ಟಿ ಧರಿಸಿಕೊಂಡೇ ತಡವರಿಸದೆ ಹೇಳಿದ ರೀತಿ ಎಲ್ಲರನ್ನು ದಿಗ್ಭ್ರಮೆಗೊಳಿಸಿತು. ಅದಲ್ಲದೇ ಈ ಬಾಲಕ 2022ನೇ ಸಾಲಿನ ಅಂತ ರಾಷ್ಟ್ರೀಯ ಬಸವ ಜಯಂತಿಯಲ್ಲಿ ಬಸವಣ್ಣನ ವಚನ ಹಾಗೂ ಅದರ ತಾತ್ಪರ್ಯ ತಿಳಿಸಿದ ಕಾರ್ಯಕ್ರಮ, ಒಂದೇ ಬಾರಿಗೆ 57 ದೇಶದಲ್ಲಿ ಪ್ರಸಾರವಾಗಿ ದಾಖಲೆ ನಿರ್ಮಿಸಿದ್ದ. ಈತನ ಪ್ರತಿಭೆಗೆ ರಾಜ್ಯಮಟ್ಟದ ಚಿಗುರು ರತ್ನ ಪ್ರಶಸ್ತಿ ಹಾಗೂ ಬಾಲಶ್ರೀ ಪ್ರಶಸ್ತಿ ಕೂಡ ಲಭಿಸಿದೆ.

ಇಂದಿರಾ ಕ್ಯಾಂಟೀನ್ ಮತ್ತೆ ಆರಂಭ: ಸಿಎಂ ಸಿದ್ದರಾಮಯ್ಯ ಘೋಷಣೆ

ಬೆಂಗಳೂರು, ಮೇ 21- ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನವೇ ತಾವು ಚುನಾವಣಾ ಪೂರ್ವದಲ್ಲಿ ನೀಡಿದ್ದ ಐದೂ ಗ್ಯಾರಂಟಿಗಳ ಕುರಿತಂತೆ ಆದೇಶ ಹೊರಡಿಸಿದ ಸಿದ್ದರಾಮಯ್ಯ, ಇಂದು ಇಂದಿರಾ ಕ್ಯಾಂಟೀನ್



ಮತ್ತೆ ಆರಂಭಿಸುವುದಾಗಿ ಅವರು ಭರವಸೆ ನೀಡಿದ್ದಾರೆ. ನಗರ-ಪಟ್ಟಣಗಳಲ್ಲಿರುವ ಮತ್ತು ಕಾರ್ಯನಿಮಿತ್ತ ನಗರಗಳಿಗೆ ಬರುವ ಬಡವರ ಹಸಿವು ತಣಿಸುವ ಸದುದ್ದೇಶದಿಂದ ನಮ್ಮ ಸರ್ಕಾರ ಪ್ರಾರಂಭಿಸಿದ್ದ ಇಂದಿರಾ ಕ್ಯಾಂಟೀನ್‌ಗಳನ್ನು ಬಿಜೆಪಿ ಸರ್ಕಾರ ನಿರ್ಲಕ್ಷಿಸಿದ ಕಾರಣದಿಂದಾಗಿ ಕೆಲವು ಮುಚ್ಚಿವೆ, ಹಲವು ಮುಚ್ಚುವ ಸ್ಥಿತಿಯಲ್ಲಿವೆ ಎಂದು ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದ್ದಾರೆ.

"ಗರೀಬಿ ಹಟಾವೋ" ಘೋಷಣೆ ಮೂಲಕ ಬಡತನ ನಿರ್ಮೂಲನಾ ಕಾರ್ಯವನ್ನು ಕಾಳಜಿಯಿಂದ ಮಾಡಿದ್ದ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಹೆಸರಿನ ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚಲು ನಾವು ಅವಕಾಶ ನೀಡುವುದಿಲ್ಲ. ಅಗತ್ಯ ಸಂಪನ್ಮೂಲ ಒದಗಿಸಿ ಅವುಗಳನ್ನು ಪುನಶ್ಚೇತನಗೊಳಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ರಾಜೀವ್ ಗಾಂಧಿ ಪುಣ್ಯಸ್ಮರಣೆ

ಇದೇ ವೇಳೆ ಪಕ್ಷದಿಂದ ಆಯ್ಕೆಯಾದ ಜಿಲ್ಲೆಯ ಶಾಸಕರಿಗೆ ಅಭಿನಂದನೆ



ಮೈಸೂರು, ಮೇ 21(ಎಂಟಿವೈ)- ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಜಯ ಗಳಿಸಿದ ಕಾಂಗ್ರೆಸ್ ಶಾಸಕರಿಗೆ ಪಕ್ಷದ ವತಿಯಿಂದ ಇಂದು ಸನ್ಮಾನಿಸಲಾಯಿತು.

ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ಸಮಿತಿಯು ಕಾಂಗ್ರೆಸ್ ಭವನದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ ಗೆಲುವು ಸಾಧಿಸಿರುವ ಪಕ್ಷದ ಶಾಸಕರಾದ ಹೆಚ್.ಡಿ. ಕೋಟೆಯ ಅನಿಲ್ ಚಿಕ್ಕಮಾದು, ಮೈಸೂರಿನ ಚಾಮರಾಜ ಕ್ಷೇತ್ರದ ಕೆ.ಹರೀಶ್‌ಗೌಡ, ಕೆ.ಆರ್.ನಗರದ ಶಾಸಕ ಡಿ.ರವಿಶಂಕರ್, ನಂಜನಗೂಡು ಕ್ಷೇತ್ರದ ದರ್ಶನ್ ಧ್ರುವನಾರಾಯಣ್ ಹಾಗೂ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರನ್ನು ಗೌರವಿಸಲಾಯಿತು.

ಒಗ್ಗಟ್ಟಿನ ಶ್ರಮಕ್ಕೆ ಪ್ರತಿಫಲ: ಸನ್ಮಾನ ಸ್ವೀಕರಿಸಿದ ಬಳಿಕ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಕಮಿಷನ್ ದಂಧೆ ಸೇರಿದಂತೆ ದುರಾಡಳಿತದಿಂದ ರಾಜ್ಯದ ಜನ ಬೇಸತ್ತಿದ್ದರು. ಈ ಹಿಂದೆ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಜಾರಿಗೆ ತಂದಿದ್ದ ಹಲವು ಜನಪ್ರಿಯ ಯೋಜನೆಗಳ ಮಹತ್ವ ಜನರಿಗೆ ತಿಳಿದಿತ್ತು. ಇದರೊಂದಿಗೆ ಪಕ್ಷದ ಕಾರ್ಯಕರ್ತರ ಸಂಘಟಿತ ಹೋರಾಟದಿಂದಾಗಿ ಕಾಂಗ್ರೆಸ್ ಪಕ್ಷಕ್ಕೆ ಗೆಲುವು ದೊರೆತಿದೆ. ಒಗ್ಗಟ್ಟಿನ ಮಂತ್ರಕ್ಕೆ ಯಶಸ್ಸು ಸಿಕ್ಕಿದೆ. ಐದು ಬಾರಿ ಬಿಜೆಪಿ ಗೆದ್ದಿರುವ ಚಾಮರಾಜ ಕ್ಷೇತ್ರದಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಶ್ರಮ ಕಾರಣ. ಶಾಸಕನಾಗಿ ಅತ್ಯಂತ ಪ್ರಾಮಾಣಿಕತೆ ಮತ್ತು ಇಚ್ಛಾಶಕ್ತಿಯಿಂದ ಜನಸೇವೆ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ನಗರಪಾಲಿಕೆ ಚುನಾವಣೆ ಬರಲಿದ್ದು, ಹೆಚ್ಚಿನ ಜವಾಬ್ದಾರಿ ಇದೆ. ತಿಂಗಳಲ್ಲಿ ಕನಿಷ್ಠ ಎರಡು ಬಾರಿಯಾದರೂ ಕಾಂಗ್ರೆಸ್ ಭವನಕ್ಕೆ ಭೇಟಿ ನೀಡಿ ಕಾರ್ಯಕರ್ತರ ಸಮಸ್ಯೆಗಳನ್ನು ಆಲಿಸುವೆ. ನನಗೆ ಇದುವರೆಗೂ ಸಣ್ಣ ಅಧಿಕಾರವೂ ಸಿಕ್ಕಿರಲಿಲ್ಲ. ಈಗ ದೊಡ್ಡ ಅವಕಾಶ ದೊರೆತಿದೆ. ಅದನ್ನು ಜನರ ಸೇವೆಗೆ ಬಳಕೆ ಮಾಡಿಕೊಳ್ಳುವುದಾಗಿ ಭರವಸೆ ನೀಡಿದರು.

ರಾಜೀವ್ ಗಾಂಧಿ ಪುಣ್ಯಸ್ಮರಣೆ ದಿನದಂದು ಅಭಿನಂದನೆ ಆಯೋಜನೆ ಮಾಡಿರುವುದು ಸಂತೋಷ, ನಮ್ಮ ಸೌಭಾಗ್ಯ. ರಾಜ್ಯದಲ್ಲಿ 136 ಶಾಸಕರು ಗೆಲ್ಲಲು ಕಾಂಗ್ರೆಸ್ ಕಾರ್ಯಕರ್ತರ ಕೊಡುಗೆ ಅಪಾರ. ಸಿದ್ದರಾಮಯ್ಯ ಅವರು ಮತ್ತೆ ಮುಖ್ಯಮಂತ್ರಿ ಆಗಿರುವುದು ಮೈಸೂರಿಗೆ ಹೆಮ್ಮೆ. ಇನ್ನೂ ಇಪ್ಪತ್ತು ವರ್ಷಗಳ ಕಾಲ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇರುತ್ತದೆ ಎಂದು ತಿಳಿಸಿದರು.

ತಾರತಮ್ಯ ಮಾಡದೇ ಸೇವೆ ಸಲ್ಲಿಸುವೆ: ಕೆ.ಆರ್.ನಗರ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಮಾತನಾಡಿ, ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ಅಧಿಕಾರಕ್ಕೆ ಬರಲು ಪ್ರತಿಯೊಬ್ಬರು ಕಾರಣ. ಮತದಾರರು ಇಟ್ಟಿರುವ ನಂಬಿಕೆಗೆ ಚ್ಯುತಿ ಬರದಂತೆ ಕೆಲಸ ಮಾಡುತ್ತೇನೆ. ಬಹಳ ವರ್ಷಗಳ ಬಳಿಕ ಕೆ.ಆರ್.ನಗರದಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿದೆ. ಯಾವುದೇ ಸಂದರ್ಭದಲ್ಲಿ ಜನರ ನಡುವೆ ಇದ್ದು ಕೆಲಸ ಮಾಡುತ್ತೇನೆ. ಕೆ.ಆರ್.ನಗರ ಕ್ಷೇತ್ರದಲ್ಲಿ ತಾರತಮ್ಯ ಮಾಡದೇ ಎಲ್ಲಾ ಜನರು ಸೇವೆ ಮಾಡಲು ಬದ್ಧನಾಗಿದ್ದೇನೆ ಎಂದರು.

ಜನರಿಗೆ ಕಾರ್ಯಕ್ರಮ ತಲುಪಿಸುತ್ತೇನೆ: ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, ರಾಜ್ಯಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳನ್ನು ಪ್ರತಿ ಮನೆಗೂ ತಲುಪಿಸುವ ಕೆಲಸ ಮಾಡಲಾಗುವುದು. ಜಿಲ್ಲೆಯವರೇ ಮುಖ್ಯಮಂತ್ರಿಯಾಗಿರುವ ಕಾರಣ ಹೆಚ್ಚಿನ ಅನುದಾನ ತಂದು ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಚುನಾವಣೆಯಲ್ಲಿ ನೀಡಿದ್ದ 5 ಗ್ಯಾರಂಟಿ ಯೋಜನೆಗಳ ಜಾರಿಗೆ ತಾತ್ವಿಕ ಒಪ್ಪಿಗೆ ಸಿಕ್ಕಿದೆ. ಶೀಘ್ರದಲ್ಲೇ ಆದೇಶ ಜಾರಿಯಾಗುವುದರಿಂದ ಪ್ರತಿಯೊಬ್ಬ ಬಡವನ ಮನೆಗೂ ತಲುಪಿಸಲಾಗುವುದು ಎಂದು ಹೇಳಿದರು.

ಕಾಂಗ್ರೆಸ್ ಬಗ್ಗೆ ಮತದಾರರು ಅನೇಕ ನಿರೀಕ್ಷೆ ಇಟ್ಟಿದ್ದಾರೆ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರು ಮೈಸೂರು ಭಾಗದ ಬಗ್ಗೆ ಸಾಕಷ್ಟು ಅಭಿಮಾನ ಹೊಂದಿದ್ದಾರೆ. ನಾಲ್ಕು ವರ್ಷಗಳಿಂದ ಸರಿಯಾಗಿ ಅನುದಾನ ಸಿಗದೆ ನಿರೀಕ್ಷಿತ ಪ್ರಮಾಣದಲ್ಲಿ ಕೆಲಸ ಮಾಡಲು ಸಾಧ್ಯವಾಗಿರಲಿಲ್ಲ. ಈಗ ನಮ್ಮವರೇ ಸಿಎಂ ಆಗಿರುವ ಕಾರಣ ಅನುದಾನ ತಂದು ಅಭಿವೃದ್ಧಿಪಡಿಸಲಾಗುವುದು ಎಂದು.

ಕ್ಷೇತ್ರದ ಜನರೇ ತಂದೆ-ತಾಯಿಯಾದರು: ನಂಜನಗೂಡು ಕ್ಷೇತ್ರದ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ತಂದೆ, ತಾಯಿಯನ್ನು ಕಳೆದುಕೊಂಡ ನನಗೆ ಮತದಾರರೇ ತಂದೆ-ತಾಯಿ ಆಗಿದ್ದಾರೆ. ಕ್ಷೇತ್ರದ ಜನರ ನಂಬಿಕೆ ಉಳಿಸಿಕೊಂಡು ಅಭಿವೃದ್ಧಿ ಮಾಡುತ್ತೇನೆ. ನಂಜನಗೂಡು ಕ್ಷೇತ್ರದಲ್ಲಿ ಆಗಬೇಕಿರುವ ಕೆಲಸ ಕಾರ್ಯಗಳ ಬಗ್ಗೆ ಪಟ್ಟಿ ಮಾಡಿದ್ದೇನೆ. ಹಿರಿಯರ ಸಲಹೆ ಪಡೆದು ಮುಂದುವರಿಯುತ್ತೇನೆಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಸಂಸದ ಕಾಗಲವಾಡಿ ಎಂ.ಶಿವಣ್ಣ, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷರಾದ ಕೆ.ಮರೀಗೌಡ, ಲತಾಸಿದ್ದಶೆಟ್ಟಿ, ಬಿ.ಎಂ.ರಾಮು, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಮುಖಂಡರಾದ ಸುಶೀಲಾ ಕೇಶವಮೂರ್ತಿ, ಹೆಡತಲೆ ಮಂಜುನಾಥ್, ಬಸವರಾಜ ನಾಯಕ, ಶಿವಪ್ರಸಾದ್, ತಲಕಾಡು ಮಂಜುನಾಥನ್, ಎನ್.ಆರ್. ನಾಗೇಶ್, ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಗಿರೀಶ್ ನಾಯಕ ಇನ್ನಿತರರು ಹಾಜರಿದ್ದರು.

ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿನ ಕಾರ್ಯಪ್ಪನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಕಾಂಗ್ರೆಸ್ ಕಚೇರಿವರೆಗೆ ಶಾಸಕರನ್ನು ಮೆರವಣಿಗೆ ಮೂಲಕ ಕರೆತರಲಾಯಿತು. ಕಾಂಗ್ರೆಸ್ ಬಾವುಟ ಪ್ರದರ್ಶಿಸಿ, ಸಂಭ್ರಮಾಚರಿಸಿದರು.

ಗಾವಡಗೆರೆ ಹೋಬಳಿಯಲ್ಲಿ ಭಾರೀ ಮಳೆ: ಅಪಾರ ನಷ್ಟ

• ಬೆಳೆ ನಾಶ, ಹಾರಿಹೋದ ಮನೆ ಮೇಲ್ಛಾವಣಿ • ಧರೆಗುರುಳಿದ ವಿದ್ಯುತ್ ಕಂಬ, ಮರಗಳು

ಹಿರೀಕ್ಯಾತನಹಳ್ಳಿ, ಮೇ 21– ಶನಿವಾರ ರಾತ್ರಿ ಸುರಿದ ಭಾರೀ ಗಾಳಿ ಮಳೆಗೆ ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯಲ್ಲಿ ಅಪಾರ ಹಾನಿ ಸಂಭವಿಸಿದೆ.

ಶನಿವಾರ ರಾತ್ರಿ ಸುರಿದ ಗುಡುಗು ಸಹಿತ ಭಾರೀ ಗಾಳಿ ಆಲಿಕಲ್ಲು ಮಳೆಗೆ ಹೋಬಳಿಯಾದ್ಯಂತ ಜಮೀನಿನಲ್ಲಿ ಬೆಳೆದಿದ್ದ ಬೆಳೆ ನಾಶವಾಗಿ ಮನೆ ಮೇಲ್ಛಾವಣಿಗಳು ಹಾರಿ ಹೋಗಿದ್ದು, ವಿದ್ಯುತ್ ಕಂಬಗಳು, ಬೃಹತ್ ಮರಗಳು ಧರೆಗುರುಳಿವೆ. ಕೆಲವೆಡೆ ರಸ್ತೆಗೆ ಮರಗಳು ಉರುಳಿ ಬಿದ್ದಿದ್ದು ಇದರಿಂದ ವಾಹನ ಸವಾರರು ತೊಂದರೆ ಅನುಭವಿಸುವಂತಾಯಿತು.

ತಂಬಾಕು ಬೆಳೆಗೆ ಹಾನಿ: ಭಾರೀ ಮಳೆಗೆ ರೈತರು ಕಷ್ಟಪಟ್ಟು ಬೆಳೆದಿದ್ದ ತಂಬಾಕು ಫಸಲಿಗೆ ಹಾನಿಯಾಗಿದೆ. ಅಲ್ಲದೇ ತಂಬಾಕು ಗಿಡಗಳಿಗೆ ಹಾಕಿದ್ದ ರಸಗೊಬ್ಬರ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದೆ.

ಧರೆಗುರುಳಿದ ವಿದ್ಯುತ್ ಕಂಬ, ಮರಗಳು: ಗಾಳಿಯ ರಭಸಕ್ಕೆ ಮರಗಳು ವಿದ್ಯುತ್ ತಂತಿ ಮೇಲೆ ಬಿದ್ದ ಪರಿಣಾಮ 13ಕ್ಕೂ ಹೆಚ್ಚು ಕಂಬಗಳು ಧರೆಗುರುಳಿದೆ. ಗಾವಡಗೆರೆ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ರಾತ್ರಿ ಇಡೀ ವಿದ್ಯುತ್ ವ್ಯತ್ಯಯವಾಗಿತ್ತು. ಅಲ್ಲದೇ ಹಲವೆಡೆ ಮರಗಳು ರಸ್ತೆಗೆ ಉರುಳಿವೆ.





ನರ್ಸರಿಗೆ ಹಾನಿ: ಹಿರೀಕ್ಯಾತನಹಳ್ಳಿ ಗ್ರಾಮದ ಲೋಕೇಶ್ ಮತ್ತು ಶಿವೇಗೌಡ ಎಂಬುವರಿಗೆ ಸೇರಿದ ತರಕಾರಿ ಸಸಿಗಳ ನರ್ಸರಿ ಮೇಲ್ಛಾವಣಿ ಭಾರೀ ಗಾಳಿಗೆ ಸಿಲುಕಿ ನಾಶವಾಗಿದ್ದು, ಲಕ್ಷಾಂತರ ರೂ. ಖರ್ಚು ಮಾಡಿ ನಾಡಿ ಮಾಡಲು ಸಿದ್ಧಪಡಿಸಿದ್ದ ತರಕಾರಿ ಸಸಿಗಳು ನೀರು ಪಾಲಾಗಿದೆ.

ಮನೆಗಳಿಗೆ ಹಾನಿ: ಭಾರೀ ಗಾಳಿ ಮಳೆಗೆ ಇಲ್ಲಿನ ಮೈಲಾಂಬೂರು ಗ್ರಾಮದ ಶಾಂತಮ್ಮ ಮತ್ತು ಲತಾ ಸುಂದರ ಎಂಬುವರ ಮನೆಗಳ ಮೇಲ್ಛಾವಣಿ (ಕಲ್ನಾರ್ ಶೀಟ್) ಹಾರಿ ಹೋಗಿದ್ದು, ಮನೆಯಲ್ಲಿದ್ದ ದವಸ ಧಾನ್ಯ ಸೇರಿದಂತೆ ದಿನಬಳಕೆಯ ವಸ್ತುಗಳು ವಸ್ತುಗಳು ನೀರು ಪಾಲಾಗಿದೆ. ಅಲ್ಲದೇ ಹಿರೀಕ್ಯಾತನಹಳ್ಳಿ ಗ್ರಾಮದ ಸುರೇಶ್, ರವಿ, ಸುಜಾತ, ಕೆರಗಾರಕೊಪ್ಪಲ್ಲಿನ ಈಶ್ವರಚಾರಿ, ಶಿಲ್ಪಾಚಾರಿ, ಹೊನ್ನೇನಹಳ್ಳಿ ಗ್ರಾಮದ ಮಣಿಯಮ್ಮ ಎಂಬುವರ ಮನೆಗಳಿಗೂ ಹಾನಿಯಾಗಿದ್ದು, ಸಂತ್ರಸ್ಥ ನಿವಾಸಿಗಳು ರಾತ್ರಿ ಇಡೀ ಮಳೆಯಲ್ಲೇ ಕಾಲ ಕಳೆದಿದ್ದಾರೆ. ನಂಜಾಪುರ ಗ್ರಾಮದ ಗಿರೀಶ್ ಎಂಬುವರ ಜಮೀನಿನಲ್ಲಿದ್ದ ತೆಂಗಿನ ಮರಗಳು ಸಹ ನೆರಕುರುಳಿವೆ.

ಒಟ್ಟಾರೆ ಗಾವಡಗೆರೆ ಹೋಬಳಿಯಾದ್ಯಂತ ಶನಿವಾರ ರಾತ್ರಿ ಸುರಿದ ಮಳೆಗೆ ಅಪಾರ ಹಾನಿ ಸಂಭವಿಸಿ, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ.

ಕೊಳೆತ ಸ್ಥಿತಿಯಲ್ಲಿ ಅಪರಿಚಿತ ಶವ ಪತ್ತೆ

ಮೈಸೂರು, ಮೇ 21(ಸಿಎನ್)– ವರುಣ ಕ್ಷೇತ್ರ ವ್ಯಾಪ್ತಿಯ ಗಿರಿಬೆಟ್ಟದಕೆರೆ ಕೋಡಿಬಿದ್ದ ಪ್ರದೇಶದಲ್ಲಿ ಕೊಳೆತ ಸ್ಥಿತಿಯಲ್ಲಿ ಶವವೊಂದು ಪತ್ತೆಯಾಗಿದೆ.

ಶವದ ಕಾಲು ಹಾಗೂ ಕೈಗಳನ್ನು ಹಗ್ಗದಿಂದ ಕಟ್ಟಿ ಮಲಗಿಸಿ ಒಂದು ಕಲ್ಲು ಕಂಬದ ಮೇಲೆ ಕಬ್ಬಿಣದ ಜಾಲರಿಯನ್ನು ಸುತ್ತಿ ಹಗ್ಗ ಹಾಗೂ ತಂತಿಯಿಂದ ಬಿಗಿದಿರುವಂತೆ ಕಂಡುಬಂದಿದ್ದು, ಮೇಲ್ನೋಟಕ್ಕೆ ಅಪರಿಚಿತರು ಕೊಲೆಗೈದು ಸಾಕ್ಷಿನಾಶಕ್ಕೆ ಯತ್ನಿಸಿರುವ ಶಂಕೆ ವ್ಯಕ್ತವಾಗಿದೆ. ಪ್ರಕರಣ ಸಂಬಂಧ ಪೊಲೀಸರು ತನಿಖೆ ಕೈಗೊಂಡು ವ್ಯಕ್ತಿಯ ಗುರುತು ಪತ್ತೆಗಾಗಿ ತನಿಖೆ ಕೈಗೊಂಡಿದ್ದಾರೆ.

ಈ ಸಂಬಂಧ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರು ಅಭಿವೃದ್ಧಿಗೆ ಶ್ರಮಿಸುತ್ತೇನೆ: ಹರೀಶ್‌ಗೌಡ

ಹಿರೀಕ್ಯಾತನಹಳ್ಳಿ, ಮೇ 21– ಹುಣಸೂರು ತಾಲೂಕಿನ ಗಾವಡಗೆರೆ ಶ್ರೀಗುರುಲಿಂಗ ಜಂಗಮ ಮಠಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಭೇಟಿ ನೀಡಿ ಮಠದ ಪೀಠಾಧ್ಯಕ್ಷ ನಟರಾಜ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

ಬಳಿಕ ಮಠದಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ತಾಲೂಕಿನ ಸರ್ವ ಜನಾಂಗದ ಮತದಾರರು ನನ್ನನ್ನು ಬೆಂಬಲಿಸಿ ಆಶೀರ್ವದಿಸಿದ್ದೀರಿ. ಈ ಋಣ ನನ್ನ ಮೇಲಿದೆ. ತಾಲೂಕಿನ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ನಿಮ್ಮ ಪ್ರೀತಿ, ವಿಶ್ವಾಸ ಉಳಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅಲ್ಲದೇ ತಾಲೂಕಿನ ಅಭಿವೃದ್ಧಿಗೆ ಶ್ರಮೀಸುತ್ತೇನೆ ಎಂದರು.



ತಾಲೂಕಿನಲ್ಲಿ ನೀರಾವರಿ ಯೋಜನೆಗಳು ಯಶಸ್ವಿ ಕಂಡಿಲ್ಲ. ಅವುಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಅಲ್ಲದೇ ಆಶ್ರಯ ನಿವೇಶನಗಳು, ರಸ್ತೆ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲಾಗುವುದು. ಗಾವಡಗೆರೆ ಹೋಬಳಿಯಲ್ಲಿ ಹೆಚ್ಚು ಮತ ನೀಡಿ ನನ್ನನ್ನು ನಮ್ಮ ತಂದೆ ರೀತಿ ಆಶೀರ್ವಾದಿಸಿದ್ದೀರಿ. ಹೀಗಾಗಿ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಈ ಭಾಗದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುವುದು ಎಂದರು.

ಈ ಸಂದರ್ಭ ಮಠದ ಆಡಳಿತಾಧಿಕಾರಿ ಶಿವರಾಜ್, ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್, ತಾಲೂಕು ಎಪಿಎಂಸಿ ಅಧ್ಯಕ್ಷ ಮುದಗನೂರು ಸುಭಾಷ್, ಜಿಪಂ ಮಾಜಿ ಸದಸ್ಯರಾದ ಎಂ.ಬಿ.ಸುರೇಂದ್ರ, ದೇವರಾಜ್, ಸಮಾಜ ಸೇವಕ ಶ್ರೀಧರ್, ವೀರಶೈವ ಮುಖಂಡ ಕೂಸಪ್ಪ, ತಾಪಂ ಮಾಜಿ ಸದಸ್ಯ ತಿಮ್ಮನಾಯಕ, ಗಾವಡಗೆರೆ ಗ್ರಾಪಂ ಮಾಜಿ ಅಧ್ಯಕ್ಷ ಹೊನ್ನಪ್ಪರಾವ್ ಕಾಳಿಂಗೆ, ಮಾಜಿ ಸದಸ್ಯ ನಾಗುಬಾಯಿ, ಮುಖಂಡರಾದ ವಕೀಲಮೂರ್ತಿ, ಪುಟ್ಟಲಿಂಗಪ್ಪ, ಹರೀಶ್, ನಾಗೇಶ್, ಹರೀಶ್, ಶಿವಕುಮಾರ್, ಮಂಜು ಹಾಗೂ ನೂರಾರು ಅಭಿಮಾನಿಗಳು, ಕಾರ್ಯಕರ್ತರು ಹಾಜರಿದ್ದರು.

ರೈಲಿಗೆ ಸಿಲುಕಿ ಅಪರಿಚಿತ ವ್ಯಕ್ತಿ ಸಾವು

ನಂಜನಗೂಡು, ಮೇ 21– ಅಪರಿಚಿತ ವ್ಯಕ್ತಿಯೋರ್ವ ಚಾಮರಾಜನಗರ–ತಿರುಪತಿ ರೈಲಿಗೆ ಸಿಲುಕಿ ಸಾವನ್ನಪ್ಪಿರುವ ಘಟನೆ ನಗರದ ರೈಲ್ವೆ ಮೇಲ್ಸೆತುವೆ ಬಳಿ ನಡೆದಿದೆ.

ಈತ ಸುಮಾರು 50ರಿಂದ 55 ವರ್ಷದವನಾಗಿದ್ದು, ಈತನ ಬಗ್ಗೆ ಯಾವುದೇ ಮಾಹಿತಿ ಪತ್ತೆಯಾಗಿಲ್ಲ. ಹೀಗಾಗಿ ಸಂಬಂಧಪಟ್ಟವರು ಇದ್ದಲ್ಲಿ ನಂಜನಗೂಡು ರೈಲ್ವೆ ಪೊಲೀಸ್ ಠಾಣೆ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.



ಬೆಟ್ಟದಪುರದ ಪೇಟೆ ಬೀದಿಯಲ್ಲಿರುವ ಶ್ರೀಪ್ರಸನ್ನ ಆಂಜನೇಯಸ್ವಾಮಿಗೆ ಶನಿವಾರ ವಿಶೇಷ ಪೂಜೆ ನೆರವೇರಿಸಲಾಯಿತು. ಈ ವೇಳೆ ಗ್ರಾಮಸ್ಥರಾದ ಆಂಜನೇಯ, ರಾಧ, ಗ್ರಾಪಂ ಮಾಜಿ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ನಾರಾಯಣ, ಅರ್ಚಕ ಮೋಹನ್ ಸೇರಿದಂತೆ ಇನ್ನಿತರರಿದ್ದರು.

ನನ್ನ ಅಭಿವೃದ್ಧಿ ಕಾರ್ಯ ಮೆಚ್ಚಿ ಜನತೆ ಆಶೀರ್ವದಿಸಿದ್ದಾರೆ

ತಿ.ನರಸೀಪುರ, ಮೇ 21– ಲೋಕೋಪಯೋಗಿ ಸಚಿವನಾಗಿದ್ದ ವೇಳೆ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದೇನೆ. ಹೀಗಾಗಿ ನನ್ನ ಅಭಿವೃದ್ಧಿ ಕಾರ್ಯ ಮೆಚ್ಚಿ ಮತದಾರರು ನನ್ನ ಕೈ ಹಿಡಿದಿದ್ದಾರೆ ಎಂದು ಶಾಸಕ ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಕೊಳತ್ತೂರು ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನನ್ನ ಅಧಿಕಾರವಧಿಯಲ್ಲಿ ಆದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಕ್ಷೇತ್ರದ ಜನತೆ ಈಗಲೂ ಮಾತನಾಡುತ್ತಿದ್ದಾರೆ. ಅಲ್ಲದೆ ಕಾಂಗ್ರೆಸ್ ಪಕ್ಷ ಚುನಾವಣೆಗೂ ಮುನ್ನ ನೀಡಿದ ಭರವಸೆಯಂತೆ ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿರು ವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ನೇತೃತ್ವದಲ್ಲಿ ಸರ್ಕಾರದ ಯೋಜನೆಗಳನ್ನು ಪ್ರತಿಯೊಬ್ಬರಿಗೂ ತಲುಪಿಸುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು.

ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಕಿತ್ತೊಗೆಯುವ ಮೂಲಕ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ರಾಜ್ಯ ಸೇರಿದಂತೆ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಜನ ಆಶೀರ್ವಾದ ಮಾಡಿದ್ದಾರೆ. ಹೀಗಾಗಿ ಗ್ರಾಮಾಭಿವೃದ್ಧಿಗೆ ಒತ್ತು ನೀಡುವ ಮೂಲಕ ಮೂಲ ಸೌಕರ್ಯ ಕಲ್ಪಿಸಲಾಗುವುದು ಎಂದರು. ಈ ವೇಳೆ ಕುಮಾರ್, ಸೋಮಣ್ಣ ಶಿವಮೂರ್ತಿ, ವಿಜಯ್ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.



ಪಿಎಚ್.ಡಿ ಪದವಿ




ಮೈಸೂರು, ಮೇ 21– ಡಾ.ಎಂ.ಕೋಮಲ ಅವರ ಮಾರ್ಗದರ್ಶನದಲ್ಲಿ ಹೆಚ್.ಆರ್. ದಿವ್ಯಶ್ರೀ ಅವರು ಮಾನವ ಅಭಿವೃದ್ಧಿ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಜನಸಾಮಾನ್ಯರಿಗೆ ಸರ್ಕಾರಿ ಸೌಲಭ್ಯ ತಲುಪಿಸಿ

ಕಾರ್ಯಕರ್ತರಿಗೆ ನೂತನ ಸಚಿವ ಸತೀಶ್ ಜಾರಕಿಹೊಳಿ ಕರೆ

ತಿ.ನರಸೀಪುರ, ಮೇ 21– ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿರುವುದರಿಂದ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಜನಸಾಮಾನ್ಯರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸಲು ಮುಂದಾಗಬೇಕು ಎಂದು ನೂತನ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ತಾಲೂಕಿನ ಸೋಸಲೆ ಹೋಬಳಿ ಗದ್ದೆಮೊಳೆ ಗ್ರಾಮದ ನಿವಾಸಿ, ತಾಲೂಕು ನಾಯಕರ ಸಂಘದ ಮಾಜಿ ಅಧ್ಯಕ್ಷ ಹೊನ್ನನಾಯಕ ಹಾಗೂ ಇತರರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಸರ್ಕಾರದ ಬೆಲೆ ಏರಿಕೆ, ದುರಾಡಳಿತದಿಂದ ಬೇಸತ್ತಿದ್ದ ರಾಜ್ಯದ ಜನತೆ ಕಾಂಗ್ರೆಸ್ ಪಕ್ಷ ಬೆಂಬಲಿಸುವ ಮೂಲಕ ಅಧಿಕಾರ ನೀಡಿದ್ದಾರೆ. ಹೀಗಾಗಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಸರ್ಕಾರದ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸಲು ಕಾರ್ಯಪ್ರವೃತ್ತರಾಗಬೇಕು ಎಂದರು.



ರಾಜ್ಯದಲ್ಲಿ ಬಡವರು ಮತ್ತು ಮಧ್ಯಮ ವರ್ಗದ ಜನಪರ ಸರ್ಕಾರವನ್ನು ಅಧಿಕಾರಕ್ಕೆ ತರಬೇಕೆಂಬ ಉದ್ದೇಶದಿಂದ ಅಹಿಂದಾ ಹಾಗೂ ಮೇಲ್ವರ್ಗದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಜನಾದೇಶ ನೀಡಿದ್ದಾರೆ. ಈ ಹಿಂದೆ 5 ವರ್ಷಗಳ ಕಾಲ ಯಶಸ್ವಿಯಾಗಿ ಆಡಳಿತ ನಡೆಸಿದ್ದ ಸಿದ್ದರಾಮಯ್ಯನವರು 2ನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ. ಅವರೊಂದಿಗೆ ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಸಹ ಅಧಿಕಾರ ಸ್ವೀಕರಿಸಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಹೆಚ್ಚು ಗಮನ ಕೊಡುವ ಮೂಲಕ ಚುನಾವಣೆ ಸಂದರ್ಭ ನೀಡಿದ್ದ ಗ್ಯಾರಂಟಿಗಳು ಸೇರಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿ ಬಡವರು, ಹಿಂದುಳಿದವರ ಹಿತ ಕಾಯಲಾಗುವುದು ಎಂದರು.

ಈ ವೇಳೆ ಎಸ್‌ಸಿ, ಎಸ್‌ಟಿ ಹಿತರಕ್ಷಣಾ ಸಮಿತಿ ನಿರ್ದೇಶಕ ಸೋಸಲೆ ಮಹದೇವಸ್ವಾಮಿ, ತಾಲೂಕು ನಾಯಕರ ಸಂಘದ ಮಾಜಿ ಕಾರ್ಯದರ್ಶಿ ಆಲಗೂಡು ನಾಗರಾಜು ಸೇರಿದಂತೆ ಇನ್ನಿತರರಿದ್ದರು.

ಭಾರೀ ಗಾಳಿ ಮಳೆ: ಹುಣಸೂರಲ್ಲಿ ಅಪಾರ ಹಾನಿ





ಹುಣಸೂರು, ಮೇ 21– ಭಾನುವಾರ ಸುರಿದ ಭಾರೀ ಗಾಳಿ ಮಳೆಗೆ ತಾಲೂಕಿನಲ್ಲಿ ಅಪಾರ ನಷ್ಟ ಸಂಭವಿಸಿದೆ.

ತಾಲೂಕಿನ ಹನಗೋಡು, ಕಿರಂಗೂರು, ಹರಳಹಳ್ಳಿ, ಹೊನ್ನೇನಹಳ್ಳಿ, ಬೀರನಹಳ್ಳಿ, ಕೂಡ್ಲೂರು ಸೇರಿದಂತೆ ಇನ್ನಿತರ ಗ್ರಾಮಗಳಲ್ಲಿ ಗಾಳಿ ಮಳೆಗೆ ಮನೆ ಮೇಲ್ಛಾವಣಿ ಹಾರಿ ಹೋಗಿದ್ದು, ಕೃಷಿ ಜಮೀನುಗಳಿಗೆ ನೀರು ನುಗ್ಗಿದೆ. ಅಲ್ಲದೇ ರಾಷ್ಟ್ರೀಯ ಹೆದ್ದಾರಿ 275ರ ಬಿಳಿಕೆರೆ, ಮನುಗನಹಳ್ಳಿ ಗ್ರಾಮಗಳ ಬಳಿ ಭಾರೀ ಗಾತ್ರದ ಮರಗಳು ರಸ್ತೆಗೆ ಉರುಳಿ ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಇನ್ನೂ ಒಂದು ಗಂಟೆಗೂ ಹೆಚ್ಚು ಕಾಲ ಸುರಿದ ಮಳೆಯಿಂದಾಗಿ ಜಮೀನುಗಳಿಗೆ ನೀರು ನುಗ್ಗಿ ಹತ್ತಾರು ಎಕರೆಯಲ್ಲಿ ನಾಟಿ ಮಾಡಿದ್ದ ತಂಬಾಕು, ಶುಂಠಿ ಮತ್ತು ಜೋಳ ಸೇರಿದಂತೆ ಮತ್ತಿತರ ಬೆಳೆಗಳು ನೀರಿನ ರಭಸಕ್ಕೆ ಕೊಚ್ಚಿ ಹೋಗಿದೆ.

ತಾಲೂಕಿನ ಕಿರಂಗೂರು ಗ್ರಾಮದಲ್ಲಿ ಗಾಳಿ ಮಳೆಗೆ ವಿದ್ಯುತ್ ಕಂಬ ಮುರಿದು ಬಿದ್ದಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ. ಕಿರಂಗೂರು ಮಾದಹಳ್ಳಿ ಕೆರೆ ರಸ್ತೆಯಲ್ಲಿ ಮಂಡಿಯುದ್ದ ನೀರು ನಿಂತಿದ್ದರಿಂದ ಸಾರ್ವಜನಿಕರು ಪರದಾಡುವಂತಾಯಿತು.

'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಶಾಸಕ ಜಿ.ಡಿ.ಹರೀಶ್‌ಗೌಡ, ತಹಸೀಲ್ದಾರ್, ತಾಪಂ ಇಓ ಹಾಗೂ ಪಿಡಬ್ಲ್ಯೂಡಿ ಅಧಿಕಾರಿಗಳಿಗೆ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ವರದಿ ನೀಡುವಂತೆ ತಿಳಿಸಿದ್ದೇನೆ. ನಾನು ನಾಳೆ ನಡೆಯುವ ಮೊದಲ ವಿಧಾನಸಭಾ ಅಧಿವೇಶನದಲ್ಲಿ ಭಾಗವಹಿಸುತ್ತಿದ್ದು, ಅಧಿವೇಶನ ಮುಗಿದ ಬಳಿಕ ಹಾನಿಗೊಳಗಾದ ಪ್ರದೇಶಕ್ಕೆ ಅಧಿಕಾರಿಗಳೊಂದಿಗೆ ತೆರಳಿ ಪರಿಶೀಲನೆ ನಡೆಸಿ ಸರ್ಕಾರದಿಂದ ಪರಿಹಾರ ದೊರಕಿಸಿಕೊಡಲು ಪ್ರಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಮಳೆಗೆ ಮೂಗೂರು ಬಳಿ ಬಾಳೆ ಹಾಳು



ಮುಗೂರು, ಮೇ 21– ಶನಿವಾರ ರಾತ್ರಿ ಸುರಿದ ಭಾರೀ ಗಾಳಿ ಮಳೆಗೆ ಲಕ್ಷಾಂತರ ರೂ. ಮೌಲ್ಯದ ಬಾಳೆ ಫಸಲು ನಾಶವಾಗಿರುವ ಘಟನೆ ಇಲ್ಲಿಗೆ ಸಮೀಪದ ಮೂಗೂರು ಮೋಳೆ ಗ್ರಾಮದಲ್ಲಿ ನಡೆದಿದೆ.


ಗ್ರಾಮದ ನಿವಾಸಿ ಬಸವರಾಜು ಎಂಬುವರಿಗೆ ಸೇರಿದ 2 ಎಕರೆ ಪ್ರದೇಶದಲ್ಲಿ ಬೆಳೆದಿದ್ದ ನೇಂದ್ರ ಬಾಳೆ ಫಸಲು ಭಾರೀ ಗಾಳಿ ಮಳೆಗೆ ನಾಶವಾಗಿ, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ರೈತ ಬಸವರಾಜು ಮಾತನಾಡಿ ಸಾಲ ಮಾಡಿ ಬೆಳೆದ ಬೆಳೆ ಮಳೆಯಿಂದಾಗಿ ನಾಶವಾಗಿದೆ. ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಸೂಕ್ತ ಪರಿಹಾರ ಕಲ್ಪಿಸಬೇಕೆಂದು ಮನವಿ ಮಾಡಿದ್ದಾರೆ.

ಹೆಚ್.ಡಿ.ಕೋಟೆ: ಭಾರೀ ಮಳೆಗೆ 20 ಎಕರೆ ಬಾಳೆ ಫಸಲು ನೆಲಸಮ

ಮನೆ, ಕಾರಿನ ಮೇಲೆ ಬಿದ್ದ ಮರ: ಜಖಂ

ಹೆಚ್.ಡಿ.ಕೋಟೆ, ಮೇ 21– ಭಾರೀ ಗಾಳಿ ಮಳೆಗೆ ತಾಲೂಕಿನ ವಿವಿಧೆಡೆ 20 ಎಕರೆ ಪ್ರದೇಶದಲ್ಲಿ ಬೆಳೆಯಲಾಗಿದ್ದ ಬಾಳೆ ಫಸಲು ನಾಶವಾಗಿರುವ ಘಟನೆ ಭಾನುವಾರ ನಡೆದಿದೆ.

ತಾಲೂಕಿನ ಸವ್ವೆ ಗ್ರಾಪಂ ವ್ಯಾಪ್ತಿಯ ಇಟ್ನ ಕಾಲೋನಿ, ಮುರುಗನಹಳ್ಳಿ, ದೇವರಾಜನಗರ, ಪಡುಕೋಟೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ 20 ಎಕರೆಯಲ್ಲಿ ಬೆಳೆದಿದ್ದ ಬಾಳೆ ಫಸಲು ನಾಶವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಇನ್ನು ಬಾಳೆ ಫಸಲು ಕಳೆದುಕೊಂಡ ರೈತರಾದ ಬೆಟ್ಟನಾಯಕ, ಚೆನ್ನ ನಾಯಕ, ಚಿಕ್ಕನಾಯಕ, ಪುಟ್ಟ ಸಿದ್ದನಾಯಕ, ನಿಂಗನಾಯಕ, ಶಿವರಾಮ, ಈಶ್ವರ ನಾಯಕ ಗಾಳಿ ಮಳೆಗೆ ಸಾಲ ಮಾಡಿ ಕಷ್ಟಪಟ್ಟು ಬೆಳೆದ ಬಾಳೆ ಫಸಲು ನಾಶವಾಗಿದೆ. ಅಲ್ಲದೇ ರೇಷ್ಮೆಗೂಡಿಗೆ ನಿರ್ಮಿಸಲಾಗಿದ್ದ ಶೆಡ್‌ನ ಮೇಲ್ಛಾವಣಿ ಗಾಳಿಗೆ ಹಾರಿಹೋಗಿ ರೇಷ್ಮೆ ಹುಳುಗಳು ಸಾವನ್ನಪ್ಪಿದೆ.





ಹೀಗಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದ್ದು, ಅಧಿಕಾರಿಗಳು ಸರ್ಕಾರದಿಂದ ಸೂಕ್ತ ಪರಿಹಾರ ದೊರಕಿಸಿ ಕೊಡುವ ಮೂಲಕ ಸಂಕಷ್ಟದಲ್ಲಿರುವ ರೈತರ ನೆರವಿಗೆ ನಿಲ್ಲಬೇಕು ಎಂದು ಮನವಿ ಮಾಡಿದರು.

ಇನ್ನು ಪಟ್ಟಣದ ವಿಶ್ವನಾಥ ಕಾಲೋನಿ, ಹನುಮಂತನಗರ, ಸಿದ್ದಪ್ಪಾಜಿ ರಸ್ತೆ, ಮುಸ್ಲಿಂ ಬ್ಲಾಕ್, ಸಿದ್ಧಾರ್ಥ ಕಾಲೇಜ್ ರಸ್ತೆಗಳಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರುಳಿದೆ. ವಿಶ್ವನಾಥ ಕಾಲೋನಿಯಲ್ಲಿ ಕಾರಿನ ಮೇಲೆ ಮರ ಬಿದ್ದು ಕಾರು ಜಖಂಗೊಂಡಿದೆ. ಇನ್ನು ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿರುವ ಮರ ಕಬಿನಿ ಟ್ರಾವೆಲ್ಸ್ ಮಾಲೀಕ ಮಣಿಕಂಠ ಅವರ ಮನೆ ಮೇಲೆ ಬಿದ್ದಿದ್ದು ಮನೆ ಜಖಂಗೊಂಡಿದ್ದು, ಮರ ತೆರವುಗೊಳಿಸುವಂತೆ ಮನವಿ ಮಾಡಿದ್ದಾರೆ.

ಬಿಜೆಪಿ ಸರ್ಕಾರದ ಅವಧಿಯ ಎಲ್ಲಾ ಹಗರಣಗಳ ತನಿಖೆ



ಬೆಂಗಳೂರು, ಮೇ 21– ಬಿಜೆಪಿ ಸರ್ಕಾರದ ಅವಧಿಯಲ್ಲಿನ ಎಲ್ಲ ಹಗರಣಗಳನ್ನು ತನಿಖೆ ಮಾಡಿಸುತ್ತೇವೆ. ಎಲ್ಲ ಇಲಾಖೆಗಳ ಹಗರಣದ ಬಗ್ಗೆ ತನಿಖೆ ಮಾಡಿಸುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನ ಬಳಿ ಹೇಳಿದ್ದಾರೆ ಎಂದು ಸಚಿವ ಎಂ.ಬಿ ಪಾಟೀಲ್ ಹೇಳಿದ್ದಾರೆ.

ಪಿಎಸ್ಐ ಹಗರಣ, ನೀರಾವರಿ ಇಲಾಖೆ, ಗುತ್ತಿಗೆದಾರರ ಕೇಸ್, ಎಲ್ಲ ಕೇಸ್‌ಗಳ ತನಿಖೆ ಮಾಡಿಸುತ್ತೇವೆ. ಅಧಿಕಾರಿಗಳು, ಸಚಿವರೇ ಇರಲಿ ತನಿಖೆ ನಡೆಸಿ ಶಿಕ್ಷೆ ಕೊಡಿಸುತ್ತೇವೆ ಎಂದು ಖಡಕ್ ಸೂಚನೆ ನೀಡಿದರು. ಈ ಕುರಿತು ಖಾಸಗಿ ಚಾನಲ್ ನೊಂದಿಗೆ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರು, ನಮ್ಮ ಮುಂದೆ ಖಾಸಗಿಯಾಗಿ ಮಾತನಾಡುತ್ತಾ ಹೇಳಿದ್ದಾರೆ, ಎಲ್ಲೆಲ್ಲಿ ಭ್ರಷ್ಟಾಚಾರ ಆಗಿದೆಯೋ, ಎಲ್ಲೆಲ್ಲಿ ಅಕ್ರಮಗಳು ಆಗಿದೆಯೋ, ನೀರಾವರಿ ಇರಬಹುದು, ಪಿಎಸ್ಐ ಸ್ಕ್ಯಾಮ್ ಇರಬಹುದು ಮತ್ತೊಂದು ಇರಬಹುದು ಎಲ್ಲವನ್ನು ತನಿಖೆ ಮಾಡಿಸುತ್ತೇನೆ. ಯಾರು ತಪ್ಪಿತಸ್ಥರಿದ್ದಾರೆ ಅವರು ಅಧಿಕಾರಿಗಳಾಗಿರಲೀ, ಸಚಿವರಾಗಿರಲೀ ಯಾರೇ ಇರಲಿ ಅವರನ್ನು ಶಿಕ್ಷೆಗೆ ಒಳಪಡಿಸಿ, ಈ ವ್ಯವಸ್ಥೆ ಯನ್ನು ಬದಲಾವಣೆ ಮಾಡ ಬೇಕು ಎಂದು ನನಗೆ ಹೇಳಿದ್ದಾರೆ ಎಂದು ತಿಳಿಸಿದರು.

ಸಿದ್ದರಾಮಯ್ಯನವರ ಬದ್ಧತೆ ಮತ್ತು ಅವರ ಕಾಳಜಿ ರಾಜ್ಯದ ಬಗ್ಗೆ ಇದೆ. ತಮ್ಮ ಮನೆಯನ್ನು, ಹೇಗೆ ನಡೆಸುತ್ತಾರೋ ಹಾಗೇ ರಾಜ್ಯವನ್ನು ನಡೆಸುತ್ತಾರೆ. 40% ಕಮಿಷನ್ ಆರೋಪ ನಾವು ಮಾಡಿದ್ದಲ್ಲ, ಕಾಂಟ್ರಾಕ್ಟರ್ ಅಸೋಸಿಯೇಷನ್ ಮಾಡಿದ್ದು. ಪ್ರಧಾನಿಯವರಿಗೆ 40% ಕಮಿಷನ್ ಪತ್ರ ಬರೆದಿದ್ದರು, ಎರಡು ವರ್ಷವಾದರೂ ಏನು ಮಾಡಲಿಲ್ಲ. ಕಾಂಟ್ರಾಕ್ಟರ್ ಆತ್ಮಹತ್ಯೆ ಆಯಿತು, ಮುಖ್ಯಮಂತ್ರಿಗಳು ಸೇರಿದಂತೆ ಸಾಕ್ಷಿ ಏನಿದೆ ಅಂತ ಕೇಳುತ್ತಿದ್ದರು. ಮಾಡಾಳು ಕೇಸ್‌ನಲ್ಲಿ ಸಾಕ್ಷಿ ಸಿಕ್ಕಿದೆಯಲ್ಲ, ಹೀಗಾಗಿ ಇದನ್ನ ನಾವು ಲಾಜಿಕ್ ಎಂಡ್‌ಗೆ ಒಯ್ಯುತ್ತೇವೆ ಎಂದು ತಿಳಿಸಿದ್ದಾರೆ.

ತಪ್ಪಿತಸ್ಥರ ವಿರುದ್ಧ ಶಿಕ್ಷೆ ಆಗಬೇಕು: ಕಳೆದ ಸರ್ಕಾರದಲ್ಲಿ ಸಾಕಷ್ಟು ಭ್ರಷ್ಟಾಚಾರ ಆಗಿರುವುದು ಸತ್ಯ. ಎಲ್ಲ ಇಲಾಖೆಗಳ ಭ್ರಷ್ಟಾಚಾರ ಬಗ್ಗೆ ತನಿಖೆ ಆಗಬೇಕಿದೆ. ಸೂಕ್ತ ತನಿಖೆ ಮಾಡಿಸಿ ತಪ್ಪಿತಸ್ಥರ ವಿರುದ್ಧ ಶಿಕ್ಷೆ ಆಗಬೇಕು. ತನಿಖಾ ಆಯೋಗ ರಚನೆ ಮಾಡಬೇಕೆಂದು ಒತ್ತಾಯಿಸುತ್ತೇನೆ ಎಂದು ಬೆಂಗಳೂರಿನಲ್ಲಿ ಕಾಂಗ್ರೆಸ್ ಶಾಸಕ ಬಸವರಾಜ ರಾಯರೆಡ್ಡಿ ಹೇಳಿದ್ದಾರೆ. ಇನ್ನು ಬಿಜೆಪಿ ಸರ್ಕಾರ ಅವಧಿ ಯಲ್ಲಿನ 40% ಕಮಿಷನ್, ಪಿಎಸ್ಐ ಸ್ಕ್ಯಾಮ್ ಅನ್ನು ತನಿಖೆ ಮಾಡಿಸುವಂತೆ ಸಾಮಾಜಿಕ ಜಾಲ ತಾಣದಲ್ಲಿ ನೆಟ್ಟಿಗರು ಆಗ್ರಹಿಸುತ್ತಿದ್ದಾರೆ.

ಇಂದಿನಿಂದ 3 ದಿನ ವಿಧಾನಸಭೆ ವಿಶೇಷ ಅಧಿವೇಶನ: ಶಾಸಕರ ಪ್ರಮಾಣವಚನ

ಬೆಂಗಳೂರು, ಮೇ 21– ನಾಳೆಯಿಂದ ಮೇ 24ರವರಗೆ ಮೂರು ದಿನಗಳ ಕಾಲ ವಿಶೇಷ ವಿಧಾನಸಭೆ ಅಧಿವೇಶನ ಕರೆಯಲಾಗಿದೆ.

ಈ ವೇಳೆ ಶಾಸಕರಾಗಿ ಆಯ್ಕೆಯಾಗಿರುವವರ ಪ್ರಮಾಣವಚನ ಕಾರ್ಯಕ್ರಮ ನಡೆಯಲಿದ್ದು, ಇದಕ್ಕಾಗಿ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ನೂತನ ಶಾಸಕರ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮಕ್ಕಾಗಿ ಕರೆಯಲಾಗಿರುವ ಈ ಅಧಿವೇಶನದಲ್ಲಿ ಹಂಗಾಮಿ ಸ್ಪೀಕರ್ ಆಗಿ ಹಿರಿಯ ಶಾಸಕ ಆರ್.ವಿ. ದೇಶಪಾಂಡೆ ಅವರನ್ನು ಆಯ್ಕೆ ಮಾಡಲಾಗಿದೆ. ಮೂರು ದಿನಗಳ ಕಾಲ ಶಾಸಕರು ವಿಧಾನಸಭೆಯ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ವಿಚಾರವಾದಿ ಎನಿಸಿಕೊಳ್ಳುವ ಸಿದ್ದು ದೇವರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರಾ?:



ಬೆಂಗಳೂರು, ಮೇ 21– ನಟ, ಸಾಮಾಜಿಕ ಹೋರಾಟಗಾರ ಚೇತನ್ ಅವರು ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಗುಡುಗಿದ್ದಾರೆ. ರಾಜ್ಯದ 24ನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ವೇಳೆ ಸಿದ್ದರಾಮಯ್ಯ ಅವರು, ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದರು.

ಕಳೆದ ಬಾರಿ ಸಿದ್ದರಾಮಯ್ಯ ಅವರು ಸತ್ಯದ ಹೆಸರಲ್ಲಿ ಅಧಿಕಾರ ಸ್ವೀಕಾರ ಮಾಡಿದ್ದರು. ಆದರೆ, ಈ ಬಾರಿ ದೇವರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಚೇತನ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಾಲತಾಣ ಟ್ವಿಟರ್‌ನಲ್ಲಿ ಟ್ವೀಟ್ ಮಾಡಿರುವ ಅವರು, 'ವಿಚಾರವಾದಿ' ಎಂದು ಕರೆಸಿಕೊಳ್ಳುವ ಸಿದ್ದರಾಮಯ್ಯ ಅವರು ಕರ್ನಾಟಕದ ಸಿಎಂ ಆಗಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರಾ? ಯಾವ/ಯಾರು ದೇವರು? ದೇವರು ಎಲ್ಲಿದ್ದಾನೆ/ಳೆ/ರೆ? ಇದು ನಿರ್ದಿಷ್ಟವಾದ ಸೈದ್ಧಾಂತಿಕ ಆರಂಭವಲ್ಲ ಎಂದು ಹೇಳಿದ್ದಾರೆ.

ರಾಜೀವ್ ಗಾಂಧಿ 32ನೇ ಪುಣ್ಯತಿಥಿ

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಸೇರಿ ನಾಯಕರಿಂದ ಪುಷ್ಪನಮನ

ಬೆಂಗಳೂರು, ಮೇ 21– ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ 32ನೇ ಪುಣ್ಯತಿಥಿ ಅಂಗವಾಗಿ ಬೆಂಗಳೂರಿನಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ನಾಯಕರು ಮಾಜಿ ಪ್ರಧಾನಿಗೆ ಪುಷ್ಪನಮನ ಸಲ್ಲಿಸಿದರು.

ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ರಾಜೀವ್ ಗಾಂಧಿ ಅವರ ಭಾವ ಚಿತ್ರಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ಸೇರಿದಂತೆ ಹಲವು ನಾಯಕರು ನಮನ ಸಲ್ಲಿಸಿದರು.

ಇದೇ ವಿಚಾರವಾಗಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ಆಧುನಿಕ ಭಾರತ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದ, ಭಾರತದ ಡಿಜಿಟಲ್ ಕ್ರಾಂತಿಯ ಹರಿಕಾರ, ದೇಶದ ಐಕ್ಯತೆ – ಸಮಗ್ರತೆಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಮಾಜಿ ಪ್ರಧಾನಿ, ಭಾರತ ರತ್ನ 'ರಾಜೀವ್ ಗಾಂಧಿ' ಅವರ ಪುಣ್ಯ ಸ್ಮರಣೆಯಂದು ಅವರನ್ನು ಗೌರವ, ಕೃತಜ್ಞತಾ ಪೂರ್ವಕವಾಗಿ ನೆನೆಯುತ್ತೇವೆ ಎಂದು ಟ್ವೀಟ್ ಮಾಡಿದೆ.











Head Mistress	Master degree with B.Ed and 5 years of experience
High School	Social Science, English Mathematics Master degree with B.Ed
PET (Male or Female	B.Ped or M.Ped







